# ಕರ್ನಾಟಕ ವಿಧಾನ ಪರಿಷತ್ತು

**ದಿನಾಂಕ:14 ನೇ ಡಿಸೆಂಬರ್ 2018**
**ಶುಕ್ರವಾರ**

## ವಿಷಯಾನುಕ್ರಮಣಿಕೆ

**1. ಪ್ರಶ್ನೋತ್ತರ ಕಲಾಪದಲ್ಲಿ ಪ್ರತಿ ಪ್ರಶ್ನೆಗೂ ಇಷ್ಟು ಸಮಯ ಎಂದು ನಿಗದಿಪಡಿಸಬೇಕೆನ್ನುವ ಬಗ್ಗೆ.**
ಶ್ರೀ ಕೃಷ್ಣಾ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)

**2. ಪ್ರಶ್ನೋತ್ತರಗಳು**

*ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು*

665 – ಸೇತುವೆ ದುರಸ್ತಿಯ ಕುರಿತು
– ಶ್ರೀ ಕೆ.ಹರೀಶ್ ಕುಮಾರ್

718 – ಬೆಂಗಳೂರು ಗಾಲ್ಫ್ ಕ್ಲಬ್‌ನ ಗುತ್ತಿಗೆ ಕರಾರುಗಳಿಂದಾದ ನಷ್ಟದ ಕುರಿತು
– ಶ್ರೀ ಟಿ.ಎ.ಶರವಣ

719 – ಬೀದರ್ ಜಿಲ್ಲೆಯ ಬೀದರ್ ತಾಲ್ಲೂಕಿನಲ್ಲಿನ SCP-TSP ಕಾಮಗಾರಿ ಬಗ್ಗೆ.
– ಶ್ರೀ ಅರವಿಂದ ಕುಮಾರ್ ಅರಳಿ

730 – ರಾಜ್ಯದಲ್ಲಿ ಪ್ರಕೃತಿ ವಿಕೋಪದಿಂದ ಹಾಳಾಗಿರುವ ರಸ್ತೆಗಳ ದುರಸ್ತಿ ಹಾಗೂ ನಿರ್ಮಾಣ
– ಡಾ: ತೇಜಸ್ವಿನಿ ಗೌಡ

660 – ಮೈಸೂರು–ಬೆಂಗಳೂರು ರಾಷ್ಟ್ರೀಯ ರಸ್ತೆ ಹೆದ್ದಾರಿಯ ಅಗಲೀಕರಣದ ಬಗ್ಗೆ
– ಶ್ರೀ ಕೆ.ಟಿ.ಶ್ರೀಕಂಠೇಗೌಡ

667 – ಏಕರೂಪದಲ್ಲಿ ಪೋಲೀಸರ ನೇಮಕಾತಿ
– ಶ್ರೀ ಆರ್.ಧರ್ಮಸೇನ

615 – ಬೆಂಗಳೂರು–ಮಾಗಡಿ ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿ ಬಗ್ಗೆ
– ಶ್ರೀ ಹೆಚ್.ಎಂ.ರೇವಣ್ಣ

722 – ಸರ್ಜಾಪುರ (ಬೆಂಗಳೂರು) ರಸ್ತೆ ವಿಸ್ತರಣೆ ಯೋಜನೆಯ ಬಗ್ಗೆ
– ಶ್ರೀ ರಿಜ್ವಾನ್ ಅರ್ಷದ್

692 – ಬೆಂಗಳೂರು ಮೆಟ್ರೋ ನೌಕರರ ಮುಂಬಡ್ತಿಯ ಬಗ್ಗೆ
– ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ

19 – ಔರಾದ್ಕರ್ ವರದಿ ಜಾರಿಯಾಗುವ ಕುರಿತು
– ಶ್ರೀ ಎಂ.ಕೆ.ಪ್ರಾಣೇಶ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

595 – ಅನ್ನಭಾಗ್ಯ ಯೋಜನೆಯಲ್ಲಿ ಅವ್ಯವಹಾರ
– ಶ್ರೀ ರಘುನಾಥ ರಾವ್ ಮಲ್ಕಾಪೂರೆ

652 – ವಕ್ಫ್ ಆಸ್ತಿಯ ಅಕ್ರಮಗಳ ತನಿಖಾ ವರದಿ ಮಂಡಿಸುವ ಕುರಿತು
– ಡಾ॥ ವೈ.ಎ.ನಾರಾಯಣ ಸ್ವಾಮಿ

702 – ಕ್ರೀಡಾ ಇಲಾಖೆಯ ಅನುದಾನ ಮತ್ತು ಸಿಬ್ಬಂದಿಗಳ ವೃಂದ ಮತ್ತು ನೇಮಕಾತಿ ಕುರಿತು
– ಶ್ರೀ ಅರುಣ ಶಹಾಪುರ

723 – ಬೆಂಗಳೂರು ನಗರದ ಕೆರೆಗಳನ್ನು ಸಂರಕ್ಷಿಸುವ ಬಗ್ಗೆ
– ಶ್ರೀ ಕೆ.ಗೋವಿಂದರಾಜ್

689 – ರೈತರಿಗೆ ಸಹಕಾರ ಸಂಘಗಳಿಂದ ನೀಡಲಾದ ಸಾಲ ಮನ್ನಾ ಬಗ್ಗೆ
– ಶ್ರೀ ಮರಿತಿಬ್ಬೇಗೌಡ

*ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು*

**3. ಸಭಾಪತಿಯವರ ಅನುಮತಿಯ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

ಅ) ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ನಡೆದ ಹಗರಣಗಳ ಕುರಿತು
ಶ್ರೀ ಎನ್. ರವಿಕುಮಾರ್
ಡಾ: ಜಯಮಾಲ (ಸಭಾ ನಾಯಕರು)

ಆ) ರಾಜ್ಯದಲ್ಲಿ ಆಹಾರ ಪರೀಕ್ಷೆಗೆ ಅಗತ್ಯಕ್ಕೆ ಇರುವಷ್ಟು ಪ್ರಯೋಗಾಲಯಗಳು ಇಲ್ಲದಿರುವ ಕುರಿತು
ಶ್ರೀ ಎಂ.ಕೆ. ಪ್ರಾಣೇಶ್
ಡಾ: ಜಯಮಾಲ (ಸಭಾ ನಾಯಕರು)

ಇ) ಕೊಡಗು ಜಿಲ್ಲೆಯಲ್ಲಿನ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ.
ಶ್ರೀ ಎಂ.ಪಿ. ಸುನಿಲ್ ಸುಬ್ರಮಣಿ
ಡಾ: ಜಯಮಾಲ (ಸಭಾನಾಯಕರು)

ಈ) ರಾಜ್ಯದ ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಅರ್ಚಕರು ವಿವಿಧ ಬೇಡಿಕೆ ಕುರಿತು ಧರಣಿ ನಡೆಸುತ್ತಿರುವ ಬಗ್ಗೆ.
ಶ್ರೀ ಕೆ.ಪಿ. ನಂಜುಂಡಿ ವಿಶ್ವಕರ್ಮ
ಡಾ: ಜಯಮಾಲ (ಸಭಾನಾಯಕರು)

ಉ) ಇಂದಿರಾ ಕ್ಯಾಂಟೀನ್‌ಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ
ಡಾ:ತೇಜಸ್ವಿನಿ ಗೌಡ
ಡಾ: ಜಿ.ಪರಮೇಶ್ವರ್ (ಉಪ ಮುಖ್ಯಮಂತ್ರಿಯವರು ಹಾಗೂ ಒಳಾಡಳಿತ, ಬೆಂಗಳೂರು ಅಭಿವೃದ್ಧಿ ನಗರ ಯುವಜನ ಸೇವೆ ಮತ್ತು ಕ್ರೀಡಾ ಸಚಿವರು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಊ) ರೈತರಿಗೆ ಕಂದಾಯ ದಾಖಲೆಗಳನ್ನು ನೀಡುವ ಕುರಿತು

ಶ್ರೀ ಎಸ್. ರುದ್ರೇಗೌಡ.

ಡಾ: ಜಿ.ಪರಮೇಶ್ವರ್ (ಉಪ ಮುಖ್ಯಮಂತ್ರಿಯವರು ಹಾಗೂ ಒಳಾಡಳಿತ, ಬೆಂಗಳೂರು ಅಭಿವೃದ್ಧಿ ನಗರ ಯುವಜನ ಸೇವೆ ಮತ್ತು ಕ್ರೀಡಾ ಸಚಿವರು)

ಋ) ಮಹಾತ್ಮಾಗಾಂಧಿ ಉದ್ಯೋಗ ಖಾತ್ರಿ(ನರೇಗಾ) ಯೋಜನೆಯಲ್ಲಿ ಕೋಟ್ಯಂತರ ರೂಪಾಯಿಗಳ ಅಕ್ರಮ ನಡೆದಿರುವ ಬಗ್ಗೆ.

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ

ಡಾ: ಜಿ. ಪರಮೇಶ್ವರ್ (ಉಪ ಮುಖ್ಯಮಂತ್ರಿಯವರು ಹಾಗೂ ಒಳಾಡಳಿತ, ಬೆಂಗಳೂರು ಅಭಿವೃದ್ಧಿ ನಗರ ಯುವಜನ ಸೇವೆ ಮತ್ತು ಕ್ರೀಡಾ ಸಚಿವರು)

**4. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**5. ವಿತ್ತೀಯ ಕಲಾಪ**

**6. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಿಸಿದಂತೆ ಸಚಿವರ ಹೇಳಿಕೆ**

ವಿಜಯಪುರ ನಗರದ ಹೊರ ವಲಯದ ಬುರಾಣಪುರದಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮಾಡುವ ಬಗ್ಗೆ.

ಡಾ: ಜಿ.ಪರಮೇಶ್ವರ್ (ಉಪ ಮುಖ್ಯಮಂತ್ರಿಯವರು ಹಾಗೂ ಒಳಾಡಳಿತ, ಬೆಂಗಳೂರು ಅಭಿವೃದ್ಧಿ ನಗರ ಯುವಜನ ಸೇವೆ ಮತ್ತು ಕ್ರೀಡಾ ಸಚಿವರು) (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ ಪರವಾಗಿ)

**7. ಖಾಸಗಿ ಸದಸ್ಯರುಗಳ ಕಾರ್ಯಕಲಾಪಗಳು**

**ಕರ್ನಾಟಕ ಅಸಲು ಹಣಕ್ಕಿಂತ ಹೆಚ್ಚು ಬಡ್ಡಿ ವಿಧಿಸುವಿಕೆ ನಿಷೇಧ ವಿಧೇಯಕ, 2018**

ಶ್ರೀ ಶರಣಪ್ಪ ಮಟ್ಟೂರ

ಶ್ರೀ ಎಸ್.ವಿ.ಸಂಕನೂರ

ಡಾ: ತೇಜಸ್ವಿನಿ ಗೌಡ

ಶ್ರೀ ಐವನ್ ಡಿ'ಸೋಜಾ

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)

ಶ್ರೀ ಬಂಡೆಪ್ಪ ಖಾಶೆಂಪೂರ(ಸಹಕಾರ ಸಚಿವರು)

(ಚರ್ಚೆ ಮುಂದುವರೆದಿತ್ತು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**8. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ**

*ರಾಜ್ಯದಲ್ಲಿ ಭೀಕರ ಬರಗಾಲ ಮತ್ತು ಈ ಸಂಬಂಧ ರೈತರು ಆತ್ಮಹತ್ಯೆಗೆ ಒಳಗಾಗುತ್ತಿರುವ ಬಗ್ಗೆ.*

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು)

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)
ಶ್ರೀ ನಿರಾಣಿ ಹಣಮಂತ ರುದ್ರಪ್ಪ
ಡಾ: ತೇಜಸ್ವಿನಿ ಗೌಡ
ಶ್ರೀ ಎನ್.ರವಿಕುಮಾರ್
ಶ್ರೀ ಶರಣಪ್ಪ ಮಟ್ಟೂರ
ಶ್ರೀ ಬಂಡೆಪ್ಪ ಖಾಶೆಂಪೂರ(ಸಹಕಾರ ಸಚಿವರು)

~~~~~~~~

(450) 14-12-2018 10.30 ಪಿಕೆ-ಎಕೆ

**ಕರ್ನಾಟಕ ವಿಧಾನ ಪರಿಷತ್ತು**
**ಶುಕ್ರವಾರ, 14ನೇ ಡಿಸೆಂಬರ್ 2018**

**ಸದನವು ಬೆಳಗಾವಿಯ ಸುವರ್ಣಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಅವರು ಸಭಾಪೀಠದಲ್ಲಿ ಉಪಸ್ಥಿತರಿದ್ದರು.**

~~~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 1. ಪ್ರಶ್ನೋತ್ತರ ಕಲಾಪದಲ್ಲಿ ಪ್ರತಿ ಪ್ರಶ್ನೆಗೂ ಇಷ್ಟು ಸಮಯ ಎಂದು ನಿಗದಿಪಡಿಸಬೇಕೆನ್ನುವ ಬಗ್ಗೆ.

– – –

**ಶ್ರೀ ಕೃಷ್ಣಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೆ, ಪ್ರಶ್ನೋತ್ತರಗಳ ಕಲಾಪ ಪ್ರಾರಂಭವಾಗುವುದಕ್ಕೆ ಮುಂಚೆ ತಮ್ಮ ಅನುಮತಿ ಪಡೆದು ನಾನು 2 ನಿಮಿಷ ಮಾತನಾಡಬಯಸುತ್ತೇನೆ.

ಮಾನ್ಯ ಸಭಾಪತಿಯವರೆ, ತಾವು ನಿನ್ನೆ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯನ್ನು ನಡೆಸಿದಿರಿ. ಆ ಸಭೆಯಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಸದಸ್ಯರು ಸದನ ನಡೆಸುವುದರ ಕುರಿತು ನಾಲ್ಕಾರು ವಿಚಾರಗಳ ಬಗ್ಗೆ ಚರ್ಚೆ ನಡೆಸಿದರು. ಅದರಲ್ಲಿ ಕೆಲವು ವಿಚಾರಗಳನ್ನು ಸದನದ ಎಲ್ಲಾ ಸದಸ್ಯರ ಗಮನಕ್ಕೆ ತಂದು ಅವರ ಸಹಕಾರ ಬಯಸುತ್ತೇನೆ. ಈಗಾಗಲೇ ಈ ಸದನದಲ್ಲಿ ನೋಡಿದ ಹಾಗೆ, ಸ್ವಾಭಾವಿಕವಾಗಿ ಪ್ರಶ್ನೋತ್ತರದ ಅವಧಿ ಒಂದು ಗಂಟೆ ಎಂದಿರುವುದು ಗಂಟೆಗಳಾಗಿ ಹೋಗುತ್ತಿದೆ. ಕೆಲವೊಂದು ಬಾರಿ ಎರಡೂವರೆ ಗಂಟೆಗಳ ಕಾಲ ಪ್ರಶ್ನೋತ್ತರ ವೇಳೆ ನಡೆದ ಉದಾಹರಣೆ ಇದೆ. ನಾವು ಇದನ್ನು ಶಿಸ್ತುಬದ್ಧವಾಗಿ ನಡೆಸದೇ ಹೋದರೆ, ಅಧಿವೇಶನವನ್ನು ಸದುದ್ದೇಶದಿಂದ ನಡೆಸಬೇಕು ಎನ್ನುವ ಆಸೆ ಈಡೇರಿದಂತಾಗುವುದಿಲ್ಲ. ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ವಿರೋಧ ಮತ್ತು ಮತ್ತು ಆಡಳಿತ ಪಕ್ಷದ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈಗ ಒಂದು ಪ್ರಶ್ನೆಗೆ ಗಂಟೆಯವರೆಗೆ ಚರ್ಚೆಯಾಗುತ್ತಿದೆ. ಈ ರೀತಿ ನಡೆಸುವುದು ಸೂಕ್ತವಲ್ಲ. ಈ ಸದನದಲ್ಲಿ ಬೇರೆ ಬೇರೆ ವಿಚಾರಗಳೂ ಚರ್ಚೆ ಆಗಬೇಕಾಗುತ್ತದೆ. ಕೇವಲ ಪ್ರಶ್ನೋತ್ತರ ಅವಧಿಗೆ ಮಾತ್ರ ಸದನವನ್ನು ಸೀಮಿತ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮುಂದೆ ಎರಡು ಆಯ್ಕೆಗಳಿವೆ. ನಿನ್ನೆ ಬಿಎಸಿ ಯಲ್ಲಿ ಚರ್ಚೆ ಆದ ಹಾಗೆ ಪ್ರಶ್ನೆ ಕೇಳುವಾಗ ನಮಗೆ ನಾವೇ ಶಿಸ್ತುಬಾಧ್ಯರನ್ನಾಗಿ ಮಾಡಿಕೊಳ್ಳಬೇಕು. ಪ್ರಶ್ನೆ ಕೇಳುವಾಗ ಭಾಷಣ ಮಾಡುವುದನ್ನು ಬಿಟ್ಟು ಕೇವಲ ಪ್ರಶ್ನೆ ಕೇಳಬೇಕು. ಈ ವಿಚಾರವನ್ನು ಹೇಳುವಾಗ ಎಲ್ಲಾ ಸದಸ್ಯರು ಒಪ್ಪುತ್ತಾರೆ. ಆದರೆ ಆ ರೀತಿ ನಡೆದುಕೊಳ್ಳುವುದಿಲ್ಲ. ರಾಜಕಾರಣಿಗಳಿಗೆ ಒಂದು ಮೈಕ್ ಸಿಕ್ಕ ತಕ್ಷಣ ಭಾಷಣವನ್ನೇ ಮಾಡುತ್ತಾರೆ. ಯಾರು ಇರಲಿ, ಇಲ್ಲದೇ ಹೋಗಲಿ ಮೈಕ್ ಸಿಕ್ಕಿದರೆ ಸಾಕು; ಭಾಷಣ ಮಾಡುತ್ತಾರೆ. ಎಲ್ಲಾ ಸದಸ್ಯರು ಹೀಗೆಯೇ ಮಾಡುತ್ತಾರೆ ಎಂದು ಹೇಳುವುದಿಲ್ಲ. ಸಾರ್ವತ್ರಿಕವಾಗಿ ಹಾಗಾಗುತ್ತದೆ.

(ಮುಂದುವರೆದಿದೆ...)

(451)14-12-2018 ಡಿಎಸ್-ಎಕೆ 10.40

**ಶ್ರೀ ಕೃಷ್ಣಬೈರೇಗೌಡ(ಮುಂದುವರೆದುದು...):-**

ಪೀಠಿಕೆ ಹಾಕುವುದಕ್ಕೆ ಬೇರೆ ಸಂದರ್ಭಗಳಿರುತ್ತವೆ. ಪೀಠಿಕೆ ಹಾಕಿ ಭಾಷಣ ಮಾಡುವುದನ್ನು ಬಿಟ್ಟು ದಯವಿಟ್ಟು ಪ್ರಶ್ನೆಯನ್ನು ಕೇಳಿ. ಇದು ಇದೇ ರೀತಿ ಮುಂದುವರೆದರೆ ಸಮಯ ಸಾಕಾಗುವುದಿಲ್ಲ. ನಿನ್ನೆ ಅನಿವಾರ್ಯವಾಗಿ ಮತ್ತೊಂದು ವಿಚಾರ ಚರ್ಚೆಯಾಯಿತು. ಒಂದು ಗಂಟೆ ಸಮಯದಲ್ಲಿ ನಾವು ಪ್ರಶ್ನೋತ್ತರವನ್ನು ಮುಗಿಸಬೇಕಾಗುತ್ತದೆ. ಈಗ ಯಾವುದಾದರು ಒಂದಕ್ಕೆ ನಾವು ಒಪ್ಪಿಕೊಳ್ಳಬೇಕು. ನಾವೇನು ಒಂದು ಗಂಟೆಗೆ ಮೊಟಕುಗೊಳಿಸಿ ಎಂದು ಹೇಳುತ್ತಿಲ್ಲ. ಬೇರೆ ಸದಸ್ಯರ ಬಗ್ಗೆ ಅಷ್ಟು ಕಾಳಜಿ ಇದ್ದರೆ, ಬೇರೆ ಸದಸ್ಯರ ಹಕ್ಕುಗಳ ಬಗ್ಗೆ ನಿಜವಾಗಿಯೂ ಗೌರವವಿದ್ದರೆ ನಾವು ಪ್ರಶ್ನೆಯನ್ನು ಸಿಮೀತವಾಗಿ ಕೇಳಬೇಕಾಗುತ್ತದೆ.

**ಡಾ:ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೆ, ಪ್ರತಿ ಪ್ರಶ್ನೆಗೂ ಇಷ್ಟು ಸಮಯ ಎಂದು ನಿಗದಿ ಮಾಡುವುದು ಒಳ್ಳೆಯದು ಎಂದು ನನಗನಿಸುತ್ತಿದೆ.

**ಶ್ರೀ ಕೃಷ್ಣಬೈರೇಗೌಡ:-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಹಿಂದೆ ಚರ್ಚೆಯಾಗಿ ಒಂದು ಪ್ರಶ್ನೆಗೆ 4 ನಿಮಿಷ ಎಂದು ನಿಗದಿ ಮಾಡಲಾಗಿತ್ತು. ಮಾನ್ಯ ಶಂಕರಮೂರ್ತಿಯವರು ಇದ್ದಾಗ ಅವರು ಪ್ರತಿ ಬಾರಿ ಘೋಷಣೆ ಮಾಡುತ್ತಿದ್ದರು. ಅದನ್ನು ಅನುಷ್ಠಾನ ಮಾಡುವುದಕ್ಕೆ ಹೋದರೆ ವಿರೋಧ ಪಕ್ಷದವರು, ಆಡಳಿತ ಪಕ್ಷದವರು ಎಲ್ಲರೂ ಅವರ ಮೇಲೆ ಮುಗಿ ಬೀಳುತ್ತಿದ್ದರು. ಈಗ ತಾವು ಪ್ರಯತ್ನ ಮಾಡುವುದಕ್ಕೆ ತಯಾರು ಇದ್ದೀರಿ. ನಾವೆಲ್ಲರೂ ಸಹಕಾರ ಕೊಡದಿದ್ದರೆ ತಾವೇನು ಮಾಡುವುದಕ್ಕಾಗುತ್ತದೆ? ನಮ್ಮ ಸಹಕಾರ ಇಲ್ಲದಿದ್ದರೆ ತಾವೇನು ಮಾಡುತ್ತೀರಿ? ಹಾಗಾಗಿ ಈ ಸದನ ಚೆನ್ನಾಗಿ ನಡೆಯಬೇಕೆಂದು ನಾನು ಪದೇಪದೇ ಎಲ್ಲರಿಗೂ ಮನವಿ ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಯವಿಟ್ಟು ಸದಸ್ಯರುಗಳು ಪ್ರಶ್ನೆಯನ್ನು ಮಾತ್ರ ಕೇಳಬೇಕು, ಭಾಷಣ ಮಾಡಬಾರದು. ಭಾಷಣ ಮಾಡುವುದನ್ನು ಬೇರೆ ಸಂದರ್ಭಗಳಲ್ಲಿ ಉಪಯೋಗ ಮಾಡಿಕೊಳ್ಳಿ. ಇಲ್ಲದಿದ್ದರೆ ಅನಿವಾರ್ಯವಾಗಿ ನಾವು ಮತ್ತೆ ಒಂದು ಗಂಟೆ ಸಮಯವನ್ನು ಪ್ರಯೋಗ ಮಾಡಬೇಕಾಗುತ್ತದೆ, ಆ ರೀತಿ ಆಗುವುದು ಬೇಡ. ಆದರೆ, ಅದು ನಮ್ಮ ಉದ್ದೇಶ ಅಲ್ಲ. ಎಲ್ಲಾ ಸದಸ್ಯರುಗಳಿಗೆ ಅವಕಾಶ ಸಿಗಬೇಕೆನ್ನುವುದೇ ನಮ್ಮ ಉದ್ದೇಶ. ಅವಕಾಶ ಸಿಗಬೇಕೆಂದರೆ ಯಾರೋ ಇನ್ನೊಬ್ಬರು ಮಾಡುವುದಲ್ಲ. ನಾವೆಲ್ಲಾ ಪ್ರಯತ್ನ ಮಾಡಿದರೆ ಎಲ್ಲಾ ಸದಸ್ಯರುಗಳಿಗೂ ಅವಕಾಶ ಸಿಗುತ್ತದೆ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೆ, ನಾವು ಪ್ರಶ್ನೆ ಕೇಳಿರುವುದಕ್ಕೆ ಸಮಂಜಸವಾದ ಉತ್ತರ ಬಂದಿರುವುದಿಲ್ಲ. ಅದರ ಬಗ್ಗೆ ತಮ್ಮ ಮುಖಾಂತರ ಪ್ರಶ್ನೆ ಕೇಳಿರುತ್ತೇವೆ.

**ಸಭಾಪತಿಯವರು:-** ಅದನ್ನು ಬೇರೆ ರೂಪದಲ್ಲಿ ಪ್ರಶ್ನೆ ಕೇಳಬೇಕಾಗುತ್ತದೆ.

**ಶ್ರೀ ಕೃಷ್ಣಬೈರೇಗೌಡ:-** ಮಾನ್ಯ ಸಭಾಪತಿಯವರೆ, ಸಮಂಜಸ ಉತ್ತರ ಕೆಲವು objective ಆಗಿ verifiable ಇರುತ್ತವೆ. ಅವರ ಸಮಾಧಾನಕ್ಕೆ ತಕ್ಕಂಥೆ ನಾವು ಉತ್ತರ ಕೊಡುವುದಕ್ಕಾಗುವುದಿಲ್ಲ. ಆಗ ಸಮಾಧಾನಕರವಾದ ಉತ್ತರ ಸಿಕ್ಕಿಲ್ಲ ಎಂದು ಅವರು ಭಾವಿಸುತ್ತಾರೆ. ಈ ರೀತಿ ಇರುತ್ತದೆ. ಅಂತಹದ್ದು ಯಾವುದಾದರೂ ಪ್ರಮುಖ ವಿಚಾರ ಇದ್ದರೆ ತಾವು ಆ ಪ್ರಶ್ನೆಯನ್ನು ಪರಿವರ್ತನೆ ಮಾಡಿ ಬೇರೆ ಯಾವುದಾದರೂ ರೂಪದಲ್ಲಿ ಅವಕಾಶ ಮಾಡಿಕೊಡಿ. ಎಲ್ಲಾ ಸಮಸ್ಯೆಗಳಿಗೂ ಪ್ರಶ್ನೋತ್ತರ ಅವಧಿಯಲ್ಲೇ ಪರಿಹಾರ ಸಿಗುತ್ತದೆ ಎಂದಲ್ಲ. ಅದು ಒಂದು ವೇದಿಕೆ ಅಷ್ಟೆ. ಅದಕ್ಕಾಗಿ ಅದನ್ನು ಬಳಕೆ ಮಾಡಿಕೊಳ್ಳೋಣ. ಈ ಸದನ ಇರುವುದರಲ್ಲಿ ಸ್ವಲ್ಪ ಶಿಸ್ತಾಗಿ ನಡೆಯುತ್ತಿದೆ. ನಾನು ಮತ್ತೊಂದು ವಿಚಾರವನ್ನು ಹೇಳುತ್ತಿದ್ದೇನೆ. ಅದನ್ನು ಹೇಳಬಾರದು, ಆದರೂ ಹೇಳುತ್ತಿದ್ದೇನೆ. ಎಲ್ಲಾ ಸಚಿವರು ಇಲ್ಲಿ ಬಂದು ಕುಳಿತುಕೊಂಡರೆ ಏನಪ್ಪಾ, ಇದನ್ನು ಇಷ್ಟೊಂದು ಎಳೆಯುತ್ತಾರಲ್ಲಾ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಹಾಗಾಗಿ ಸೀಮಿತವಾಗಿ ಪ್ರಶ್ನೆ ಕೇಳುವುದಕ್ಕೆ ಎಲ್ಲರೂ ಪ್ರಯತ್ನ ಮಾಡೋಣ. ಎಲ್ಲಾ ಸದಸ್ಯರು ಒಂದು ಗಂಟೆಗೆ ಸೀಮಿತಗೊಳಿಸುವುದು ಬೇಡ ಎಂದು ಹೇಳುವುದಾದರೆ ನಾವು ಗೌರವಿಸುತ್ತೇವೆ. ಇಲ್ಲದಿದ್ದರೆ ನಾಲ್ಕು ನಿಮಿಷಕ್ಕೆ ತಾವು ಕಟ್ಟುನಿಟ್ಟಾಗಿ ಸೀಮಿತಗೊಳಿಸಿ. ಸದಸ್ಯರುಗಳು ಸಮಯವನ್ನು ನಿಗದಿ ಮಾಡಿಕೊಂಡು ನಾಲ್ಕು ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳದಂತೆ ನೋಡಿಕೊಳ್ಳಬೇಕು. ಈಗ ಮಾನ್ಯ ವಿರೋಧ ಪಕ್ಷದ ನಾಯಕರು, ತಾವು ಏನು ಹೇಳಿದ್ದೀರಿ ಎಂದರೆ ಮಂತ್ರಿಗಳು ಗಂಟೆಗಟ್ಟಲೆ ಉತ್ತರ ಕೊಡುತ್ತೀರಿ ಎಂದು ಹೇಳಿದರು. ಹೌದು, ಅದು ನಿಜ. ಸದಸ್ಯರು ಗಂಟೆಗಟ್ಟಲೆ ಪ್ರಶ್ನೆ ಕೇಳಿ, ಅವರು ನನ್ನ ಮೇಲೆ ನಾನಾ ರೀತಿಯ ಆರೋಪಗಳನ್ನು ಮಾಡಿ ಅವೆಲ್ಲದಕ್ಕೂ ಉತ್ತರ ಕೊಡದೆ ನಾನು ಕುಳಿತರೆ ನಾನು ಅಸಮರ್ಥನಾಗುತ್ತೇನೋ ಇಲ್ಲವೋ, ಇದು ಸಮಸ್ಯೆ ಇರುವಂಥದ್ದು. ಸದಸ್ಯರು ಪ್ರಶ್ನೆ ಕೇಳುವಾಗ ಬರೀ ಪ್ರಶ್ನೆಯನ್ನಷ್ಟೇ ಕೇಳಿದರೆ ನಾನು ಉತ್ತರ ಕೊಡುತ್ತೇನೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಒಂದು ಸಮಸ್ಯೆಯ ವಿಚಾರಕ್ಕೆ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಪ್ರಶ್ನೋತ್ತರ ವೇಳೆಯಲ್ಲಿ ಪ್ರಶ್ನೆಯನ್ನು ಕೇಳುವುದು. ಪ್ರಶ್ನೆಯನ್ನೇ ಕೇಳಬೇಡಿ ಎಂದರೆ ಸರಿಯಲ್ಲ. ಮಾನ್ಯ ಸಚಿವರುಗಳ ಉತ್ತರವನ್ನು ನಾನು ಗಮನಿಸಿದ್ದೇನೆ, ಒಬ್ಬ ಸಂಸದೀಯ ವ್ಯವಹಾರಗಳ ಸಚಿವರಾಗಿದ್ದು, ಅವರಿಗೆ ಉತ್ತರವನ್ನು ಕೊಡುವುದಕ್ಕೂ ನಿರ್ಬಂಧ ಮಾಡುವುದು ಸರಿಯಾಗುವುದಿಲ್ಲ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೆ, ಪ್ರಶ್ನೆಯನ್ನಷ್ಟೇ ಕೇಳಿದರೆ ನಾವು ಉತ್ತರ ಕೊಡುವುದು ಸೀಮಿತವಾಗುತ್ತದೆ. ಅವರು ಪೀಠಿಕೆ ಹಾಕಿದಾಗ ನಾವು ಪೀಠಿಕೆ ಹಾಕಬೇಕಾಗುತ್ತದೆ. ನಾವಿಬ್ಬರು ಪೀಠಿಕೆಯಿಂದ ಹೊರಗೆ ಬರೋಣ ಎನ್ನುವುದು ನನ್ನ ಉದ್ದೇಶವಾಗಿದೆ. ಬರದ ಬಗ್ಗೆ ಚರ್ಚೆ 5 ಗಂಟೆ ಅಥವಾ 10 ಗಂಟೆ, ಇಷ್ಟು ಗಂಟೆಗಳ ಸಮಯ ಎಂದು ನಿಗದಿ ಮಾಡಿ. ಒಟ್ಟಾರೆಯಾಗಿ ತಾವು ಸಭಾನಾಯಕರು, ವಿರೋಧ ಪಕ್ಷದ ನಾಯಕರನ್ನು ಜೊತೆಗೆ ತೆಗೆದುಕೊಂಡು ಇಷ್ಟು ಗಂಟೆ ಎಂದು ನಿಗದಿ ಮಾಡಿಬಿಡಿ. ಅದರಲ್ಲಿ ಪಕ್ಷಗಳಿಗೆ ಇಷ್ಟಿಷ್ಟು ಸಮಯ ಎಂದು ನಿಗದಿ ಮಾಡಿಬಿಡಿ. ವಿಪಕ್ಷಕ್ಕೆ ಹೆಚ್ಚಿನ ಸಮಯವನ್ನು ನಿಗದಿ ಮಾಡಿ. ಅದಕ್ಕೆ ನಮ್ಮ ಸಹಕಾರ ಇದೆ. ಸದಸ್ಯರುಗಳ ಸಂಖ್ಯೆಗೆ ಅನುಗುಣವಾಗಿ ಸಮಯವನ್ನು ಕೊಡಬೇಕೆಂದು ನಾನು ಹೇಳುತ್ತಿದ್ದೇನೆ.

**ಶ್ರೀ ಅರುಣಶಹಾಪುರ:-** ಮಾನ್ಯ ಸಭಾಪತಿಯವರೆ, ಇವೆಲ್ಲಾ ಸಂಗತಿಗಳನ್ನು ವಿವರವಾಗಿ ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ಚರ್ಚೆ ಮಾಡಿ. ಅಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಸದನಕ್ಕೆ ತಿಳಿಸಿ. ಆಗ ಸಮಯ ಸಾಕಷ್ಟು ಉಳಿತಾಯವಾಗುತ್ತದೆ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಅರುಣಶಹಾಪುರ ರವರು ಬಹಳಷ್ಟು ವರ್ಷಗಳಿಂದ ಸದನದಲ್ಲಿದ್ದಾರೆ. ಮಾನ್ಯ ಶಂಕರಮೂರ್ತಿಯವರು ಬಹಳಷ್ಟು ಬಾರಿ ಪ್ರಯತ್ನ ಮಾಡಿದರೂ ಎಷ್ಟು ಯಶಸ್ವಿಯಾಯಿತು ಎಂಬುದನ್ನು ಅವರು ಜ್ಞಾಪಕ ಮಾಡಿಕೊಳ್ಳಲಿ. ಸದಸ್ಯರು ಸಹಕಾರ ಕೊಡದಿದ್ದರೆ ತಾವೇನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದೇನೆ. ಆ ಕಾರಣಕೋಸ್ಕರ sharp ಆಗಿ ಹೇಳಿ ಕುಳಿತುಕೊಳ್ಳಬಹುದು. ಮಾನ್ಯ ಸದಸ್ಯರ ಮನಸ್ಸಿಗೆ ನೋವುಂಟು ಮಾಡುವ ಉದ್ದೇಶವಿಲ್ಲ. ತಾವು ಗಂಟೆಗಳನ್ನು ನಿಗದಿ ಮಾಡಿ ಸದನಕ್ಕೆ ತಿಳಿಸಿ, ಅವರವರ ಪಕ್ಷದವರು ಸಮಯವನ್ನು ನಿಗದಿ ಮಾಡಿಕೊಳ್ಳಲಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ಒಂದು ಪ್ರಶ್ನೆಗೆ ಎಷ್ಟು ಸಮಯ ತೆಗೆದುಕೊಳ್ಳಬೇಕೆಂದು ಸಮಯವನ್ನು ನಿಗದಿ ಮಾಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ:ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೆ, ನಾಲ್ಕು ನಿಮಿಷ ನಿಗದಿ ಮಾಡಿದರೆ ಮತ್ತೊಬ್ಬರ ಸದಸ್ಯರ ಸಮಯ ಹೋಗುತ್ತದೆಂದು ತಾವು ಮತ್ತೊಬ್ಬ ಸದಸ್ಯರನ್ನು ಕರೆಯುತ್ತೀರಿ. ಧರ್ಮ ಸಂಕಟ ಹೇಗಾಗುತ್ತದೆಂದರೆ ಸದಸ್ಯರು ಮನವಿ ಮಾಡಿಕೊಂಡಾಗ ಏನು ಮಾಡುವುದಕ್ಕಾಗುವುದಿಲ್ಲ. ನಾಲ್ಕು ನಿಮಿಷ ಅವಕಾಶ ಕೊಟ್ಟರೆ ಬೇಕಾದಷ್ಟು ಆಗುತ್ತದೆ. ಅದಕ್ಕೆ ಬದ್ಧರಾಗುವುದು ಒಳ್ಳೆಯದು ಎಂದು ನನಗನಿಸುತ್ತದೆ.

**ಶ್ರೀ ಕೃಷ್ಣಬೈರೇಗೌಡ:-** ಮಾನ್ಯ ಸಭಾಪತಿಯವರೆ, ಯಾವುದೇ ವಿಚಾರ ಇರಲಿ, ಅದಕ್ಕೂ ಸಮಯ ನಿಗದಿ ಮಾಡಿ ಪಾರ್ಟಿವೈಸ್ ಹಂಚಿಕೆ ಮಾಡಿ. ಅದನ್ನೂ enforce ಮಾಡಿ. ನಾನು ಎಲ್ಲರ ಸಹಕಾರವನ್ನು ಕೋರುತ್ತಿದ್ದೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಒಂದು ವಿಚಾರವನ್ನು ಹೇಳಬಯಸುತ್ತೇನೆ. Based on importance of the issue ಆ ವಿಷಯದ ಬಗ್ಗೆ 5 ನಿಮಿಷ, 10 ನಿಮಿಷ ಹೆಚ್ಚು ಸಮಯವಾದರೆ ಅಡ್ಡಿ ಇಲ್ಲ. ಆದರೆ based on issue ಮಾಡುವುದು ಒಳ್ಳೆಯದು.

**ಸಭಾಪತಿಯವರು:-** ಬೇರೆ ರೂಪದಲ್ಲಿ ಪ್ರಶ್ನೆಯನ್ನು ಕೇಳಿ. ಆಗ ಇದೇ ರೀತಿ ಮಾತನಾಡಬಹುದು. ಈಗ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಕೇಳಿಕೊಳ್ಳುವುದೇನೆಂದರೆ, ಲೋಕೋಪಯೋಗಿ ಇಲಾಖೆಯ ಸಚಿವರಿಗೆ ಬೇರೆ ಕಡೆ ಕಾರ್ಯಕ್ರಮವಿದೆಯಂತೆ. ಆದ್ದರಿಂದ ಅವರ ಪ್ರಶ್ನೆಯನ್ನು ಮೊದಲು ತೆಗೆದುಕೊಳ್ಳುತ್ತಿದ್ದೇನೆ.

**2. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಚುಕ್ಕೆ ಪ್ರಶ್ನೆ ಸಂಖ್ಯೆ:665**
**ಉತ್ತರವನ್ನು ಲಗತ್ತಿಸಲಾಗಿದೆ**

**ಶ್ರೀ ಕೆ.ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೆ, ಟೆಂಡರ್ ಕರೆದು ಅದಕ್ಕೆ ಅನುಮೋದನೆಯೂ ಕೂಡ ಸಿಕ್ಕಿದೆ. ಸದ್ಯದ ಪರಿಸ್ಥಿತಿಯಲ್ಲಿ ಅದು ಏಕಮುಖ ಸೇತುವೆಯಾಗಿದೆ. ಅದು ಬಹಳ ಹಳೆಯ ಸೇತುವೆಯಾಗಿದೆ. ಈಗಾಗಲೇ ಬೆಳಿಗ್ಗೆ ಮತ್ತು ಸಾಯಂಕಾಲ ಸುಮಾರು ಎರಡೆರಡು ಗಂಟೆಗಳ ಕಾಲ ರಸ್ತೆ ತಡೆಯಾಗುತ್ತಿದೆ. ಎರಡೆರಡು ಕಿಲೋಮೀಟರ್ ವಾಹನಗಳು ಕ್ಯೂನಲ್ಲಿ ನಿಂತು ಹೋಗುವಂತಹ ಪರಿಸ್ಥಿತಿ ಇದೆ. ಅದಕ್ಕೇನಾದರೂ men ಹಾಕುವಂಥದ್ದು ಅಥವಾ peak hours ನಲ್ಲಿ ಲಾರಿಗಳನ್ನು ಬೆಳಿಗ್ಗೆ ಮತ್ತು ಸಾಯಂಕಾಲ ಎರಡೆರಡು ಗಂಟೆ ನಿಷೇಧ ಮಾಡುವಂಥದ್ದು ಈ ರೀತಿ ಏನಾದರೂ ಸಮಸ್ಯೆಗೆ ಪರಿಹಾರ ಕೊಟ್ಟರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾಪತಿಯವರೆ, ಮಂಗಳೂರು-ಮೂಡಬಿದಿರೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುರುಪುರ ಸೇತುವೆಯ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಈಗಾಗಲೇ ಅದಕ್ಕೆ ಕೇಂದ್ರ ಸರ್ಕಾರದ ಅನುಮತಿಯನ್ನು ತೆಗೆದುಕೊಂಡು ಈ ವರ್ಷ 2018-19ನೇ ಸಾಲಿನಲ್ಲಿ ನಮಗೇನು ಕೇಂದ್ರ ಸರ್ಕಾರದಿಂದ ಹಣ ಕೊಟ್ಟಿದೆ ಅದನ್ನು ಕಾಮಗಾರಿಗೆ ತೆಗೆದುಕೊಂಡಿದ್ದೇವೆ. ಈ ಕಾಮಗಾರಿಗೆ ಈಗಾಗಲೇ ಸುಮಾರು 37.84 ಕೋಟಿ ರೂಪಾಯಿಗಳಿಗೆ ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. ಮಾನ್ಯ ಸದಸ್ಯರು ಹೇಳಿರುವುದನ್ನು ಪರಿಶೀಲನೆ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಪ್ರಶ್ನೆ ಸಂಖ್ಯೆ:718**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಬಹಳ ಸುದೀರ್ಘವಾಗಿ ಉತ್ತರ ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿರುವಂತಹ ಪ್ರತಿಷ್ಠಿತ ಗಾಲ್ಫ್ ಕ್ಲಬ್‌ನಲ್ಲಿ ನಡೆಯುವಂತಹ ಚಟುವಟಿಕೆಗಳ ಬಗ್ಗೆ, ಸರ್ಕಾರ ಅವರಿಗೆ ಯಾವ ರೀತಿ ಅಗ್ರಿಮೆಂಟ್ ಮಾಡಿಕೊಟ್ಟಿದೆ ಎಂಬುದರ ಬಗ್ಗೆ, ಅಲ್ಲಿ ಯಾವ್ಯಾವ ಸದಸ್ಯರು ಇದ್ದಾರೆ, ಎಷ್ಟು ಹಣ ಪಾವತಿ ಮಾಡುತ್ತಿದ್ದಾರೆ, ಯಾವ ರೀತಿಯಲ್ಲಿ ಸರ್ಕಾರದ ಕಾನೂನುಗಳನ್ನು ಪಾಲನೆ ಮಾಡುತ್ತಿದ್ದಾರೆ, ಅದರ ಬಗ್ಗೆ ನನಗೆ ವಿವರವಾದ ಮಾಹಿತಿ ಬೇಕು ಎಂದು ಕೇಳಿದ್ದೇನೆ. ನಾನು ಸರ್ಕಾರದ ಗಮನಕ್ಕೆ ತರುವುದೇನೆಂದರೆ, ನಮ್ಮ Public Accounts Committee ಯಿಂದ Audit Report ಏನಿತ್ತು ಅದರಲ್ಲಿ ಸರ್ಕಾರದ ಬೊಕ್ಕಸಕ್ಕೆ 392 ಕೋಟಿ ರೂಪಾಯಿಗಳು ನಷ್ಟವನ್ನುಂಟು ಮಾಡಿದ್ದಾರೆಂದು ಎ.ಜಿ. ಅವರು ವರದಿಯನ್ನು ಕೊಟ್ಟಿದ್ದರು.

(ಮುಂದುವರೆದಿದೆ...)

(452)14-12-2018(10-50)ಬಿಕೆಪಿ-ಆರ್‌ಎನ್

**ಶ್ರೀ ಟಿ.ಎ.ಶರವಣ(ಮುಂದುವರೆದುದು...)**

ಈ ವಿಚಾರವಾಗಿ ನಮ್ಮ ಕಮಿಟಿಯಲ್ಲಿಯೂ ಸಹ ಚರ್ಚೆಯಾಗಿದೆ. ತದನಂತರ ನಮ್ಮ ಕಮಿಟಿ ವತಿಯಿಂದ ಸನ್ಮಾನ್ಯ ಶ್ರೀ ಆರ್.ಅಶೋಕ್‌ರವರ ನೇತೃತ್ವದಲ್ಲಿ ನಾವು ಆ ಒಂದು ಗಾಲ್ಫ್ ಕ್ಲಬ್‌ಗೆ ಸ್ಥಳ ಪರಿಶೀಲನೆಯನ್ನು ಹಾಕಿಕೊಂಡಿದ್ದೆವು. ನಾವುಗಳು ಅಲ್ಲಿಗೆ ಹೋದಂತಹ ಸಮಯದಲ್ಲಿ ಅಲ್ಲಿನ ಅಕೌಂಟ್ಸ್ ಬಗ್ಗೆ ಕೇಳಿದೆವು. ಇದನ್ನು ನಡೆಸಲಿಕ್ಕೆ ಸರ್ಕಾರ ಯಾವ ರೀತಿಯಲ್ಲಿ ನಿಮಗೆ ಮಾನದಂಡವನ್ನು ಕೊಟ್ಟಿದೆ, ಇಲ್ಲಿ ಏನು ಪಾಲನೆಯಾಗುತ್ತಿದೆ, ನಿಮ್ಮ liabilities ಏನಿದೆ, ನಿಮ್ಮ expenses ಏನಿದೆ ಎನ್ನುವುದರ ಬಗ್ಗೆ ನಾವು ವಿವರಣೆಯನ್ನು ಕೇಳಿದ್ದೆವು. ಆ ಸಮಯದಲ್ಲಿ ಅವರು

10 ವರ್ಷಗಳ ಅಕೌಂಟ್ಸ್ ಮಾಹಿತಿಯನ್ನು ಕೊಟ್ಟರು. ಅದರ ಹಿಂದಿನ 10 ವರ್ಷಗಳ ಅಕೌಂಟ್ಸ್ ಮಾಹಿತಿಯನ್ನು ಕೊಡಲಿಲ್ಲ.

ಎರಡನೆಯದಾಗಿ, ಇದನ್ನು ನಡೆಸಲು ಸರ್ಕಾರದಿಂದ 2021 ರವರೆಗೆ ಅಗ್ರಿಮೆಂಟ್ ಮಾಡಿಕೊಂಡಿದೆ. 10,000 ರೂಪಾಯಿಗಳ ವಾರ್ಷಿಕ ಬಾಡಿಗೆಯನ್ನು ಪಡೆದುಕೊಳ್ಳುವಂತಹದ್ದಾಗಿದೆ. ಪ್ರಮುಖ ಜಾಗದಲ್ಲಿರುವಂತಹ ಗಾಲ್ಫ್ ಕ್ಲಬ್‌ಗೆ 60 ಎಕರೆ ಜಮೀನನ್ನು ಸರ್ಕಾರ ಅಗ್ರಿಮೆಂಟ್ ಮಾಡಿಕೊಟ್ಟಿದೆ. ಅಲ್ಲಿ ಏನು charity ಕೆಲಸ ಮಾಡುತ್ತಿದ್ದಾರೆಯೇ, ಸಾಮಾಜಿಕ ಕಾರ್ಯಕ್ರಮ ಏನಾದರೂ ನಡೆಯುತ್ತಿದೆಯೇ, ಧರ್ಮದ ಕಾರ್ಯಕ್ರಮ ಏನಾದರೂ ನಡೆಯುತ್ತಿದೆಯೇ ಎನ್ನುವುದರ ಬಗ್ಗೆ ನಾನು ಕೇಳಲಿಕ್ಕೆ ಬಯಸುತ್ತಿದ್ದೇನೆ. ನಾನು ಕೇಳುತ್ತಿರುವುದೇನೆಂದರೆ ಅಲ್ಲಿ ಬಹುಶಃ 60 ಎಕರೆ ಜಾಗದ ಪೈಕಿ ಈಗ ಇರತಕ್ಕಂತಹದ್ದು 42 ಎಕರೆ ಜಾಗ ಇದೆ. ಅದನ್ನು ಕೆಲವೊಂದು ಉದ್ದೇಶಕ್ಕಾಗಿ ರಸ್ತೆ ಅಗಲೀಕರಣ ಮಾಡಿಕೊಳ್ಳುವುದಕ್ಕೋಸ್ಕರ ಆ ಜಾಗವನ್ನು ಉಪಯೋಗ ಮಾಡಿಕೊಂಡಿದ್ದಾರೆ. ಮತ್ತೆ ಅಲ್ಲಿ ಇರುವಂತಹ ನೌಕರರುಗಳು ಏನಿದ್ದಾರೆ, ಅವರೆಲ್ಲರೂ ಉತ್ತರ ಭಾರತದವರು. ಅಲ್ಲಿ ಕನ್ನಡಿಗರಿಗೆ ಆದ್ಯತೆಯನ್ನು ಕೊಡಬೇಕಾಗಿತ್ತು. ಅದನ್ನು ಅಲ್ಲಿ ಕೊಟ್ಟಿರುವುದಿಲ್ಲ. ಅಲ್ಲಿ 65 ವರ್ಷಗಳಾದವರಿಗೆ ಉಚಿತವಾಗಿ ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಈ ಗಾಲ್ಫ್ ಕ್ಲಬ್ ಏನಿದೆ, ಅದರ ಅವಶ್ಯಕತೆ ಅಲ್ಲಿ ಇದೆಯೇ? ಅಲ್ಲಿ 49 ಎಕರೆ ಜಾಗ ಏನು ಪ್ರಮುಖ ಇದೆ, ಅದನ್ನು ಸರ್ಕಾರ ಬೇರೆಯದಕ್ಕೆ ಉಪಯೋಗ ಮಾಡಿಕೊಳ್ಳಬಹುದು ಅಲ್ಲವೇ? 2021 ರವರೆಗೆ ಮಾಡಿಕೊಂಡಿರುವ ಅಗ್ರಿಮೆಂಟ್ ಏನಿದೆ, ಅದರ ನಂತರ ಯಾವುದೇ ಕಾರಣಕ್ಕೂ ಅಗ್ರಿಮೆಂಟ್ ಅನ್ನು ಮುಂದುವರಿಸದೇ ಸರ್ಕಾರ ಅದನ್ನು ಬೇರೆ ಉದ್ದೇಶಕ್ಕೆ ಅಂದರೆ ಯಾವುದೇ ಉದ್ಧೇಶಕ್ಕಾಗಿ ಅದನ್ನು ಬಳಕೆ ಮಾಡಿಕೊಳ್ಳಿ. ಅದು ಸರ್ಕಾರಕ್ಕೆ ಬಿಟ್ಟ ವಿಚಾರ. ಅದನ್ನು ಸರ್ಕಾರ ಉಪಯೋಗ ಮಾಡಿಕೊಳ್ಳುವಂತಹ ಕೆಲಸವನ್ನು ಮಾಡಬೇಕು.

**ಶ್ರೀ ಹೆಚ್.ಡಿ.ರೇವಣ್ಣ(ಲೋಕೋಪಯೋಗಿ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿರುವ ಪ್ರಕಾರ ದಿನಾಂಕ 31–03–2009 ರಲ್ಲಿನ ಸಿಎಜಿ ವರದಿಯಲ್ಲಿ ಸುಮಾರು 390 ಕೋಟಿ 36 ಲಕ್ಷ ನಷ್ಟ ಉಂಟಾಗಿರುತ್ತದೆ ಎಂದು ಹೇಳಿರುವುದು ನಿಜ. ಎರಡನೆಯದಾಗಿ, 59 ಎಕರೆ 18 ಗುಂಟೆ ಜಮೀನನ್ನು ಅವರಿಗೆ 2021 ರವರೆಗೆ ನಾವು ಕೊಟ್ಟಿದ್ದೇವೆ. ಈ ವಿಚಾರ ಈಗಾಗಲೇ ನಮ್ಮ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಪರಿಶೀಲನೆಯಲ್ಲಿದೆ. ಅವರು ಈ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳುತ್ತಿದ್ದಾರೆಂದು ನೋಡುತ್ತಿದ್ದೇವೆ. ಮತ್ತೆ, ಇದರಲ್ಲಿ ಏನೇನು violation ಆಗಿದೆ ಎನ್ನುವುದು ಪರಿಪೂರ್ಣವಾಗಿ ನಾವು ಪರಿಶೀಲನೆ ಮಾಡುತ್ತೇವೆ. ಇದರ ಜೊತೆಗೆ ಇವರು ಏನೇನು violation ಮಾಡಿದ್ದಾರೆನ್ನುವ ಬಗ್ಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಕೊಡುವಂತಹ ವರದಿಯನ್ನು ನೋಡಿಕೊಂಡು ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೆ, ಒಳಗಡೆ ಕಟ್ಟಡವನ್ನು ಕಟ್ಟಿದ್ದಾರೆ. ಅದನ್ನೂ ಸಹ ನಿಯಮವನ್ನು ಉಲ್ಲಂಘನೆ ಮಾಡಿ ಕಟ್ಟಿದ್ದಾರೆ. ಅದಕ್ಕೆ ಯಾವುದೇ ಅನುಮತಿಯನ್ನು ಪಡೆದುಕೊಂಡಿಲ್ಲ. ಅದರ ಕಡೆಯೂ ಸಹ ತಾವು ಗಮನಹರಿಸಬೇಕು. ಅಲ್ಲಿ ಇದಕ್ಕೆ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರನ್ನು ಸದಸ್ಯರನ್ನಾಗಿ ನೇಮಕ ಮಾಡಬೇಕಾಗಿತ್ತು. ಆ ಕೆಲಸವನ್ನು ಅಲ್ಲಿ ಮಾಡಿರುವುದಿಲ್ಲ.

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಅಲ್ಲಿ ಏನೇನು violation ಇದೆ, ಅದನ್ನೆಲ್ಲಾ ಪರಿಶೀಲನೆ ಮಾಡುತ್ತೇವೆ. ಮತ್ತೆ ಅಲ್ಲಿ ಕಟ್ಟಿರುವಂತಹ ಕಟ್ಟಡವನ್ನು ಅನುಮತಿ ಇಲ್ಲದೇ ಕಟ್ಟಿದ್ದರೆ ಅದರ ಬಗ್ಗೆಯೂ ಪರಿಶೀಲನೆ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ 719**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೆ, 2015 ರಿಂದ 2018 ರವರೆಗೆ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಕಾಮಗಾರಿಗಳ ಬಗ್ಗೆ ವಿವರವಾದ ಮಾಹಿತಿಯನ್ನು ನಾನು ಕೇಳಿದ್ದೆ. ಇವರು ಅದರ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ, ಯಾವ ಒಂದು ಕೆಲಸವನ್ನು ತೆಗೆದುಕೊಂಡಿದ್ದೇವೆ ಎನ್ನುವ ಮಾಹಿತಿಯನ್ನು ಕೊಟ್ಟಿರುವುದಿಲ್ಲ. ಜಿಲ್ಲೆಯಲ್ಲಿ ಏನಾಗಿದೆ ಎಂದರೆ, ಈ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ವರ್ಕ್ ಪರಿಶಿಷ್ಟ ಜಾತಿ ಮತ್ತು ಗಿರಿಜನ ಅಭಿವೃದ್ಧಿಗಾಗಿ ಕೆಲಸವನ್ನು ತೆಗೆದುಕೊಳ್ಳಬೇಕು. ಆದರೆ, ಅವರ ಹೆಸರಿನಲ್ಲಿ ಜನರಲ್ ಫೀಲ್ಡ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಇದನ್ನು ಕಾನೂನುಬಾಹಿರವಾಗಿ ಮಾಡಿದ್ದಾರೆ. ಏಕೆಂದರೆ, ಈ ಊರಿನಲ್ಲಿ ಕೆಲಸವನ್ನಿಟ್ಟಿದ್ದೇವೆಂದು ಹೇಳುತ್ತಾರೆ. ಆದರೆ, ಎಲ್ಲಿ ಇಟ್ಟಿದ್ದಾರೆಂದು ಹೇಳುತ್ತಿಲ್ಲ. ಅ ವಿಚಾರವಾಗಿ ನಮಗೆ ಬಹಳ ಗೊಂದಲವುಂಟಾಗಿದೆ. ಈ ವಿಚಾರವಾಗಿ ಈಗಾಗಲೇ ಲೋಕೋಪಯೋಗಿ ಇಲಾಖೆಯವರಿಗೆ ಕೇಳಿದರೂ ಸಹ ಅವರು ಸಹ ಇದೇ ರೀತಿಯ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ನಿರ್ದಿಷ್ಟವಾಗಿ ಯಾವ ಹಳ್ಳಿಯಲ್ಲಿ, ಯಾವ ಕಾಮಗಾರಿಯನ್ನು ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದೇವೆ, ಅದನ್ನು ಇಲ್ಲಿ ಹೇಳಿರುವುದಿಲ್ಲ. ಏಕೆಂದರೆ, ಅವರು ಅಲ್ಲಿ ಸರಿಯಾಗಿ ಕೆಲಸ ಮಾಡಿರುವುದಿಲ್ಲ. ಎಸ್‌ಸಿ/ಎಸ್‌ಟಿ ಕಾಲೋನಿಯಲ್ಲಿ ಆ ಒಂದು ಕೆಲಸವನ್ನು ಮಾಡಬೇಕಾಗಿತ್ತು. ಅಲ್ಲಿ ಮಾಡಿರುವುದಿಲ್ಲ. ಜನರಲ್ ಕಾಲೋನಿಯಲ್ಲಿ ಈ ಒಂದು ಕೆಲಸವನ್ನು ಮಾಡಿ ದುಡ್ಡನ್ನು ತೆಗೆದುಕೊಂಡಿದ್ದಾರೆ. ಇದರಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಡಿ.ರೇವಣ್ಣ:–** ಮಾನ್ಯ ಸಭಾಪತಿಯವರೆ, ಯಾವ್ಯಾವ ಊರಿನಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದೇವೆಂದರೆ, 2015–16ನೇ ಸಾಲಿನಲ್ಲಿ 3 ಕಾಮಗಾರಿಗಳು, 2017–18ನೇ ಸಾಲಿನಲ್ಲಿ ಪ್ಯಾಕೇಜ್ ರೀತಿಯಲ್ಲಿ ಸುಮಾರು 28 ಕಾಮಗಾರಿಗಳನ್ನು, ಅದೇ ರೀತಿಯಲ್ಲಿ 12 ಕಾಮಗಾರಿಗಳನ್ನು, 3 ಕಾಮಗಾರಿಗಳನ್ನು, 18 ಕಾಮಗಾರಿಗಳನ್ನು ಒಟ್ಟಾರೆ ಇಷ್ಟು ಕಾಮಗಾರಿಗಳ ವಿವರದ ಅನುಬಂಧವನ್ನು ನಾವು ಉತ್ತರ ಜೊತೆ ಲಗತ್ತಿಸಿದ್ದೇವೆ. ಈ ಕಾಮಗಾರಿಗಳ ಪೈಕಿ ಯಾವುದಾದರೂ ಊರಿನಲ್ಲಿ ಅವ್ಯವಹಾರ ಆಗಿದೆ ಎನ್ನುವ ಬಗ್ಗೆ ನೀವು ಪ್ರಶ್ನೆಯನ್ನು ಕೇಳಿಲ್ಲ. ಅದರ ಬಗ್ಗೆ ಕೇಳಿ, ಆ ರೀತಿಯಲ್ಲಿ ಇದ್ದರೆ ನಾನು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ನಮ್ಮ ಇಲಾಖಾ ಇಂಜಿನಿಯರ್‌ಗೆ ಹೇಳುತ್ತೇನೆ. ಯಾವುದಾದರೂ ಊರಿನಲ್ಲಿ ಈ ರೀತಿಯಲ್ಲಿ ಲೋಪ ಆಗಿದ್ದರೆ ತಿಳಿಸಿ. ಅದಕ್ಕೆ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಯಾವ್ಯಾವ ಊರಿನಲ್ಲಿ ಎಷ್ಟೆಷ್ಟು ಕಾಮಗಾರಿ ಆಗಿದೆ ಎಂದು ಕೇಳಿದ್ದೀರಿ. ಅಷ್ಟು ಪೂರ್ಣ ಮಾಹಿತಿಯನ್ನು ನಾನು ಇಲ್ಲಿ ಕೊಟ್ಟಿದ್ದೇನೆ. ತಮಗೆ ಅನುಬಂಧದಲ್ಲಿ ಅದನ್ನು ಕಳುಹಿಸಿಕೊಟ್ಟಿದ್ದೇನೆ. ಅದರಲ್ಲಿ ಅವ್ಯವಹಾರ ಏನಾದರೂ ನಡೆದಿದ್ದರೆ ನನ್ನ ಗಮನಕ್ಕೆ ತಂದರೆ ಪ್ರಾಮಾಣಿಕವಾಗಿ ತನಿಖೆ ಮಾಡಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ನಾನು ವಿವರವಾದ ಮಾಹಿತಿಯನ್ನು ಕೇಳಿದ್ದೇನೆ. ಯಾವ ಹಳ್ಳಿಯಲ್ಲಿ, ಯಾವ ಕಾಲದಲ್ಲಿ ಯಾವ ಕೆಲಸವನ್ನು ತೆಗೆದುಕೊಂಡಿದ್ದೀರಿ ಎಂದು ನಾನು ಕೇಳಿದ್ದೇನೆ.

**ಸಭಾಪತಿಯವರು:–** ಆ ವಿಚಾರ ತಮ್ಮ ಪ್ರಶ್ನೆಯಲ್ಲಿಯೇ ಇಲ್ಲ.

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೆ, ನಾನು ವಿವರವಾದ ಮಾಹಿತಿಯನ್ನು ಕೇಳಿದ್ದೇನೆ.

**ಶ್ರೀ ಹೆಚ್.ಡಿ.ರೇವಣ್ಣ:–** ಈಗ ಸದರಿ ಪ್ರಶ್ನೆಗೆ ಸಂಬಂಧಪಟ್ಟಂತೆ ಅನುಬಂಧದ ಪ್ರತಿಯನ್ನೇ ತಮಗೆ ಒದಗಿಸಿಕೊಟ್ಟಿದ್ದೇನೆ. ಯಾವ್ಯಾವ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದೇವೆ ಎನ್ನುವುದರ ಬಗ್ಗೆ ಅನುಬಂಧದೊಂದಿಗೆ ಉತ್ತರದ ಪ್ರತಿಯನ್ನು ತಮಗೆ ಕಳುಹಿಸಿಕೊಟ್ಟಿದ್ದೇವೆ. ಮತ್ತೆ ಒಂದು ಪ್ರತಿಯನ್ನು ಕಳುಹಿಸಿಕೊಡುತ್ತೇನೆ, ನೋಡಿ.

**ಶ್ರೀ ಅರವಿಂದ ಕುಮಾರ್ ಅರಳಿ:–** ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ: 730**
**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಪ್ರಕೃತಿ ವಿಕೋಪದಿಂದ ಮತ್ತು ಇಲಾಖೆಯ ನಿರ್ಲಕ್ಷ್ಯದಿಂದ, ಹಣಕಾಸಿನ ಕೊರತೆಯಿಂದ ಈ ಮೂರು ಕಾರಣಗಳಿಂದ ನಿರ್ಮಾಣವಾಗಬೇಕಾಗಿರುವ ಲೋಕೋಪಯೋಗಿ ರಸ್ತೆಗಳ ಉದ್ದ-ಅಗಲ ಎಷ್ಟು ಕಿ.ಮೀ.ಗಳು ಎಂದು ವಿವರಗಳನ್ನು ಕೇಳಿದ್ದೆ.

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಪ್ರಕೃತಿ ವಿಕೋಪದಿಂದ ಕರಾವಳಿ ಮತ್ತು ಮಲೆನಾಡು ಭಾಗದ ರಸ್ತೆಗಳು ಹಾನಿಗೀಡಾಗಿದ್ದು, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ ಹಾಗೂ ರಾಷ್ಟ್ರೀಯ ಹೆದ್ದಾರಿಗಳು ಹೀಗೆ 8 ಜಿಲ್ಲೆಗಳ ರಸ್ತೆಗಳು ಹಾಳಾಗಿದ್ದು, ಒಟ್ಟು 2164.54 ಕಿ.ಮೀ. ರಸ್ತೆ ಹಾನಿಗೀಡಾಗಿದ್ದು, ಅಂದಾಜು ನಷ್ಟ 1896.13 ಕೋಟಿ ರೂಪಾಯಿಗಳು ಆಗಿದೆ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು 8 ಜಿಲ್ಲೆಗಳನ್ನು ಇಲ್ಲಿ ಉಲ್ಲೇಖ ಮಾಡಿದ್ದಾರೆ. ಅದರಲ್ಲಿ ಕೇಂದ್ರದ ಮತ್ತು ರಾಜ್ಯದ ಅನುದಾನ ಎಷ್ಟು ಬೇಕಾಗಿದೆ ಮತ್ತು ಎಷ್ಟು ದೊರಕುತ್ತಿದೆ ಎನ್ನುವಂತಹ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಉತ್ತರವಾಗಿ ಕೊಡಗು ಜಿಲ್ಲೆಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ ಅಡಿಯಲ್ಲಿ ತಾತ್ಕಾಲಿಕವಾಗಿ ದುರಸ್ಥಿಗಾಗಿ ರೂ.50.00 ಲಕ್ಷಗಳ ಅನುದಾನ ಬಿಡುಗಡೆಯಾಗಿದೆ ಎಂದು ಹೇಳಿದ್ದಾರೆ. ಸದರಿ ಅನುದಾನದಲ್ಲಿ 53 ತಾತ್ಕಾಲಿಕ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಒಟ್ಟು 138.67 ಕಿಮೀ ರಸ್ತೆಯನ್ನು ದುರಸ್ಥಿಗೊಳಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಎಂದು ಹೇಳಿದ್ದಾರೆ. ಇಲ್ಲಿ ಹಾನಿಗೀಡಾದ ರಸ್ತೆಗಳ ಉದ್ದವನ್ನು 2164.54 ಕಿ.ಮೀ. ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಹಾಗೆಯೇ ಇದಕ್ಕೆ ಬೇಕಾಗಿರುವಂತಹ ಮೊತ್ತ 1896.13 ಕೋಟಿ ರೂಪಾಯಿಗಳು ಎಂದು ತಾವು ಹೇಳಿದ್ದೀರಿ. ಇದ್ಯಾವುದೂ ಸಹ ತಾಳೆಯಾಗುತ್ತಿಲ್ಲ. ಇಲ್ಲಿ ಮಾನ್ಯ ಸಚಿವರಾದ ಶ್ರೀ ರೇವಣ್ಣಾಜಿಯವರು ಗಮನಿಸಬೇಕು. ದುರಸ್ತಿ ಎಂದು ಹೇಳಿ, ಕೇಂದ್ರಕ್ಕೆ ನಾವು ನೆರವನ್ನು ಕೇಳಬೇಕಾದರೆ ಅನೇಕ ಇಲಾಖೆಗಳ ಮೂಲಕ ಪ್ರಶ್ನೋತ್ತರದ ಮೂಲಕ ನೈಜ ಸ್ಥಿತಿಯನ್ನು ನಾವು ಅರ್ಥ ಮಾಡಿಕೊಳ್ಳುವುದಕ್ಕೆ ಮಾಹಿತಿಯನ್ನು ಕೇಳುತ್ತಿದ್ದೇವೆ.

ಈಗ ಮುಖ್ಯವಾಗಿ ಬಹು ದೊಡ್ಡ ಅನಾಹುತ ಕರಾವಳಿ ಜಿಲ್ಲೆಗಳಲ್ಲಿ, ದಕ್ಷಿಣ ಕನ್ನಡ, ಕೊಡಗು, ಉಡುಪಿ,ಉತ್ತರ ಕನ್ನಡ, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು ಈ ಭಾಗಗಳಲ್ಲಿ ಆಗಿದೆ. ಶಾಶ್ವತ ಕಾಮಗಾರಿಗಳಿಗೆ ಎಷ್ಟು ಹಣ ಬೇಕು, ದುರಸ್ಥಿಗಾಗಿ ಎಷ್ಟು ಹಣ ಬೇಕೆಂದು ಕೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ, ಈ ವಿಚಾರ ಇಲ್ಲಿ ತಾಳೆಯಾಗುತ್ತಿಲ್ಲ.

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಕೊಡಗು ಜಿಲ್ಲೆಯಲ್ಲಿ 620.08 ಕಿ.ಮೀ. ಉದ್ದದ ರಸ್ತೆ ಹಾಳಾಗಿದೆ. ಅದಕ್ಕೆ ಸುಮಾರು 585.30 ಕೋಟಿ ರೂಪಾಯಿಗಳು ಶಾಶ್ವತ ಕೆಲಸ ಮಾಡಲಿಕ್ಕೆ ಬೇಕಾಗುತ್ತದೆ. ಅದೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೀತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 183.17 ಕಿ.ಮೀ. ಉದ್ದದ ರಸ್ತೆ ಹಾಳಾಗಿದ್ದು, ಅದಕ್ಕೆ ಸುಮಾರು 66.73 ಕೋಟಿ ರೂಪಾಯಿಗಳು ಶಾಶ್ವತ ಕೆಲಸ ಮಾಡಲಿಕ್ಕೆ ಬೇಕು. ಉಡುಪಿ ಜಿಲ್ಲೆಯಲ್ಲಿ 137.99 ಕಿ.ಮೀ. ಉದ್ದದ ರಸ್ತೆ ಹಾಳಾಗಿದ್ದು, ಅದಕ್ಕೆ ಸುಮಾರು 94.11 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದೇ ರೀತಿಯಲ್ಲಿ ಹಾಸನ ಜಿಲ್ಲೆಯಲ್ಲಿ 329.98 ಕಿ.ಮೀ. ಉದ್ದದ ರಸ್ತೆ ಹಾಳಾಗಿದ್ದು, 261.81 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ 155.05 ಕಿ.ಮೀ. ಉದ್ದದ ರಸ್ತೆ ಹಾಳಾಗಿದ್ದು, 61.13 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ 64.85 ಕಿ.ಮೀ. ಉದ್ದದ ರಸ್ತೆ ಹಾಳಾಗಿದ್ದು, 30.27 ಕೋಟಿ ರೂಪಾಯಿಗಳು ಬೇಕಾಗುತ್ತದೆ. ”

(ಮುಂದುವರೆದಿದೆ...

(453) 14.12.2018 11.00 SV-RN

**ಶ್ರೀ ಹೆಚ್.ಡಿ.ರೇವಣ್ಣ (ಮುಂದುವರೆದುದು...**

ಉತ್ತರ ಕನ್ನಡ ಜಿಲ್ಲೆಯಲ್ಲಿ 135.90 ಕಿ.ಮೀ. ಶಾಶ್ವತವಾದ ರಸ್ತೆಯನ್ನು ಮಾಡಲು ರೂ.14.51 ಕೋಟಿ ಬೇಕು. ರಾಷ್ಟ್ರೀಯ ಹೆದ್ದಾರಿಗಳು 537 ಕಿ.ಮೀ.ಗೆ ಒಟ್ಟು ರೂ.771 ಕೋಟಿ ಬೇಕಾಗುತ್ತದೆ. ಮೊದಲನೆಯ ಹಂತದಲ್ಲಿ 153 ತಾತ್ಕಾಲಿಕ ಕಾಮಗಾರಿಗಳನ್ನು ನಾವು ತೆಗೆದುಕೊಂಡಿದ್ದೇವೆ. 137 ಕಿ.ಮೀ. ಕಾಮಗಾರಿಗಳನ್ನು ರೂ.50 ಕೋಟಿಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಎರಡನೆಯ ಹಂತದಲ್ಲಿ ರಾಜ್ಯದಲ್ಲಿ ಸುಮಾರು ರೂ.200 ಕೋಟಿ ಹಣವನ್ನು ನೀಡಲಾಗಿದ್ದು, ಅದು ಕೇವಲ ರಾಜ್ಯ ಸರ್ಕಾರದ ಹಣವೇ ಆಗಿದೆ. ಕೇಂದ್ರ ಸರ್ಕಾರದಿಂದ ಹತ್ತು ರೂಪಾಯಿಯೂ ಬಂದಿರುವುದಿಲ್ಲ. ರಾಜ್ಯ ಸರ್ಕಾರದ ಹಣದಲ್ಲಿ ಲೋಕೋಪಯೋಗಿ ಇಲಾಖೆಯು ರೂ. 92 ಕೋಟಿಯನ್ನು ಕೊಟ್ಟಿದೆ. ಎಂಟು ಜಿಲ್ಲೆಗಳಿಗೆ ಏನು ಬೇಕು ಎಂಬುದರ ಬಗ್ಗೆ ಆಯಾ ಜಿಲ್ಲಾಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಂಡು ಕ್ರಮ ಕೈಗೊಳ್ಳಲು ಪ್ರಯತ್ನಿಸಲಾಗುತ್ತಿದೆ.

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೆ, ಶಿರಾಡಿ ಘಾಟ್ ನಿರ್ಬಂಧದಿಂದ ಎಷ್ಟು ಆರ್ಥಿಕ ನಷ್ಟ ಉಂಟಾಗಿದೆ ಎಂದು ಕೇಳಿದ್ದೇನೆ. ಇದಕ್ಕೆ ಉತ್ತರಿಸುವಲ್ಲಿ ಮಾನ್ಯ ಸಚಿವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಏಕೆಂದರೆ ರಸ್ತೆ ಬದಿ ಅನೇಕ ಕೊರತೆಗಳುಂಟಾಗುತ್ತಿದೆ. ಅವರು ಅನೇಕ ತಜ್ಞರ ಸಲಹೆಯನ್ನು ಪಡೆದುಕೊಳ್ಳುತ್ತಿದ್ದಾರೆ. ರಸ್ತೆಯಿಂದ 10-12 ಅಡಿ ಕಾಡಿನ ಕಡೆ ಅಥವಾ ಘಟ್ಟದ ಕಡೆ ಇರುವಂತಹ ಭೂಮಿಯನ್ನು ಅರಣ್ಯ, ಪರಿಸರ ಇಲಾಖೆಯೊಂದಿಗೆ ಮಾತನಾಡಿ ಮಾಡದಿದ್ದರೆ, ನದಿ ಪಾತ್ರದಲ್ಲಿ ಸರ್ಕಾರ ಎಷ್ಟು ಹಣವನ್ನು ಹಾಕಿದರೂ ಅದು ಹೊಳೆಗೆ ಹೋದಂತಾಗುತ್ತದೆ. ಸಾಕಷ್ಟು ರೀತಿಯಲ್ಲಿ ಸಣ್ಣ ವ್ಯಾಪಾರಿಗಳು ಇದರಿಂದ ತೊಂದರೆಗೀಡಾಗಿದ್ದಾರೆ. ಅದು ಮಲೆನಾಡಿಗೆ ಹೋಗತಕ್ಕಂತಹ ಪ್ರಮುಖ ರಸ್ತೆಯಾಗಿದ್ದು, ಅದನ್ನು ಪರಿಗಣಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂಬುದನ್ನು ದಯಮಾಡಿ ಒಪ್ಪಿಕೊಳ್ಳಬೇಕು ಹಾಗೂ ಅದಕ್ಕೆ ಸರ್ಕಾರ ಪರಿಹಾರವನ್ನು ಒದಗಿಸಬೇಕು ಎಂದು ಆಗ್ರಹಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಸರ್ಕಾರ ಯಾವುದೇ ರೀತಿಯಲ್ಲಿಯೂ ವಿಫಲವಾಗಿಲ್ಲ ಎಂಬುದನ್ನು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಶಿರಾಡಿ ಘಾಟ್ ರಸ್ತೆಯು ರಾಜ್ಯ ಲೋಕೋಪಯೋಗಿ ಇಲಾಖೆಯ ಅಧೀನಕ್ಕೆ ಒಳಪಡುವುದಿಲ್ಲ. National Highway Authority ಅವರ ಅಧೀನಕ್ಕೆ ಒಳಪಡುತ್ತದೆ. ಮಾನ್ಯ ಸದಸ್ಯರು ಸುರಕ್ಷಿತವಾಗಿ ಮಂಗಳೂರು, ಉಡುಪಿ, ಕಾರವಾರಕ್ಕೆ ಹೋಗುವ ಸಲುವಾಗಿ ಕೇಂದ್ರ ಸಚಿವರಾದ ಶ್ರೀ ನಿತಿನ್ ಗಡ್ಕರಿಯವರನ್ನು ಮೂರು ಬಾರಿ ಭೇಟಿ ಮಾಡಿದ್ದೇವೆ. ಅವರು ಒಂದು ಪತ್ರಿಕಾ ಗೋಷ್ಠಿಯನ್ನು ನಡೆಸಿ ಶಿರಾಡಿ ಘಾಟ್‌ನಲ್ಲಿ 21 ಕಿ.ಮೀ. ಸುರಂಗ ಮಾರ್ಗದ ರಸ್ತೆಯನ್ನು ನಿರ್ಮಾಣ ಮಾಡಲು ಇನ್ನು ಆರು ತಿಂಗಳುಗಳೊಳಗಾಗಿ ಟೆಂಡರ್ ಅನ್ನು ಕರೆಯಲಾಗುವುದು ಎಂದು ಹೇಳಿದ್ದಾರೆ. ಇದರ ವೆಚ್ಚ ರೂ. 10,000 ಕೋಟಿ ಎಂದು ಹೇಳಿದ್ದಾರೆ. ಅದನ್ನು ತಾವು ಸಹ ದಿನಪತ್ರಿಕೆಗಳಲ್ಲಿ ಓದಿರಬಹುದು. ಆದರೂ ಮಾನ್ಯ ಸದಸ್ಯರು ಕೇಳಬೇಕೆಂದು ಕೇಳುತ್ತಿದ್ದಾರೆ. ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಮಾನ್ಯ ಸದಸ್ಯರನ್ನು ಸುರಕ್ಷಿತವಾಗಿ ಮಂಗಳೂರು ತಲುಪಿಸುವುದಕ್ಕೆ ಏನು ಬೇಕೋ ಅದನ್ನು ನಾವು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ 660**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಒದಗಿಸಿರುವ ಉತ್ತರ ಕೈ ಸೇರಿದೆ. ಬಹಳ ಸಮಾಧಾನ ಮತ್ತು ಹರ್ಷವನ್ನು ತರುವ ಸಂಗತಿ ಏನೆಂದರೆ ಈ ತಿಂಗಳ ಅಂತ್ಯದ ವೇಳೆಗೆ ಬೆಂಗಳೂರು ಮತ್ತು ಮೈಸೂರು ರಾಜ್ಯ ಹೆದ್ದಾರಿ ಸಂಖ್ಯೆ 275 ಅನ್ನು ಅಗಲೀಕರಣ ಮಾಡುವಂತಹ ಕಾಮಗಾರಿಗೆ ಚಾಲನೆ ನೀಡಲಾಗುತ್ತಿದೆ. ಇನ್ನೂ ಹೆಚ್ಚಿನ ಸಂತೋಷದ ವಿಷಯವೇನೆಂದರೆ ಷಟ್ಪಥ ರಸ್ತೆಯ ಜೊತೆಗೆ ಎರಡೂ ಬದಿಯಲ್ಲಿ ಸರ್ವೀಸ್ ರಸ್ತೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಬೆಂಗಳೂರು ಮತ್ತು ಮೈಸೂರು ನಡುವಣ ರಸ್ತೆಯು ಅತ್ಯಂತ ಹೆಚ್ಚು ಸಂಚಾರ ದಟ್ಟಣೆಯುಳ್ಳ ರಸ್ತೆಯಾಗಿದ್ದು, ಕೇವಲ 157 ಕಿ.ಮೀ. ದೂರವನ್ನು ಕ್ರಮಿಸಲು 6-7 ಗಂಟೆಗಳ ಕಾಲಾವಕಾಶವನ್ನು ತೆಗೆದುಕೊಳ್ಳುತ್ತಿದೆ. ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ ಹಾಗೂ ಶ್ರೀರಂಗಪಟ್ಟಣಗಳಲ್ಲಿ ಬೈಪಾಸ್ ರಸ್ತೆಯನ್ನು ಮಾಡಲಾಗುತ್ತದೆಯೋ ಅಥವಾ ಮೇಲ್ಸೇತುವೆಯ ಮೂಲಕ ಹಾದು ಹೋಗಲಾಗುವುದೋ ಎಂಬುದನ್ನು ಸ್ಪಷ್ಟಪಡಿಸಬೇಕು. ಎರಡನೆಯದಾಗಿ, ಮಂಡ್ಯ ನಗರದ ಎರಡೂ ಕಡೆಗಳಲ್ಲಿ ಬೈಪಾಸ್ ರಸ್ತೆಯನ್ನು ಮಾಡಿಕೊಡುವುದಾದರೆ ಸಂಚಾರ ದಟ್ಟಣೆ ಬಹಳ ಸುಲಭವಾಗುತ್ತದೆ ಹಾಗೂ ಮಂಡ್ಯ ನಗರ ಅಭಿವೃದ್ಧಿಯಾಗುತ್ತದೆ. ಮೂರನೆಯದಾಗಿ ಮಾನ್ಯ ಸಚಿವರು ಎರಡು ವರ್ಷ ಆರು ತಿಂಗಳ ಕಾಲಾವಕಾಶವನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಸಚಿವರ ದಕ್ಷತೆ ಹಾಗೂ ಸಾಮರ್ಥ್ಯಕ್ಕೆ ಅಷ್ಟು ಕಾಲಾವಕಾಶ ಏಕೆ ಬೇಕು? ಆದಷ್ಟು ಬೇಗ ಮುಗಿಸಿಕೊಡಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಶ್ರೀಕಂಠೇಗೌಡರ ಆಶಯದಂತೆ ಬೆಂಗಳೂರು ಮೈಸೂರು ನಡುವೆ 10 ಪಥದ ರಸ್ತೆಯನ್ನು ನಿರ್ಮಿಸಲಾಗುವುದು. 18ನೇ ಕಿ.ಮೀ. ನಿಂದ 74ನೇ ಕಿ.ಮೀ. ವರೆಗೆ ಅಂದರೆ ನಿಡಘಟ್ಟದವರೆಗೆ ಮೊದಲನೇ ಪ್ಯಾಕೇಜ್ ಆಗಿದ್ದು, ಇದಕ್ಕೆ ರೂ. 3,501 ಕೋಟಿ ವೆಚ್ಚವಾಗಲಿದೆ. ಎರಡನೇ ಪ್ಯಾಕೇಜ್ ಆಗಿ 74.200ರಿಂದ 135.304 ಕಿ.ಮೀ. ಅಂದರೆ, ನಿಡಘಟ್ಟದಿಂದ ಮೈಸೂರಿನವರೆಗಿನ ಕಾಮಗಾರಿಗೆ ಸುಮಾರು ರೂ.2,919 ಕೋಟಿ ಪ್ಯಾಕೇಜ್ ಇದಾಗಿದೆ. ಒಟ್ಟು ರೂ.5,500 ಕೋಟಿ ಅಂದಾಜು ಇರಬಹುದು. ಈ ರಸ್ತೆಯ ನಿರ್ಮಾಣಕ್ಕಾಗಿ ಬೇಕಾಗಿರುವ ಶೇ. 80ರಷ್ಟು ಜಾಗವನ್ನು National Highway Authority ಅವರಿಗೆ ಕೊಡಬೇಕು. ಅಷ್ಟನ್ನೂ ಈಗಾಗಲೇ ಅವರಿಗೆ ಬಿಟ್ಟುಕೊಡಲಾಗಿದೆ. ಕೇಂದ್ರ ಮಂತ್ರಿಗಳ ಜೊತೆಯಲ್ಲಿ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾನು ಮಾತನಾಡಿದ್ದೇವೆ. ಜನವರಿ ಮೊದಲನೇ ವಾರದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದು ಹೇಳಿದ್ದಾರೆ. ರಾಮನಗರಕ್ಕಿಂತಲೂ 8 ಕಿ.ಮೀ. ಹಿಂದೆಯೇ ಬೈಪಾಸ್ ಪ್ರಾರಂಭವಾಗಿ ಚನ್ನಪಟ್ಟಣವನ್ನೂ ಒಳಗೊಂಡಂತೆ ಒಂದೇ ಬೈಪಾಸ್ ಮಾರ್ಗ ಇರುತ್ತದೆ. ರಾಮನಗರ-ಚನ್ನಪಟ್ಟಣ ಎರಡೂ ನಗರಗಳ ಒಳಗೆ ಹೋಗಲು elevated ರಸ್ತೆಯನ್ನು ಕೇಳಿರುತ್ತೇವೆ. ಅದನ್ನೂ ಕೊಡುತ್ತೇವೆಂದು ಹೇಳಿದ್ದಾರೆ. ಅದೇ ರೀತಿ ಮಂಡ್ಯದಲ್ಲಿಯೂ ಬೈಪಾಸ್ ಮತ್ತು elevated ರಸ್ತೆ ಎರಡೂ ಇರುತ್ತದೆ. ಮದ್ದೂರು ಬಳಿಯೂ ಇದೇ ಬರುತ್ತದೆ. ಆಗಲೇ ಇದರ ಬಗ್ಗೆ ಕೇಂದ್ರ ಸಚಿವರ ಬಳಿ ಮಾತನಾಡಿ ಮಾನ್ಯ ಶ್ರೀಕಂಠೇಗೌಡರು ಸುರಕ್ಷಿತವಾಗಿ ಮೈಸೂರು ತಲುಪಲಿಕ್ಕೆ ಕ್ರಮವನ್ನು ಕೈಗೊಳ್ಳಲಾಗುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ರಸ್ತೆಯ ನಿರ್ಮಾಣದಲ್ಲಿ ಕೇಂದ್ರದ ಪಾಲೆಷ್ಟು ಹಾಗೂ ರಾಜ್ಯದ ಪಾಲೆಷ್ಟು ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಇದು ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಹಣ. ಒಂದು ರೂಪಾಯಿ ಸಹ ರಾಜ್ಯ ಸರ್ಕಾರದ ಹಣ ಇದರಲ್ಲಿ ಇರುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಇದನ್ನು ಕೇಳಬೇಕಿದೆ ಕೇಳಿದ್ದಾರೆ.

**ಪ್ರಶ್ನೆ ಸಂಖ್ಯೆ 667**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೆ, ಉತ್ತರವನ್ನು ನೀಡಿರುತ್ತಾರೆ. ಪೊಲೀಸ್ ಇಲಾಖೆಯ ಕಾನ್ಸ್‌ಟೇಬಲ್‌ಗಳ ವಿಚಾರದಲ್ಲಿ ಸಮಸ್ಯೆಗಳು ಎದ್ದು ಕಾಣುತ್ತಿದೆ. ಹಿಂದೆಯೂ ಸಹ ಅನೇಕ ಸಚಿವರು ಇದರ ಬಗ್ಗೆ ಗಮನವನ್ನು ಹರಿಸಿದ್ದರೂ ಯಾವುದೂ ಕೂಡ ಸರಿಯಾದ ರೀತಿಯಲ್ಲಿ ಕಾರ್ಯಗತ ಆಗದಿರುವುದಕ್ಕಾಗಿ ಮಾನ್ಯ ಗೃಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರು ಹಾಗೂ ಉಪ ಮುಖ್ಯಮಂತ್ರಿಗಳು ಇವರ ರಕ್ಷಣೆಗೆ ಬರಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ. ಪೊಲೀಸ್ ಇಲಾಖೆಯಲ್ಲಿ ಸುಮಾರು ಒಂದು ಲಕ್ಷ ಪೊಲೀಸ್ ಪಡೆ ಇದ್ದರೆ, ಇದರಲ್ಲಿ 30,000 ಸಿ.ಎ.ಆರ್., ಡಿ.ಎ.ಆರ್. ಮತ್ತು ಕೆ.ಎಸ್.ಆರ್.ಪಿ. ಈ ರೀತಿಯಾಗಿವೆ. ಇದರಲ್ಲಿ 12,000 ಹುದ್ದೆಗಳು ಖಾಲಿ ಇವೆ. ಆಯ್ಕೆ ಮಾಡುವ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆಯನ್ನು ಕೇಳಿದ್ದರೂ ಸಹ ಸಾಕಷ್ಟು ಜನ ಪದವೀಧರರು, ಸ್ನಾತಕೋತ್ತರ ಪದವೀಧರರು ಇಲ್ಲಿ ನೇಮಕಗೊಂಡಿರುತ್ತಾರೆ. ಬೇರೆ ರಾಜ್ಯಗಳಲ್ಲಿ ಇವರಿಗೆ ಸಂಬಂಧಿಸಿದಂತೆ ಏಕಗವಾಕ್ಷಿ ಯೋಜನೆಯಿದೆ. ಮಹಾರಾಷ್ಟ್ರ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಈಗಾಗಲೇ ಈ ಪದ್ಧತಿಯು ಜಾರಿಯಾಗಿದ್ದು, ಕೆಲಸವನ್ನು ಮಾಡುತ್ತಿದ್ದಾರೆ. ಕೆಲವು ಬಾರಿ ಗೃಹರಕ್ಷಕ ದಳದವರನ್ನು ತೆಗೆದುಕೊಂಡು ಕೆಲಸ ಮಾಡಿಸುತ್ತಾರೆ. ಆದರೆ ಡಿ.ಎ.ಆರ್., ಸಿ.ಎ.ಆರ್. ಮತ್ತು ಕೆ.ಎಸ್.ಆರ್.ಪಿ.ಯವರನ್ನು ಯಾವುದಕ್ಕೂ ಬಳಸಿಕೊಳ್ಳದೆ ಅವರನ್ನು ಪ್ರತ್ಯೇಕವಾಗಿ ಇರಿಸಲಾಗಿದೆ. ಹಾಗಾಗಿ ಗೃಹರಕ್ಷಕ ದಳದವರಿಗೆ ಇರುವ ಮಾನ್ಯತೆಯೂ ಇವರಿಗೆ ಇರುವುದಿಲ್ಲವೆಂದಾದಲ್ಲಿ, ಹೆಚ್ಚಿನ ವಿದ್ಯಾರ್ಹತೆಯಿರುವವರು ಇಲ್ಲಿ ನೇಮಕಗೊಂಡಿದ್ದು ಅವರನ್ನು ಕೇವಲವಾಗಿ ನೋಡಿದಂತೆ ಆಗುತ್ತದೆ.

1977ರಲ್ಲಿ ಇದ್ದಂತಹ ಧರ್ಮವೀರ ವರದಿಯನ್ನು ದಯಮಾಡಿ ಜಾರಿ ಮಾಡಬೇಕು. ಶ್ರೀ ರೂಪಕ್ ಕುಮಾರ್ ದತ್ತಾ ಅವರ ಅಧ್ಯಕ್ಷತೆಯಲ್ಲಿ ಹಿಂದೆಯೇ ಸಮಿತಿಯು ರಚನೆಯಾಗಿದೆ. ದಯಮಾಡಿ ಡಿ.ಎ.ಆರ್., ಸಿ.ಎ.ಆರ್. ಮತ್ತು ಕೆ.ಎಸ್.ಆರ್.ಪಿ.ಯಲ್ಲಿರುವ ವಯಸ್ಸಾದವರನ್ನು ಬೇರೆ ಕಡೆಗೆ ವರ್ಗಾಯಿಸಬೇಕು. ಒಂದೇ ಇಲಾಖೆಯಲ್ಲಿ ಕೆಲಸಕ್ಕೆ ಸೇರಿ ನಿವೃತ್ತಿಯಾಗುವ ಬದಲು ಬೇರೆ ಬೇರೆ ಕಡೆಗಳಲ್ಲಿ ಕೆಲಸ ಮಾಡುವಂತಹ ಅವಕಾಶವನ್ನು ಮಾಡಿಕೊಡಬೇಕು. ಈಗಾಗಲೇ ಸುಮಾರು 81 ಜನ ಈ ವಿಚಾರದಲ್ಲಿ ಶಿಫಾರಸ್ಸು ಪತ್ರಗಳನ್ನು ಕೊಟ್ಟಿರುತ್ತಾರೆ. ನನಗೂ ಕೂಡ ಶಿಫಾರಸ್ಸು ಪತ್ರವನ್ನು ಕೇಳಿಕೊಂಡು ಬಂದಾಗ ನಾನು ಅದನ್ನು ಪ್ರಶ್ನೆ ಮಾಡಿರುತ್ತೇನೆ.

ಹಿಂದೆ ನಮ್ಮ ಭಾಗದವರೇ ಆಗಿದ್ದ ಮಾನ್ಯ ವಾಟಾಳ್ ನಾಗರಾಜ್ ಅವರು ಪೊಲೀಸರಿಗೆ ಮುಂಚೆ ಇದ್ದಂತಹ ಸಮವಸ್ತ್ರವಾದ ಚಡ್ಡಿಯನ್ನು ಬದಲಾವಣೆ ಮಾಡಿ ಪ್ಯಾಂಟ್ ಅನ್ನು ಹೊಸ ಸಮವಸ್ತ್ರವನ್ನಾಗಿ ಜಾರಿಗೆ ತಂದರು. ಅದೇ ರೀತಿ ಈಗಲೂ ಮಾನ್ಯ ಉಪ ಮುಖ್ಯಮಂತ್ರಿಗಳು ಪೊಲೀಸ್ ಪೇದೆಗಳ ರಕ್ಷಣೆಗೆ ಬರಬೇಕು. ಅದರಿಂದ ಅವರಿಗೆ ಇನ್ನೂ ಹೆಚ್ಚಿನ ಗೌರವ ದೊರೆಯುತ್ತದೆ. ಕಳೆದ 60 ವರ್ಷಗಳಿಂದ ಯಾರೂ ಕೂಡ ಇವರ ಪರವಾಗಿ ದನಿಯನ್ನು ಎತ್ತಿರುವುದಿಲ್ಲ. ಮೊದಲನೆಯದಾಗಿ ನಾನು ಇವರ ಬಗ್ಗೆ ದನಿ ಎತ್ತಿರುತ್ತೇನೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, ಮಾನ್ಯ ಧರ್ಮಸೇನ ಅವರ ಪ್ರಶ್ನೆಗೆ ಪೂರಕವಾಗಿ ನನ್ನದೊಂದು ಪ್ರಶ್ನೆಯಿದೆ. ಪೊಲೀಸ್ ಇಲಾಖೆಯಲ್ಲಿ ರಾಜ್ಯ ಮೀಸಲು ಪಡೆ, ಕೇಂದ್ರ ಮೀಸಲು ಪಡೆ ಎಂಬುದಾಗಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನಾಲ್ಕು ರೀತಿಯಲ್ಲಿ ನೇಮಕಾತಿಯನ್ನು ವಿಭಿನ್ನವಾಗಿ ಮಾಡಲಾಗುತ್ತಿದೆ. ಅವರ ಕೋರಿಕೆಯೇನೆಂದರೆ ಧರ್ಮವೀರ ಸಮಿತಿಯ ವರದಿಯನ್ನು ಜಾರಿಗೊಳಿಸಬೇಕು ಅಥವಾ ಕೇರಳದ ಕೆ.ಟಿ.ಥಾಮಸ್ ವರದಿಯ ಮಾದರಿಯನ್ನು ರಾಜ್ಯದಲ್ಲಿಯೂ ಜಾರಿಗೊಳಿಸಬೇಕು. ಸಿವಿಲ್ ಪೊಲೀಸ್‌ನಿಂದ ರಿಸರ್ವ್ ಪೊಲೀಸ್‌ಗೆ, ಅದೇ ರೀತಿ ರಿಸರ್ವ್ ಪೊಲೀಸ್‌ನಿಂದ ಸಿವಿಲ್ ಪೊಲೀಸ್‌ಗೆ ಬದಲಾವಣೆಯನ್ನು ಪಡೆಯಲು ಏಕರೂಪ/ಏಕಗವಾಕ್ಷಿ ಪದ್ಧತಿ ಎಂದು ಇದೆ. ಮಾನ್ಯ ಗೃಹ ಸಚಿವರಿಗೆ ಎಲ್ಲವೂ ತಿಳಿದಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಬೇರೆ ರಾಜ್ಯಗಳಲ್ಲಿ ಈಗಾಗಲೇ ಇದೆ. ಅಂತೆಯೇ ಇಲ್ಲಿಯೂ common ಆಗಲಿ. ಒಬ್ಬ ವ್ಯಕ್ತಿಯು ಕೆ.ಎಸ್.ಆರ್.ಪಿ ಅಥವಾ ಸಿ.ಎ.ಆರ್.ನಲ್ಲಿ ನೇಮಕಗೊಂಡು ಜೀವನ ಪರ್ಯಂತ ಇರುವುದು ಒಳ್ಳೆಯದಲ್ಲ. mixup ಆಗಲಿ. ಹೋಗುತ್ತಿರುವ ಅಥವಾ ಬರುತ್ತಿರುವ ವ್ಯವಸ್ಥೆಯನ್ನು ಮಾಡಬೇಕು.

**(ಮುಂದುವರೆದಿದೆ...)**

(454) 14.12.2018 (11.10) ಕೆಜಿ.ವಿಕೆ

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಎಲ್ಲವೂ ಕೂಡ ಆಗುತ್ತದೆಂದು ಹೇಳಿದ್ದಾರೆ. ಆದರೆ, ಯಾವುದು ಕೂಡ ಆಗದೇ ಇರುವುದರಿಂದ, ಇದು ದೊಡ್ಡ ಮಟ್ಟದಲ್ಲಿ ಇರುವುದರಿಂದ ದಯವಿಟ್ಟು ಇದನ್ನು ವಿಶೇಷ ಚರ್ಚೆಗೆ ತೆಗೆದುಕೊಳ್ಳಬೇಕು.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಿಗೆ convince ಆಗಿದೆ. ಇದರಲ್ಲಿ ಯಾವುದೇ ಸಮಸ್ಯೆ ಇಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಮೊದಲು ಮಾನ್ಯ ಸಚಿವರು ಉತ್ತರ ಕೊಡಲಿ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಮೀಸಲು ಪೊಲೀಸ್‌ರವರನ್ನು ಸಮಾಜ ಇರಬಹುದು, ಉನ್ನತ ಅಧಿಕಾರಿಗಳು ಇರಬಹುದು ಇವರು ನೋಡುವಂತಹ ರೀತಿಯೇ ಬೇರೆ. ಸಿವಿಲ್ ಪೊಲೀಸ್‌ರವರನ್ನು ನೋಡುವಂತಹ ರೀತಿಯೇ ಬೇರೆ. ಒಂದು ತರಹ ಏನಾಗಿದೆ ಎಂದರೆ, ಮೀಸಲು ಪೊಲೀಸ್ ಪಡೆಯಲ್ಲಿ ಕೆಲಸ ಮಾಡುವವರನ್ನು second grade citizen ರವರನ್ನು ನೋಡುವ ರೀತಿಯಲ್ಲಿ ನೋಡುತ್ತಾರೆ. ಸಮಾಜವು ಸಹ ಹಾಗೆಯೇ ನೋಡುತ್ತದೆ, ಉನ್ನತ ಅಧಿಕಾರಿಗಳು ಕೂಡ ಹಾಗೆಯೇ ನೋಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೀಸಲು ಪೊಲೀಸರಿಗೆ ಎಸ್.ಎಸ್.ಎಲ್.ಸಿ., minimum qualification ಇಟ್ಟಿದ್ದಾರೆ. ಸಿವಿಲ್ ಪೊಲೀಸರಿಗೆ minimum qualification ಪಿ.ಯು.ಸಿ., ಇಟ್ಟಿದ್ದಾರೆ. ಮೊದಲು ಇದು ತಿದ್ದುಪಡಿಯಾಗಬೇಕು. ಇದಕ್ಕೆ ಏಕರೂಪ ಆಗಬೇಕು. ಅಲ್ಲಿ ಪಿ.ಯು.ಸಿ., ಇದ್ದರೆ ಇಲ್ಲಿಯೂ ಪಿ.ಯು.ಸಿ., ಇರಬೇಕು. ಆದರೆ, ಎಲ್ಲರಿಗೂ ಒಂದೇ ವೇತನ ಇದೆ. ಆದರೆ, ವಿದ್ಯಾರ್ಹತೆಯಲ್ಲಿ ಮಾತ್ರ ವ್ಯತ್ಯಾಸ ಇದೆ. ಮೊದಲು ಇದನ್ನು ತಿದ್ದುಪಡಿ ಮಾಡಿ ಏಕರೂಪ ಮಾಡಬೇಕು. ಆಮೇಲೆ inter-transfer system ತರಬೇಕು.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಎಸ್.ವ್ಹಿ.ಸಂಕನೂರರವರು second grade citizen ತರಹ ನೋಡುತ್ತಿದ್ದಾರೆಂದು ಹೇಳಿದ್ದಾರೆ. ಆ ರೀತಿ ಅಲ್ಲ, ಅವರನ್ನು ಅಸ್ಪೃಶ್ಯರ ತರಹ ನೋಡುತ್ತಿದ್ದಾರೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ಅಸ್ಪೃಶ್ಯರ ಪದವನ್ನು ಬಳಸಬಾರದು ಎಂದು ಆ ರೀತಿ ಹೇಳಿದ್ದೇನೆ.

**ಡಾ॥ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೆ, ತಮಗೆಲ್ಲಾ ಪೊಲೀಸರ ಬಗ್ಗೆ ಇಷ್ಟೊಂದು ಕಾಳಜಿ ಬಂದಿದೆಯೆಲ್ಲಾ ಅದಕ್ಕೆ ನನಗೆ ನಿಜಕ್ಕೂ ಸಂತೋಷವಾಗುತ್ತಿದೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪಧವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಇದರ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂಬ ವಿಶ್ವಾಸದಿಂದ ಎಲ್ಲರೂ ಮಾತನಾಡಿದ್ದೇವೆ.

**ಡಾ॥ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೆ, ಈಗ ಅರ್ಥವಾಗಿದೆಯಲ್ಲಾ, ಪೊಲೀಸ್ ಅಧಿಕಾರಗಳ ಬಗ್ಗೆ ಬೇಡ. ಪೊಲೀಸರ ಬಗ್ಗೆ ಇಷ್ಟೊಂದು ಕಾಳಜಿ ಬಂದಿದೆಯೆಲ್ಲಾ ಅದಕ್ಕೆ ನನಗೆ ಸಂತೋಷವಾಗಿದೆ.

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಮಗೆ ಪೊಲೀಸರ ಬಗ್ಗೆ ಕಾಳಜಿ ಇದೆ.

**ಡಾ॥ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೆ, ನಾನು 2015ನೇ ಸಾಲಿನಲ್ಲಿ ಗೃಹ ಸಚಿವನಾಗಿದ್ದೆ. ನಾವು ಅಲ್ಲಿಂದ ಇಲ್ಲಿಯವರೆಗೆ ಸುಮಾರು 34,679 ಪೊಲೀಸರನ್ನು ರಾಜ್ಯದಲ್ಲಿ ನೇಮಕ ಮಾಡಿದ್ದೇವೆ. ತಾವು ಹೇಳಿದ ಹಾಗೆ, KSRP

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

(Karnataka State Reserve Police) ಇರಬಹುದು, ಸಿವಿಲ್ ಪೊಲೀಸ್ ಇರಬಹುದು, *CAR* (City Armed *Reserve*) ಇರಬಹುದು, ನಮ್ಮ ನೇಮಕಾತಿ ಪಾಲಿಸಿ ಏನಿದೆ ಎಂದರೆ, ಮೊದಲು ಅರ್ಜಿಗಳನ್ನು ಆಹ್ವಾನ ಮಾಡಿ, ಅರ್ಜಿಗಳನ್ನು ತೆಗೆದುಕೊಂಡು ಆನಂತರ ಅರ್ಜಿಗಳನ್ನು process ಮಾಡುವುದು ಇತ್ತು. ಅದರಲ್ಲಿ ಬಹಳಷ್ಟು ಗೊಂದಲವಾಗುತ್ತಿತ್ತು. ಈಗ ಅದನ್ನೆಲ್ಲಾ online ಮಾಡಿದ್ದೇವೆ. Online ಮಾಡಿದ ಮೇಲೆ ಅದನ್ನು process ಮಾಡಿ ಅವರಿಗೆ written exam ಕೊಡುತ್ತೇವೆ. *CAR, Civil Police, DAR (District Armed Reserve)* ಗೆ ಮೊದಲೇ written exam ಕೊಡುತ್ತೇವೆ. KSRP and KSISF (Karnataka State Industrial Security Force) ಗೆ ನಂತರ written exam ಕೊಡುತ್ತೇವೆ. ಇದನ್ನು ಸೂಕ್ತವಾಗಿ ಮಾಡಿದ್ದೇವೆ. Physical test and written exam ಆದ ಮೇಲೆ ನಾವು ಅದರ ಒಂದು ಪಟ್ಟಿಯನ್ನು ತಯಾರು ಮಾಡುತ್ತೇವೆ. Automatically selection ಆಗುತ್ತದೆ. ನಂತರ ಮೆಡಿಕಲ್‌ಗೆ ಕಳುಹಿಸುತ್ತೇವೆ. Medical test ನಲ್ಲಿ qualify ಆದನಂತರ ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳಿಂದ ಸಿಂಧುತ್ವದ ಬಗ್ಗೆ ಪರಿಶೀಲನೆ ಮಾಡಿ ನಂತರ ಅವರಿಗೆ ನೇಮಕಾತಿ ಆದೇಶ ಕಳುಹಿಸುತ್ತೇವೆ. ಇದರಲ್ಲಿ ಯಾವುದೇ ಗೊಂದಲ ಇಲ್ಲ. ನೇಮಕಾತಿಯನ್ನು ಕಳೆದ 3-4 ವರ್ಷಗಳಿಂದ ADGP (Additional Deputy General of Police) ರವರಾದ ಮಾನ್ಯ ಜೌರಾದ್‌ಕರ್‌ರವರು ಮಾಡುತ್ತಿದ್ದಾರೆ. ಅವರು ಇದನ್ನು ಬಹಳ ಯಶ್ವಸಿಯಾಗಿ ಮಾಡುತ್ತಿದ್ದಾರೆ.

ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಸಿವಿಲ್‌ಗೆ ಏಕೆ ಬೇರೆ ನೇಮಕಾತಿ ಮತ್ತು KSRP ಗೆ ಏಕೆ ಬೇರೆ ನೇಮಕಾತಿ? ಅವರನ್ನು ಏಕೆ ಒಂದೇ ನೇಮಕಾತಿಯಲ್ಲಿ ಮಾಡಬಾರದು ಎಂಬುದನ್ನು ಕೇಳಿದ್ದಾರೆ. ಇವರ ಕೆಲಸವೇ ಬೇರೆ. ಅವರ ಕೆಲಸವೇ ಬೇರೆಯಾಗಿರುತ್ತದೆ. ಅದಕ್ಕಾಗಿಯೇ ಸಿವಿಲ್ ಪೊಲೀಸ್‌ಗೆ ಪಿ.ಯು.ಸಿ., ವಿದ್ಯಾರ್ಹತೆಯನ್ನು ಇಟ್ಟಿದ್ದರು. KSRP ಗೆ ಎಸ್.ಎಸ್.ಎಲ್.ಸಿ., ವಿದ್ಯಾರ್ಹತೆಯನ್ನು ನಿಗದಿಪಡಿಸಿದ್ದರು. ಏಕೆಂದರೆ, ಸಿವಿಲ್ ಪೊಲೀಸರು ಪ್ರತಿನಿತ್ಯ ಕಾನೂನನ್ನು ಮತ್ತು ಸಂವಿಧಾನವನ್ನು ನೋಡಿ ಠಾಣೆಗಳಲ್ಲಿ ಕೆಲಸ ಮಾಡಬೇಕಾಗುತ್ತದೆಂದು ಪಿ.ಯು.ಸಿ., ಇಟ್ಟಿದ್ದರು. ಇದನ್ನು ನಾನು ಬಹಳ ಗಂಭೀರವಾಗಿ ಯೋಚನೆ ಮಾಡಿ ಏಕೆ ಇದನ್ನು common recruitment ಮಾಡಬಾರದು ಆನಂತರ ಅವರನ್ನು ಎಲ್ಲಿ ಬೇಕಾದರೂ posting ಮಾಡಬಹುದಲ್ಲಾ ಎನ್ನುವುದನ್ನು ಸಹ ಪರಿಶೀಲನೆ ಮಾಡುತ್ತಿದ್ದೇವೆ. ಈ ಹಿಂದೆ ಮಾನ್ಯ ದತ್ತರವರು DGP (Director General of Police) ಇದ್ದಂತಹ ಸಂದರ್ಭದಲ್ಲಿ ಒಂದು Internal Committee ಮಾಡಿಕೊಂಡು ಬೇರೆ ಬೇರೆ ರಾಜ್ಯಗಳಿಗೆ ಕಳುಹಿಸಿ ಅಲ್ಲಿ ಯಾವ ಯಾವ ರೀತಿ ಮಾಡುತ್ತಿದ್ದಾರೆ, ಅಲ್ಲಿ ಅವರ ಸಮಸ್ಯೆಗಳು ಏನಿವೆ, it is a good practice ಎಂದು ಹೇಳಿ ಅದನ್ನು ಪರಿಶೀಲನೆ ಮಾಡಿದ್ದರು. ಅದನ್ನು ಪರಿಶೀಲನೆ ಮಾಡಿದ ಮೇಲೆ Internal Committee



ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರವರು ಈ ರೀತಿಯಾದರೆ ಕಷ್ಟವಾಗುತ್ತದೆಂದು ವರದಿ ಕೊಟ್ಟಿದ್ದಾರೆ. ನಾನು ಈಗಾಗಲೇ ನಮ್ಮ ಇಲಾಖೆಯಲ್ಲಿನ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ತಮಿಳುನಾಡಿನಲ್ಲಿ ಮಾಡಿದ್ದಾರೆ. ಬೇರೆ ಬೇರೆ ರಾಜ್ಯಗಳಲ್ಲೂ ಸ್ವಲ್ಪ ಕಡಿಮೆ ಇರಬಹುದು. ಆದರೆ, ಎಲ್ಲಾ ರಾಜ್ಯಗಳಲ್ಲೂ ಇದನ್ನು common ಆಗಿ ಮಾಡಿಲ್ಲ. ತಮಿಳುನಾಡಿಗೂ ಸಹ ನಮ್ಮ ಅಧಿಕಾರಿಗಳನ್ನು ಕಳುಹಿಸಿ ಅಲ್ಲಿಂದ ವರದಿಯನ್ನು ತರಿಸಿಕೊಂಡು ಅಲ್ಲಿನ ಸಮಸ್ಯೆಗಳ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಒಂದು ಆದೇಶ ಮಾಡಿದರೆ ಇದು ಆಗುತ್ತದೆ. ಆದರೆ, ಅದರಿಂದ ಮತ್ತೆ ಸಮಸ್ಯೆಗಳು ಆಗಬಾರದು ಅಲ್ಲವೇ, ನಾವು ಒಂದು ಮಾಡುವುದಕ್ಕೆ ಹೋಗಿ ಇನ್ನೊಂದು ಏನೋ ಆಗಬಾರದು ಅಲ್ಲವೇ; ಅದಕ್ಕೆ ನಾವು disciplined force ಯಾವ ರೀತಿ ಇಟ್ಟುಕೊಳ್ಳಬೇಕೆಂದು ಪರಿಶೀಲನೆ ಮಾಡುತ್ತಿದ್ದೇವೆ. ಮುಂದೆ ಅದರ ಅಗತ್ಯ ಕಂಡುಬಂದರೆ, ಕನಿಷ್ಠ Civil, DAR and DAR, KSRP or KSISF ಗೆ ಇದಕ್ಕೆ ಏನಾದರೂ 2 ರಿಂದ 3 ಭಾಗ ಮಾಡಿ ಮಾಡುವುದಕ್ಕೆ ಸಾಧ್ಯವಾದರೆ ಮಾಡುತ್ತೇವೆ. ನನಗೆ ಅನಿಸುತ್ತದೆ. ನಾವು 20 ರಿಂದ 30 ಸಾವಿರ ಸಿಬ್ಬಂದಿಯನ್ನು barracks ನಲ್ಲಿಟ್ಟು ಸಿವಿಲ್ ಪೊಲೀಸ್‌ಠಾಣೆಗಳಲ್ಲಿ shortage ಇದೆ ಎಂದು ಹೇಳುತ್ತಾರೆ. ಆದರೆ, ನಾವು ಅವರಿಗೆ ಮತ್ತು ಇವರಿಗೆ ಇಲ್ಲಿಯವರೆಗೂ ಕೊಟ್ಟಿರುವಂತಹ ತರಬೇತಿಯೇ ಬೇರೆ ಬೇರೆ ಇದೆ. ಆದ್ದರಿಂದ ಅದನ್ನು common ಆಗಿ ಮಾಡುವಂತಹ ಅವಶ್ಯಕತೆ ಮತ್ತು ಅಗತ್ಯತೆಯನ್ನು ನೋಡಿ ನಾವು ಮಾಡಬೇಕಾಗುತ್ತದೆ. ಅದನ್ನು ಮುಂದಿನ ದಿವಸಗಳಲ್ಲಿ ಪರಿಶೀಲನೆ ಮಾಡುತ್ತೇನೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆ ಅದಲ್ಲ. ಈಗ ಹಾಲಿ ಕೆಲಸ ಮಾಡುತ್ತಿರುವಂತಹವರಿಗೆ ಅವಕಾಶ ಮಾಡಿಕೊಡಬೇಕು ಎನ್ನುವಂಥದ್ದು. ಏಕೆಂದರೆ, ಈಗ ಅಲ್ಲಿ ಇರುವಂತಹವರು ಅಲ್ಲಿಯೇ ನಿವೃತ್ತಿ ಆಗುವುದರಿಂದ ಜೀವನದಲ್ಲಿ ಅವರಿಗೂ ಸಹ ಜಿಗುಪ್ಸೆ ಆಗುತ್ತದೆ, ಅವಮಾನ ಆಗುತ್ತದೆ. ಅದರಲ್ಲಿ ಬಹಳಷ್ಟು ಜನ Post Graduates ಇದ್ದಾರೆ. ನನ್ನ ಹತ್ತಿರ ಒಬ್ಬರು ಪತ್ರ ತೆಗೆದುಕೊಳ್ಳುವುದಕ್ಕೆ ಬಂದಿದ್ದರು. ಅವರು ಎಂ.ಎ., ಅರ್ಥಶಾಸ್ತ್ರ ಅಥವಾ ಕಾರ್ಮಸ್ ಓದಿದ್ದರು. ಆಗ ನನಗೆ ಈ ರೀತಿ ಪತ್ರ ಕೇಳುವುದಕ್ಕೆ ಬಂದಿದ್ದಾರೆಂದು ನನಗೆ ಬೇಜಾರು ಆಯಿತು. ಮಾನ್ಯ ಸಚಿವರು ದಯಮಾಡಿ ಅಂತಹ Post Graduates ಆಗಿರುವಂತಹವರನ್ನು ಮತ್ತು ವಯಸ್ಸು ಆಗಿರುವಂತವರನ್ನು ದೃಷ್ಟಿಯಲ್ಲಿಟ್ಟುಕೊಂಡು ಒಂದು ದೊಡ್ಡ ಸಹಾಯವನ್ನು ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಇಲಾಖಾ ಅಧಿಕಾರಿಗಳ ಸಮಿತಿ ಮಾಡುವುದರ ಬದಲಿಗೆ, ಇದಕ್ಕೆ ಒಂದು ಮಧ್ಯದಲ್ಲಿ neutral ಇರುವಂತಹ ಸಮಿತಿ ಆಗಬೇಕು. ಏಕೆಂದರೆ, ಜೊತೆಗೆ ಇರುವಂತಹವರ ವಿಷಯದಲ್ಲಿ ಇಲ್ಲಿ ಸ್ವಲ್ಪ ಗೊಂದಲಗಳು ಇದ್ದೇ ಇರುತ್ತವೆ. ಅದು ತಮಗೆ ಗೊತ್ತಿದೆ. ಆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿ ಯಾವುದಾದರೂ ಬೇರೆ ಸಮಿತಿ ಮಾಡಿ. ಇದರ ಬಗ್ಗೆ ಬೇರೆ ಬೇರೆ ರಾಜ್ಯಗಳಲ್ಲಿ ಏನಿದೆ ಅದರ ಮಾಡಲ್‌ಗಳನ್ನು ತರಿಸಿಕೊಂಡು ಅದರ ಸಾಧಕ–ಬಾಧಕಗಳನ್ನು ಅಧ್ಯಯನ ಮಾಡಬಹುದೆಂಬ ಒಂದು ಸಲಹೆಯನ್ನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಸಲಹೆ ನೀಡಬಯಸುತ್ತೇನೆ.

**ಡಾ॥ ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಧರ್ಮಸೇನರವರು ಈಗಿರುವಂತಹ ವ್ಯವಸ್ಥೆಯಲ್ಲಿಯೇ ಬದಲಾವಣೆ ಮಾಡಿ ಎಂದು ಹೇಳಿದ್ದಾರೆ. ಇದು ಸಾಧ್ಯವಾಗುವುದಿಲ್ಲ. ಏಕೆಂದರೆ, ಅವರಿಗೆ ತರಬೇತಿಯನ್ನು ಬೇರೆ ಕೊಟ್ಟಿರುತ್ತೇವೆ. ಹೊಸ ತರಬೇತಿ ಕೊಡುವಂತಹ ಸಂದರ್ಭದಲ್ಲಿ ಅವರಿಗೆ common training ಕೊಟ್ಟು ಅವರನ್ನು ಬದಲಾಯಿಸುವುದಕ್ಕೆ ಮುಂದಿನ ದಿವಸಗಳಲ್ಲಿ ಸಾಧ್ಯವಾಗಬಹುದು.

**ಸಭಾಪತಿಯವರು:–** ಮಾನ್ಯ ಗೃಹ ಸಚಿವರೆ, ಇನ್ನೂ ಹೆಚ್ಚಿನ ಸದಸ್ಯರಿಗೆ ಮಾತನಾಡಬೇಕೆಂದು ಇಚ್ಛೆ ಇದೆ. ಆದ್ದರಿಂದ ಅರ್ಧ ಗಂಟೆ ಚರ್ಚೆಯಲ್ಲಿ ತೆಗೆದುಕೊಳ್ಳಬಹುದೇ?

**ಡಾ॥ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೆ, ಆಗಬಹುದು.

(ಗೊಂದಲ)

**ಶ್ರೀ ಕಾಂತರಾಜ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈಗ ಸೇವೆಯಲ್ಲಿ ಇರುವವರಿಗೆ ಹೊಸದಾಗಿ ತರಬೇತಿ ಕೊಟ್ಟರೆ ಬಹಳ ಒಳ್ಳೆಯದು.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಉಪ ಮುಖ್ಯಮಂತ್ರಿಯವರ ಗಮನಕ್ಕೆ ಈ ಹಿಂದೆ ಪೊಲೀಸ್ ಅಧಿಕಾರಿಗಳ ಹಂತದಲ್ಲಿ ನಡೆದಿರುವಂತಹ ಒಂದು ಘಟನೆಯನ್ನು ತರುವುದಕ್ಕೆ ಬಯಸುತ್ತೇನೆ. KSRP ಯಲ್ಲಿದ್ದ ಮಾನ್ಯ ನಾರಾಯಣಗೌಡರನ್ನು ಇಲ್ಲಿಗೆ ತರಲಾಯಿತು. ಆದರೆ, ಈ ಪೇದೆಗಳನ್ನು ಏಕೆ ತರುವುದಕ್ಕೆ ಆಗುವುದಿಲ್ಲ?

**ಸಭಾಪತಿಯವರು:–** ಮಾನ್ಯ ಹೆಚ್.ಎಂ.ರೇವಣ್ಣನವರೆ, ಈಗ ಇದು ಅರ್ಧ ಗಂಟೆಯ ಚರ್ಚೆಗೆ ಆಗುವುದು ಅಂತ ಆಗಿದೆ. ಈಗ ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**(ಮುಂದುವರೆದಿದೆ...**

(455)14–12–2018(11–20)ಎಂವಿ–ವಿಕೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಪ್ರಶ್ನೆ ಸಂಖ್ಯೆ: 615)**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಮಾಗಡಿಯ ಕೆಂಪೇಗೌಡರು ಕಟ್ಟಿದಂತಹ ಬೆಂಗಳೂರು ಇವತ್ತು ದೊಡ್ಡದಾಗಿ ಬೆಳೆಯುತ್ತಿದೆ. ಬೆಂಗಳೂರಿಗೆ ಬರುವಂತಹ ಎಲ್ಲಾ ರಸ್ತೆಗಳು ಕೂಡ, ಅದು ಕೋಲಾರದ ಕಡೆಯಿಂದ ಬರಬಹುದು, ಮೈಸೂರು ಕಡೆಯಿಂದ ಬರಬಹುದು, ನೆಲಮಂಗಲದ ಕಡೆಯಿಂದ ಬರಬಹುದು ಮತ್ತು ಬಳ್ಳಾರಿ ಕಡೆಯಿಂದ ಬರಬಹುದು ಎಲ್ಲಾ ರಸ್ತೆಗಳು ಕೂಡ ದೊಡ್ಡ ರಸ್ತೆಗಳು. ಮೂಲತಃ ಮಾಗಡಿಯಿಂದ ಬರುವಂತಹ ರಸ್ತೆ, ಬಹಳ ಚಿಕ್ಕದಾಗಿ ಇತ್ತು. ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರ ಕಡೆಯಿಂದ ರಸ್ತೆಯನ್ನು ಮಂಜೂರು ಮಾಡಿಸಿದೆ. ಆದರೆ ಈಗ ನೀಡಿರುವ ಉತ್ತರದಲ್ಲಿ ನಾಲ್ಕು ಪಥದ ರಸ್ತೆಯನ್ನು ಕೇಳಿದಾಗ, ಇರುವಂತಹ 50 ಕಿಲೋಮೀಟರ್‌ನಲ್ಲಿ 35 ಕಿಲೋಮೀಟರ್ ಅನ್ನು ನಾಲ್ಕು ಪಥದ ರಸ್ತೆಯನ್ನಾಗಿ ಮಾಡುತ್ತಾರೆಂದು ಮತ್ತು ಇನ್ನುಳಿದ 15 ಕಿಲೋ ಮೀಟರ್ ರಸ್ತೆಯನ್ನು ಎರಡು ಪಥವನ್ನಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ, ಅದು ಆ ರೀತಿ ಆಗಬಾರದು. ಎಲ್ಲವೂ ಸಹ ನಾಲ್ಕು ಪಥದ ರಸ್ತೆಯಾಗಬೇಕು ಎಂಬುದು ನನ್ನ ಆಗ್ರಹ.

ಎರಡನೆಯದಾಗಿ ಇದಕ್ಕೆ ಸಮಯ ಎರಡು ವರ್ಷವೆಂದು ಹೇಳಿದ್ದಾರೆ. ಈಗಾಗಲೇ ಎರಡು ವರ್ಷ ಆಗುತ್ತಿದೆ, ಆದಷ್ಟು ಬೇಗ ಕೆಲಸ ಪ್ರಾರಂಭವಾಗಬೇಕು. ಮೂರನೆಯದಾಗಿ ಭೂಸ್ವಾಧೀನದಲ್ಲಿ ಆಡಚಣೆಯಾಗಿದೆ. ಉದಾಹರಣೆಗೆ ಗ್ರಾಮೀಣ ಪ್ರದೇಶದ ರೈತರಿಗೆ ಅವರ ಜಮೀನು ಭೂಸ್ವಾಧೀನವಾದಾಗ ಅವರಿಗೆ ಜಮೀನಿನ ಮೌಲ್ಯದ ಜೊತೆಗೆ ಅದರ ನಾಲ್ಕರಷ್ಟು ಮೊತ್ತ ಎಂದು ಮಾಡುತ್ತಾರೆ. ಆದರೆ, ಆ ರಸ್ತೆ ಟೌನ್ ಲಿಮಿಟ್‌ನಲ್ಲಿ ಪಾಸ್ ಆಗುತ್ತದೆ. ಟೌನ್‌ನಲ್ಲಿ ಭೂಮಿಯ ಮೌಲ್ಯ ಜಾಸ್ತಿ ಇರುತ್ತದೆ. ಆದರೆ, ಟೌನ್‌ಗೆ ಕಡಿಮೆ ಪರಿಹಾರ ಮತ್ತು ಗ್ರಾಮೀಣಕ್ಕೆ ಜಾಸ್ತಿ ಪರಿಹಾರ ಘೋಷಿಸಲಾಗಿದೆ. ನಾನು ಗ್ರಾಮೀಣ ಮತ್ತು ಟೌನ್ ಎಂದು ವಿಂಗಡಿಸುವುದಿಲ್ಲ. ಆದರೆ, ಆ ಎರಡನ್ನು ಒಂದೇ ರೀತಿ ಮಾಡಿ, ಟೌನ್‌ನವರಿಗೂ ಸಹ ಅದನ್ನು ಹೆಚ್ಚಿಗೆ ಕೊಡಬೇಕು. ಗ್ರಾಮೀಣಕ್ಕೆ ಮೂರು ಪಟ್ಟು ಮತ್ತು ಟೌನ್‌ನಲ್ಲಿ ಒಂದು ಪಟ್ಟು ಎಂದು ಹೇಳುತ್ತಾರೆ. ಅದನ್ನು ನಾಲ್ಕು ಪಟ್ಟು ಕೊಡಬೇಕು ಎಂಬುದು ನನ್ನ ಆಗ್ರಹ.

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಈ ರಸ್ತೆ ಕೆಶಿಪ್-3ನಿಂದ ಆಗಿರುವಂಥದ್ದು ಮತ್ತು ಇದು ವರ್ಲ್ಡ್ ಬ್ಯಾಂಕ್ ರಸ್ತೆ. ಈ ವರ್ಲ್ಡ್ ಬ್ಯಾಂಕ್ ರಸ್ತೆಯಲ್ಲಿ, ರಾಜ್ಯ ಹೆದ್ದಾರಿ-85ರಲ್ಲಿ ಸುಮಾರು 50 ಕಿಲೋಮೀಟರ್ ಉದ್ದದ ರಸ್ತೆ ಕಾಮಗಾರಿಯನ್ನು ಕರ್ನಾಟಕ ರಾಜ್ಯ ಹೆದ್ದಾರಿ (ಕೆಶಿಪ್-3) ಯೋಜನೆಯಡಿ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ನೆರವಿನ ಮುಖೇನ ಕಿಲೋಮೀಟರ್ 15.325 ರಿಂದ 50.85 ರವರೆಗೆ 35 ಕಿಲೋಮೀಟರ್ ಚತುಷ್ಪಥ ರಸ್ತೆ ವಿಸ್ತೀರ್ಣಕ್ಕೆ ಹಾಗೂ ಉಳಿದ 15 ಕಿಲೋ ಮೀಟರ್ ದ್ವಿಪಥ ರಸ್ತೆ ವಿಸ್ತೀರ್ಣಕ್ಕೆ ಮೇಲ್ದರ್ಜೆಗೇರಿಸಲಾಗಿದೆ. ಈಗ ಗುತ್ತಿಗೆದಾರರ ನೇಮಕ ಪ್ರಕ್ರಿಯೆ ಎಲ್ಲಾ ಪೂರ್ಣಗೊಂಡಿದೆ. ವರ್ಲ್ಡ್ ಬ್ಯಾಂಕ್‌ನಿಂದ ಆಗಿರುವುದು 35

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಿಲೋಮೀಟರ್ ಚತುಷ್ಪಥ ರಸ್ತೆ ಮತ್ತು 15 ಕಿಲೋಮೀಟರ್ ದ್ವಿಪಥ ರಸ್ತೆ. ಅದನ್ನು ನಾವು ಮಾಡಿರುವುದಲ್ಲ, ಅದು ನಾವು ಬರುವುದಕ್ಕೆ ಮುಂಚೆಯೇ ಆಗಿರುವುದು. ಅದನ್ನು ನಾನು ಏನು ಮಾಡುವುದಕ್ಕೆ ಆಗುವುದಿಲ್ಲ. ಈಗ ನಗರ ಪ್ರದೇಶಕ್ಕೆ ಕೊಡುವುದಕ್ಕೆ ಯು.ಪಿ.ಎ. ಸರ್ಕಾರ ಇದ್ದಾಗ ಒಂದು ಕಾನೂನನ್ನು ಮಾಡಿದ್ದಾರೆ. ನಗರ ಪ್ರದೇಶಗಳಲ್ಲಿ ಒಂದಕ್ಕೆ ಎರಡು ಪಟ್ಟು ಕೊಡಬೇಕು. ಗ್ರಾಮೀಣ ಪ್ರದೇಶದಲ್ಲಿ ಒಂದಕ್ಕೆ ನಾಲ್ಕು ಪಟ್ಟು ಕೊಡಬೇಕೆಂದು ಮಾಡಿರುವ ತಿದ್ದುಪಡಿ ಕಾನೂನು. ಅದನ್ನು ನಾವು ಮಾಡಿಲ್ಲ. ಕಾನೂನು ರೀತಿ ಏನು ಇದೆ, ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಈಗ ಅವರಿಗೆಲ್ಲಾ ಪರಿಹಾರ ಕೊಡಬೇಕಾಗುತ್ತದೆ ಕೊಟ್ಟ ತಕ್ಷಣ ಕಾಮಗಾರಿಯನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, ನನಗೆ ಗೊತ್ತಿರುವ ಪ್ರಕಾರ ಈ ಸರ್ಕಾರ ಬಂದ ಮೇಲೆ ಯಾವುದು ಬೇಕಾದರೂ ಆಗುತ್ತದೆ ಎಂಬುದು ಜಗಜ್ಜಾಹಿರಾಗಿದೆ. ಆದರೆ, ಮಾಗಡಿ ಜನತೆಗೆ ಇದರಿಂದ ತೊಂದರೆ ಆಗಬಾರದು. ಈಗ 35 ಕಿಲೋಮೀಟರ್ ಅನ್ನು ನಾಲ್ಕು ಪಥದ ರಸ್ತೆ ಮತ್ತು ಇನ್ನುಳಿದ 15 ಕಿಲೋಮೀಟರ್ ಎರಡು ಪಥದ ರಸ್ತೆ ಎನ್ನುತ್ತಾರೆ.

**ಶ್ರೀ ಹೆಚ್.ಡಿ.ರೇವಣ್ಣ:–** ಮಾನ್ಯ ಸಭಾಪತಿಯವರೆ, ನಾನೇ ಲೋಕೋಪಯೋಗಿ ಮಂತ್ರಿಯಾಗಿದ್ದಾಗ, ಸದಸ್ಯರಾದ ಮಾನ್ಯ ಹೆಚ್.ಎಂ.ರೇವಣ್ಣನವರ ವಾಹನಗಳು ಸುರಕ್ಷಿತವಾಗಿ ಸಂಚರಿಸಲಿ ಎಂದು, ಎಲ್ಲಾ curves ಅನ್ನು improve ಮಾಡಿ, ಈ ಹಿಂದೆಯೇ ದ್ವಿಪಥದ ರಸ್ತೆಯನ್ನು ಮಾಡಿಕೊಟ್ಟಿದ್ದೇವೆ. ಅವರು ಮಾಗಡಿಗೆ ಓಡಾಡುವಾಗ ಯಾವುದೇ ತೊಂದರೆ ಆಗಬಾರದೆಂದು 2004ರಲ್ಲೆ ರಸ್ತೆಯನ್ನು ಮಾಡಿಕೊಟ್ಟಿದ್ದೇವೆ. ಈಗಲೂ ಸಹ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಇನ್ನು ಹೆಚ್ಚಿನ ರೀತಿ ಏನು ಅಭಿವೃದ್ಧಿ ಬೇಕೋ, ಅದನ್ನು ಮಾಡುತ್ತೇವೆ.

**(ಪ್ರಶ್ನೆ ಸಂಖ್ಯೆ: 722)**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ರಿಜ್ವಾನ್ ಅರ್ಷದ್:–** ಮಾನ್ಯ ಸಭಾಪತಿಯವರೇ, ನಾನು ಸರ್ಜಾಪುರ ರಸ್ತೆಯ ಇಬ್ಬಲೂರು ಜಂಕ್ಷನ್ ನಿಂದ ಕಾರ್ಮೆಲ್‌ರಾಮ್ ಜಂಕ್ಷನ್‌ವರೆಗಿನ ರಸ್ತೆ ಅಗಲೀಕರಣದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಇದಕ್ಕೆ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರವನ್ನು ನೀಡಿದ್ದಾರೆ. ಅವರ ಉತ್ತರದ ಪ್ರಕಾರ ಕಳೆದ ಒಂಭತ್ತು ತಿಂಗಳ ಹಿಂದೆ ಈ ಕಾಮಗಾರಿ ಪ್ರಾರಂಭವಾಗಿ ಈಗಾಗಲೇ ಶೇಕಡಾ 10ರಷ್ಟು ಕಾಮಗಾರಿ ನಡೆದಿದೆ ಎಂದು ಸ್ವತಃ ಅವರು ಉತ್ತರವನ್ನು ನೀಡಿದ್ದಾರೆ. ಈ ರಸ್ತೆ ಸುಮಾರು ಮೂರು ಲಕ್ಷ ಪ್ಯಾಸೆಂಜರ್ ಕಾರ್ ಯೂನಿಟ್ಸ್ ಸಾಮರ್ಥ್ಯದಾಗಿದ್ದು, ಈ ರಸ್ತೆಯನ್ನು ಲಕ್ಷಾಂತರ ಜನ ಐಟಿ ಕಾರಿಡಾರ್‌ನಲ್ಲಿ ಉಪಯೋಗಿಸುತ್ತಾರೆ. ಇಂತಹ ಒಂದು ಮಹತ್ವವಾದ ಪ್ರಾಜೆಕ್ಟ್‌ನಲ್ಲಿ ಒಂಭತ್ತು ತಿಂಗಳಿಗೆ ಶೇಕಡಾ 10ರಷ್ಟು ಮಾತ್ರ ಕೆಲಸವಾಗಿದ್ದರೆ, ಕಾಮಗಾರಿಯ ಈ ವಿಳಂಬದಿಂದಾಗಿ ಅಲ್ಲಿನ ಸಾರ್ವಜನಿಕರಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತುಂಬಾ ತೊಂದರೆಯಾಗುತ್ತಿದೆ ಎಂಬ ಸಂಗತಿಯನ್ನು ಈ ಸಂದರ್ಭದಲ್ಲಿ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಮೊನ್ನೆ ಹತ್ತನೇ ತಾರೀಖಿನಂದು ಇಬ್ಬಲೂರು ಜಂಕ್ಷನ್‌ನಲ್ಲಿ ಅಪಘಾತದಿಂದಾಗಿ ಒಬ್ಬ ಹಿರಿಯ ನಾಗರಿಕರು ನಿಧನ ಹೊಂದಿದ್ದಾರೆ. ಕಳೆದ ನಾಲ್ಕೈದು ತಿಂಗಳಿನ ಒಳಗೆ ಏಳು ಜನರಿಗೆ ಅದೇ ಜಂಕ್ಷನ್‌ನಲ್ಲಿ ಅಪಘಾತವಾಗಿ ನಿಧನ ಹೊಂದಿದ್ದಾರೆ. ಈ ಕೆಲಸ ಏಕೆ ವಿಳಂಬವಾಗುತ್ತಿದೆ ಎಂದು ನಾನು ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

**ಡಾ|| ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಈ ಕೆಲಸ ಬಹಳ ಪ್ರಮುಖವಾದದು ಮತ್ತು ಅದು ಮಾನ್ಯ ಸದಸ್ಯರ ಏರಿಯಾದಲ್ಲಿ ಬರುತ್ತದೆಂದು ಅವರು ಬಹಳ ಉತ್ಸಾಹದಲ್ಲಿ ಇದ್ದಾರೆ. ದಿನಾಂಕ:14.03.2018ರಂದು ಗುತ್ತಿಗೆದಾರರಾದಂತಹ ಶ್ರೀ ಶೇಷಗಿರಿ ನಾರಾಯಣನ್ ಎಂಬುವವರಿಗೆ ಈ ಕಾಮಗಾರಿಯ ಗುತ್ತಿಗೆಯನ್ನು ಕೊಟ್ಟಿದ್ದೇವೆ. ಭೂಸ್ವಾಧೀನ ಸಮಸ್ಯೆ ಬಂದಿರುವ ಕಾರಣಕ್ಕೋಸ್ಕರ ಸ್ವಲ್ಪ ವಿಳಂಭವಾಗಿದೆ. ಆದರೆ, ನಾವು ಅವರಿಗೆ 24 ತಿಂಗಳ ಸಮಯವನ್ನು ನೀಡಿದ್ದೇವೆ. ಒಂದು ವೇಳೆ ಅವರು ಆ 24 ತಿಂಗಳಿನ ಒಳಗೆ ಪೂರ್ಣ ಮಾಡದೆ ಹೋದರೆ, ಅವರಿಗೆ ಪಿ.ಡಬ್ಲ್ಯು.ಡಿ. ಕೋಡ್ ಪ್ರಕಾರ ದಂಡ ವಿಧಿಸುವುದು ಮತ್ತೊಂದನ್ನು ಮಾಡಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಕಾಮಗಾರಿಯನ್ನು 24 ತಿಂಗಳ ಒಳಗಡೆ ಮುಗಿಸಬೇಕೆಂದು ಸೂಚನೆಯನ್ನು ಕೊಡುತ್ತೇವೆ. ನಮಗೆ ಭೂಸ್ವಾಧೀನ ಮಾಡುವುದಕ್ಕೆ ಸಮಸ್ಯೆ ಬಂದಿದೆ. ನಾವು ಅವರಿಗೆ TDR (Transfer of Development Rights) ಕೊಟ್ಟು, TDR ಕೊಡದೆ ಹಣವನ್ನು ಕೊಡುವುದಕ್ಕೆ ಹೋದರೆ, ಬಹಳ ದೊಡ್ಡ ಆರ್ಥಿಕ ಹೊರೆಯಾಗುತ್ತದೆ ಎಂದು ನಾವು TDR ಅನ್ನು ಕೊಟ್ಟು ಭೂಸ್ವಾಧೀನ ಪ್ರಕ್ರಿಯೆಯನ್ನು ಮುಗಿಸಬೇಕೆಂದು ಮಾಡಿದ್ದೇವೆ. ಬಹಳಷ್ಟು ಜನ ರೈತರು ಮತ್ತು ಮಾಲೀಕರೆಲ್ಲರೂ ಸಹ ಒಪ್ಪಿಕೊಂಡಿದ್ದಾರೆ. ಈಗ ಆ ಪ್ರಕ್ರಿಯೆ ನಡೆಯುತ್ತಿದೆ. As and when it is completed, we will complete the work. ಬಹುಶಃ ಲೋಕಸಭಾ ಚುನಾವಣೆ ಹತ್ತಿರ ಬರುತ್ತಿದೆ. ಅದನ್ನು ನೋಡಿಕೊಂಡು, ಆದಷ್ಟು ಶೀಘ್ರವಾಗಿ 24 ತಿಂಗಳಿನ ಒಳಗೆ ಮುಗಿಸಬೇಕೆಂದು ಗುತ್ತಿಗೆದಾರರಿಗೆ ಸೂಚನೆಯನ್ನು ಕೊಟ್ಟಿದ್ದೇವೆ ಮತ್ತು ಗುತ್ತಿಗೆದಾರರ ಒಪ್ಪಂದದಲ್ಲೂ ಕೂಡ ಅದೇ ತರಹ ಇದೆ.

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೆ, ಒಂದು ಅಂಶವನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಅಲ್ಲಿ ಕೆಲವು ಭೂಮಾಲೀಕರು ಹೈಕೋರ್ಟ್‌ಗೆ ಹೋಗಿ ತಡೆಯಾಜ್ಞೆಯನ್ನು ತಂದಿದ್ದಾರೆ. ತಮ್ಮ ಇಲಾಖೆಯಿಂದ ಅವರ ಜೊತೆ ಮಾತನಾಡಿ, ಆ ತಡೆಯಾಜ್ಞೆಯನ್ನು ತೆರವುಗೊಳಿಸುವಂತಹ ಕೆಲಸ ಆಗಬೇಕು ಮತ್ತು ತಮ್ಮ TDR ಪಾಲಿಸಿ ಸ್ವಲ್ಪ ಆಕರ್ಷಕವಾಗಬೇಕು. ಬೆಂಗಳೂರು ನಗರದಲ್ಲಿ ಭೂಮಾಲೀಕರು TDR ಮೌಲ್ಯಕ್ಕೆ ಒಪ್ಪುತ್ತಿಲ್ಲ. ಇದನ್ನು ಒಪ್ಪಿಕೊಂಡು ಭೂಮಿಯನ್ನು ಬಿಟ್ಟುಕೊಟ್ಟರು ಸಹ ಅವರಿಗೆ ಇದರಿಂದ workout ಆಗುವುದಿಲ್ಲ. ದಯವಿಟ್ಟು ಮತ್ತೊಮ್ಮೆ ಅದನ್ನು ವಿಮರ್ಶೆ ಮಾಡಬೇಕೆಂದು ಆಗ್ರಹಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ಅವರು ತಡೆಯಾಜ್ಞೆಯನ್ನು ತೆಗೆದುಕೊಂಡಿದ್ದಾರೆ. ನಾವು ಆ ತಡೆಯಾಜ್ಞೆಯನ್ನು ತೆರವುಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗ TDR ಹೊಸದಾಗಿ ಬರುತ್ತಿದೆ. ನಾನು ಮೊನ್ನೆ TDR regulations ಅನ್ನು approve ಮಾಡಿದ್ದೇನೆ. ಹೊಸ TDR ಜಾರಿಗೆ ಬಂದಂತಹ ಸಂದರ್ಭದಲ್ಲಿ. ಅವರಿಗೆ ಎರಡು ಪಟ್ಟು ಮೌಲ್ಯ ಸಿಗುತ್ತದೆ. ಅದು ಹೆಚ್ಚು ಆಕರ್ಷಕವಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಅದು ಗುತ್ತಿಗೆದಾರರಿಗೆ, ರೈತರಿಗೆ ಮತ್ತು ಭೂಮಾಲೀಕರಿಗೆ ಅನುಕೂಲವಾಗುತ್ತದೆ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಈ TDR ಸಮಸ್ಯೆ ಬೇಗನೆ ಪರಿಹಾರವಾಗಲಿ.

**(ಪ್ರಶ್ನೆ ಸಂಖ್ಯೆ: 692)**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಭಾಪತಿಯವರೆ, ಬೆಂಗಳೂರು ಮೆಟ್ರೋ ರೈಲು ನಿಗಮದಲ್ಲಿ ಹಾಲಿ ಎಷ್ಟು ಜನ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬ ಪ್ರಶ್ನೆಗೆ ಅವರು 1204 ಜನ ಕಾರ್ಯನಿರ್ವಹಿಸುತ್ತಿದ್ದಾರೆಂದು ಉತ್ತರ ನೀಡಿದ್ದಾರೆ. ಆದರೆ, ಸದರಿ ಮುಂಬಡ್ತಿಗೆ ಜೇಷ್ಠತೆಯನ್ನು ಪರಿಗಣಿಸದೆ ಆಂತರಿಕ ಸ್ಪರ್ಧಾತ್ಮಕ ಪರೀಕ್ಷೆಯನ್ನು ಇಟ್ಟಿರುವುದು ಸರಿಯೇ ಎಂಬ ಪ್ರಶ್ನೆಗೆ ಅವರು ಅದು ಸರಿಯಿದೆ ಎಂದು ಹೇಳಿದ್ದಾರೆ. ನನ್ನ ಪ್ರಕಾರ ಇದಕ್ಕೆಲ್ಲಾ roster system ಅನ್ನು maintain ಮಾಡಿ, ಅವರನ್ನು ಕೆಲಸಕ್ಕೆ ನೇಮಿಸಿಕೊಂಡಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಡಿಪಿಎಆರ್‌ನವರು ಕಣ್ಣು ಮುಚ್ಚಿಕೊಂಡು ಸಹಿ ಮಾಡಿದ್ದಾರೆಯೇ ಎಂಬುದು ನನಗೆ ಗೊತ್ತಾಗುತ್ತಿಲ್ಲ. ನಮ್ಮ ಕೆಪಿಟಿಸಿಎಲ್ ಆಗಬಹುದು, ಪೊಲೀಸ್ ಇಲಾಖೆಯಲ್ಲಿ ಆಗಬಹುದು ಮತ್ತು ರಾಜ್ಯದ ಯಾವುದೇ ಇಲಾಖೆಯಲ್ಲೂ ಕೂಡ ಮುಂಬಡ್ತಿಗೆ ಈ ರೀತಿಯ ಪರೀಕ್ಷೆಯನ್ನು ಇಟ್ಟಿಲ್ಲ. ಇಲ್ಲಿನ ಸಿ ಆ್ಯಂಡ್ ಆರ್ ರೂಲ್ಸ್‌ನಲ್ಲಿ ಏನು ಹೇಳುತ್ತಾರೆ ಎಂದರೆ, ಕ್ರಮ ಸಂಖ್ಯೆ. 37ಕ್ಕೆ ಸ್ಟೇಷನ್ ಮಾಸ್ಟರ್ ಅನ್ನು ತೆಗೆದುಕೊಂಡಿದ್ದಾರೆ. ಸಹಾಯಕ ವ್ಯವಸ್ಥಾಪಕ ಆಗಬೇಕಾದರೆ, ಅದಕ್ಕೆ ಎಂಟು ವರ್ಷ ಅನುಭವ ಇರಬೇಕು ಮತ್ತು ಪರೀಕ್ಷೆ ಬರೆಯಬೇಕು ಎಂದು ಹೇಳುತ್ತಾರೆ. ಮತ್ತೆ ಅದರಿಂದ ವ್ಯವಸ್ಥಾಪಕರಾಗಬೇಕಾದರೆ, ಅದಕ್ಕೆ ಐದು ವರ್ಷ ಅನುಭವ ಇರಬೇಕು ಮತ್ತು ಪರೀಕ್ಷೆ ಬರೆಯಬೇಕು ಎಂದು ಹೇಳುತ್ತಾರೆ. ಈ ತರಹ ಮಾಹಿತಿಯನ್ನು ನೀಡಿದ್ದಾರೆ. ಮುಖ್ಯವಾದ ಹುದ್ದೆಗಳಾದ ಎಜಿಎಂ ಮತ್ತು ಡಿಜಿಎಂ ಇವುಗಳಿಗೆ regular ಹುದ್ದೆಗಳು ಇಲ್ಲ. ಮುಖ್ಯವಾದ ಹುದ್ದೆಗಳನ್ನು ಗುತ್ತಿಗೆಯ ಮೇಲೆ ನೇಮಕಾತಿ ಮಾಡಿಕೊಳ್ಳುತ್ತಾರೆ. ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಂತಹವರಿಗೆ ಪ್ರಮೋಷನ್ ಕೊಡುತ್ತಿದ್ದಾರೆ ಮತ್ತು ಅವರನ್ನು ಪುನಃ ನೇಮಕ ಮಾಡಿಕೊಳ್ಳುತ್ತಿದ್ದಾರೆ.

**(ಮುಂದುವರೆದಿದೆ...)**



“ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ(ಮುಂದುವರೆದುದು ...)

ಮುಖ್ಯ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುತ್ತಾರೆ. ಅವರಿಗೆ ಪ್ರಮೋಷನ್ ಕೊಡುತ್ತಾರೆ. ಅಲ್ಲದೇ ಅವರನ್ನು rejoin ಮಾಡಿಕೊಳ್ಳುತ್ತಾರೆ. A.G.M. (Assistant General Manager) ಆಗಿ ಅವರಿಗೆ ಕೆಲಸ ಕೊಟ್ಟು, ಸ್ವಲ್ಪ ದಿವಸ ಆದ ನಂತರ ಅವರನ್ನು rejoin ಮಾಡಿಕೊಂಡು D.G.M. (Deputy General Manager) ಮಾಡಿಕೊಳ್ಳುತ್ತಾರೆ. ಅದಕ್ಕೆ ಕೆಲವು ಉದಾಹರಣೆಗಳು ಇವೆ. ಉದಾಹರಣೆಗೆ, ಶ್ರೀ ಮಂಜುನಾಥ್‌ಸ್ವಾಮಿ ಎಂಬುವವರನ್ನು A.G.M. ಆಗಿ ತೆಗೆದುಕೊಂಡು ಅವರನ್ನು rejoin ಮಾಡಿಕೊಂಡು D.G.M. ಮಾಡುತ್ತಾರೆ. ಮತ್ತೊಂದು ಉದಾಹರಣೆ ಎಂದರೆ, ರೆವಿನ್ಯೂ ವಿಭಾಗದಲ್ಲಿ Assistant Manager ಅನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡು, ನಂತರ ಅವರಿಗೆ ಮ್ಯಾನೇಜರ್ ಆಗಿ ಪ್ರಮೋಷನ್ ಕೊಡುತ್ತಾರೆ. ಗುತ್ತಿಗೆ ಆಧಾರದ ಮೇರೆಗೆ ತೆಗೆದುಕೊಂಡ ನೌಕರರಿಗೆ ಎಲ್ಲಾ ಪ್ರಮೋಷನ್ ಕೊಡುತ್ತಾರೆ. ಮೆಟ್ರೋದಲ್ಲಿ ರೆಗ್ಯುಲರ್ ಆಗಿ 9 ವರ್ಷ ಸೇವೆ ಸಲ್ಲಿಸಿದ ನೌಕರರುಗಳಿಗೆ ಪ್ರಮೋಷನ್ ಇಲ್ಲ ಮತ್ತು ಪರೀಕ್ಷೆ ಇಡುತ್ತಾರೆ. ಇದು ಸರಿಯಲ್ಲ, ಇದನ್ನು ತಿದ್ದುಪಡಿ ಮಾಡಬೇಕು. ಗುತ್ತಿಗೆ ಆಧಾರದ ನೇಮಕಾತಿಯನ್ನು ತೆಗೆದು, ರೆಗ್ಯುಲರ್ ಆಗಿ ನೇಮಕ ಮಾಡಿಕೊಳ್ಳಬೇಕು ಮತ್ತು ಇರುವಂತಹ ನೌಕರರುಗಳಿಗೆ relaxation ಕೊಡಬೇಕು. ಏಕೆಂದರೆ, ಎಲ್ಲಾ ಇಲಾಖೆಗಳಲ್ಲಿಯೂ ಸಹ ಯಾವ ರೀತಿ ಪ್ರಮೋಷನ್ ಕೊಡುತ್ತಿದ್ದಾರೆ ಆ ರೀತಿ ಇವರಿಗೂ ಸಹ ಪ್ರಮೋಷನ್ ಕೊಡಬೇಕೆಂದು ನನ್ನ ಮನವಿ ಇದೆ. ಇದಕ್ಕೆ ಇನ್ನೂ ಮುಂದೆ ಹೋಗಿ ಈ ರೀತಿ ಗುತ್ತಿಗೆ ಆಧಾರದ ಮೇರೆಗೆ ನೇಮಕ ಮಾಡಿಕೊಂಡು ಕೆಲಸ ಮಾಡಿಸುತ್ತಿರುವುದರಿಂದ ಏನು ನ್ಯೂನತೆಗಳಿವೆ ಎಂದು ಈಗಾಗಲೇ ಪತ್ರಿಕೆಯಲ್ಲಿ ವರದಿಯಾಗಿದೆ. ಟ್ರಿನಿಟಿ ಸರ್ಕಲ್‌ನಲ್ಲಿ ಯಾವ ರೀತಿ ಪಿಲ್ಲರ್‌ನಲ್ಲಿ ಬಿರುಕು ಬಿಟ್ಟಿದೆ, ಅದಕ್ಕೆ ಜವಾಬ್ದಾರರು ಯಾರು? ಅದಕ್ಕೆ ವಿನ್ಯಾಸಕಾರರು ಯಾರು? ಕಂಟ್ರಾಕ್ಟರ್ ಯಾರು? ಪ್ರಾಜೆಕ್ಟ್ ಇಂಜಿನಿಯರ್ ಯಾರು? ನಮ್ಮ ರಾಜ್ಯದ ಲೋಕೋಪಯೋಗಿ ಇಲಾಖೆಯವರಿಗೆ ಅದರ ಮೇಲೆ ಉಸ್ತುವಾರಿ ಇದ್ಯಾವುದು ಇರುವುದಿಲ್ಲ. ಹಾಗಾಗಿ, ಮಾನ್ಯ ಮಂತ್ರಿಗಳು ಇದನ್ನು ಸಡಿಲಿಕೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಡಾ: ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ಬೆಂಗಳೂರು ಮೆಟ್ರೋ ಬಗ್ಗೆ, *'ಬೆಂಗಳೂರು ಮೆಟ್ರೋ ಬಹಳ ಚೆನ್ನಾಗಿ ನಡೆಯುತ್ತಿದೆ'* ಎಂದು ಇಡೀ ದೇಶದಲ್ಲಿ ಈಗಾಗಲೇ ಎಲ್ಲರೂ ಕೂಡ ಮಾತನಾಡುತ್ತಿದ್ದಾರೆ. ಬೆಂಗಳೂರು ಮೆಟ್ರೋದಲ್ಲಿ ಹೆಚ್ಚು ಜನ ಪ್ರವಾಸ ಮಾಡುತ್ತಿದ್ದಾರೆ. ಈಗ First Phase ಮಾತ್ರ complete ಆಗಿದೆ. ಅಲ್ಲಿ ಸುಮಾರು 4 ಲಕ್ಷ ಜನ ಪ್ರತಿನಿತ್ಯ ಪ್ರಯಾಣ ಮಾಡುತ್ತಿದ್ದಾರೆ. ಇದು ಬಹಳ technical ವಿಚಾರ. ಅದಕ್ಕಾಗಿ ನಾವು ಎಲ್ಲರನ್ನೂ ಖಾಯಂ ನೌಕರರನ್ನಾಗಿ ಮಾಡಿಕೊಳ್ಳಲಿಲ್ಲ. ಈಗ 1204 ಜನ ಖಾಯಂ ನೌಕರರಿದ್ದಾರೆ. ಅದರಲ್ಲಿ ನಾವು ಕೆಲವರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿದ್ದೇವೆ. ಉದಾಹರಣೆಗೆ, technical

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

staff ಬೇಕಾಗುತ್ತಾರೆ. ಅದಕ್ಕಾಗಿ ಕೆಲವು ನೌಕರರನ್ನು ಖಾಯಂ ಆಗಿ ನೇಮಕ ಮಾಡಿಕೊಂಡು, ಕೆಲವರನ್ನು ಹೊರಗುತ್ತಿಗೆ ಮೇರೆಗೆ ನೇಮಕ ಮಾಡಿಕೊಂಡಿದ್ದೇವೆ.

ಮಾನ್ಯ ಸದಸ್ಯರ ಮಾಹಿತಿಗಾಗಿ, ಖಾಯಂ ನೌಕರರು 1204, ಅವರಿಗೆ ಸಂಬಳ 5 ಕೋಟಿ 29 ಲಕ್ಷ ರೂಪಾಯಿ. ಅದೇ ರೀತಿಯಾಗಿ deputation ಮೇರೆಗೆ ಇಬ್ಬರನ್ನು ಮಾತ್ರ ತೆಗೆದುಕೊಂಡಿದ್ದಾರೆ. ಅವರಿಗೆ ಬಹಳ ಕಡಿಮೆ ಸಂಬಳ. ಅವರಿಗೆ 2 ಲಕ್ಷ ವೇತನ ನೀಡುತ್ತಾರೆ. ಗುತ್ತಿಗೆ ಆಧಾರದ ಮೇರೆಗೆ 214 ಜನ ನೌಕರರನ್ನು ತೆಗೆದುಕೊಂಡಿದ್ದಾರೆ. ಸೆಕ್ಯೂರಿಟಿ ಮತ್ತು ಅಲ್ಲಿ ಬೇರೆ ಬೇರೆ ಕಾರಣಕ್ಕಾಗಿ ಹೊರಗುತ್ತಿಗೆ ಆಧಾರದ ಮೇರೆಗೆ ಸುಮಾರು 3076 ಜನ ನೌಕರರನ್ನು ತೆಗೆದುಕೊಳ್ಳಲಾಗಿದೆ. ಅವರಿಗೆ 8 ಕೋಟಿ 87 ಲಕ್ಷ ರೂಪಾಯಿ ವೇತನ ನೀಡುತ್ತಿದ್ದಾರೆ. ಅದರಲ್ಲಿ 'Project Wing' ಎಂದು ಇದೆ. ಅದರಲ್ಲಿ 831 ಜನ ಕೆಲಸ ಮಾಡುತ್ತಿದ್ದಾರೆ. ಅವರಿಗೆ 4.92 ಕೋಟಿ ರೂಪಾಯಿ ವೇತನ ನೀಡುತ್ತಿದ್ದಾರೆ. ಏತಕ್ಕೆ ಈ ರೀತಿ categorise ಮಾಡಿಕೊಂಡಿದ್ದೇವೆಯೆಂದರೆ, ಕೆಲವು ಆಡಳಿತಾತ್ಮಕವಾಗಿ administrative staff ತೆಗೆದುಕೊಳ್ಳುವುದು ಒಂದು ವಿಚಾರ. ಆದರೆ, technical ಆಗಿ ಬಹಳಷ್ಟು ಜನ ಬೇಕಾಗುತ್ತದೆಯೆಂದು ಹೊರಗುತ್ತಿಗೆ ಮೇರೆಗೆ ಅಥವಾ ಗುತ್ತಿಗೆ ಆಧಾರದ ಮೇರೆಗೆ ನೇಮಕ ಮಾಡಿಕೊಂಡಿದ್ದಾರೆ. 1204 ಜನ ಖಾಯಂ ನೌಕರರಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮಾಡಿದ್ದಾರೆ. ಅದು ಬಹುಶಃ it is in conformity with the State C & R Rules. K.C.S.Rs (Karnataka Civil Services Rules) ಏನಿದೆ ಅದರ ಜೊತೆಗೆ technical ವಿಷಯಗಳಿರುವುದರಿಂದ ಕೆಲವು ಹೆಚ್ಚುವರಿ provisions ಅನ್ನು ಮಾಡಿಕೊಂಡಿದ್ದಾರೆ. ಇದರಲ್ಲಿ promotion policy ಮತ್ತು ಅವರ technical knowledge. ಜೊತೆಗೆ, ಅವರಿಗೆ merit ಏನಿದೆ ಈ ಆಧಾರದ ಮೇಲೆ ಪ್ರಮೋಷನ್ ಕೊಡತಕ್ಕಂಥದ್ದನ್ನು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿಯೇ ಸೇರಿಸಿಕೊಂಡಿದ್ದಾರೆ. It is not out of C & R Rules. Whims and fancies ಅಥವಾ pick and choose ಮಾಡಿ promotion ಮಾಡುತ್ತಾರೆ ಎನ್ನುವುದು ಸರಿಯಲ್ಲ. ಆ ರೀತಿ ಮಾಡುವುದಕ್ಕಾಗುವುದಿಲ್ಲ. ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿಯೇ ಆ ರೀತಿ provision ಮಾಡಿದ್ದಾರೆ. ಆದರೆ, ಮಾನ್ಯ ಸದಸ್ಯರು ಹೇಳುವ ಪ್ರಕಾರ ರಾಜ್ಯದ ಎಲ್ಲಾ ಇಲಾಖೆಗಳಲ್ಲಿ ಒಂದೇ ರೀತಿಯ ವೃಂದ ಮತ್ತು ನೇಮಕಾತಿ ನಿಯಮಗಳಿದ್ದು, ಮೆಟ್ರೋದವರು ಮಾತ್ರ promotion ಕೊಡುವಾಗ ಏತಕ್ಕೆ ಪರೀಕ್ಷೆ ಮಾಡುತ್ತಿದ್ದಾರೆ? ಪರೀಕ್ಷೆ ಮಾಡದೇ by virtue of number of years of service rendered ಆ basis ಮೇಲೆ promotion ಏತಕ್ಕೆ ಕೊಡಬಾರದು? ಈಗಾಗಲೇ ಟ್ರಿನಿಟಿ ಸರ್ಕಲ್‌ನಲ್ಲಿ ಒಂದು ಸಣ್ಣ honeycomb ಏನೋ ಆಗಿದೆ ಎಂದು ಹೇಳಿದ್ದಕ್ಕೆ ಅದೊಂದು ದೊಡ್ಡ ಪ್ರಚಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿಬಿಟ್ಟಿದೆ. ಬೇರೆ ಯಾವುದಾದರೂ ದೊಡ್ಡ ಘಟನೆಯಾದರೆ ಯಾರಿಗೆ ಉತ್ತರ ಕೊಡುವುದು? Examination ಮಾಡಿದ್ದೆವು, ಇನ್ನೊಂದು ಮಾಡಿದ್ದೆವು ಈ ರೀತಿ ಸಬೂಬು ಹೇಳುವುದಕ್ಕಾಗುವುದಿಲ್ಲ. ಅದಕ್ಕಾಗಿ technical ಆಗಿ ಅವರಿಗೆ knowledge ಇದೆ merit ಇದೆ, ಇವೆಲ್ಲವನ್ನೂ ಸ್ವಲ್ಪ examination ಮಾಡಿದರೆ ಅದು ನನ್ನ ದೃಷ್ಠಿಯಲ್ಲಿ ತಪ್ಪಿಲ್ಲವೆಂದು ನನಗನ್ನಿಸುತ್ತದೆ. ಆದರೆ, ಯಾವುದೋ ಕಾರಣಕ್ಕಾಗಿ promotion ಕೊಟ್ಟಿಲ್ಲವೆನ್ನುವುದನ್ನು ಖಂಡಿತವಾಗಿ ನಾನು ಪರಿಶೀಲಿಸುತ್ತೇನೆ. ಏಕೆಂದರೆ, ಯಾವುದೂ ಕೂಡ pick and choose ಮಾಡ್ವತಕ್ಕಂಥದ್ದಕ್ಕೆ ಸಾಧ್ಯತೆ ಆಗಬಾರದೆಂದು examination ಮಾಡುತ್ತಾರೆ. Examination ನಲ್ಲಿ ಯಾರು ಚೆನ್ನಾಗಿ ಪಾಸ್ ಆಗುತ್ತಾರೆ ಅಥವಾ ಮೆರಿಟ್ ನಲ್ಲಿ ಬರುತ್ತಾರೆ...

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ನಮ್ಮ ಪ್ರಶ್ನೆ ಏನೆಂದರೆ, ಮೆರಿಟ್ ಮತ್ತು seniority ಯನ್ನು ಇಟ್ಟುಕೊಳ್ಳಲಿ. ಆದರೆ, ಈ ಪರೀಕ್ಷೆಯಲ್ಲಿ ಏನೋ ಹುನ್ನಾರ ಇದೆ ಎನ್ನುವುದು ಈಗಾಗಲೇ ಸಾಬೀತಾಗಿದೆ.

**ಡಾ: ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ಕೇವಲ ಪರೀಕ್ಷೆ ಒಂದೇ ಆಗುವುದಿಲ್ಲ. Seniority ಕೂಡ ಬರುತ್ತದೆ. Number of years of service rendered i.e. experience ಗಣನೆಗೆ ಬರುತ್ತದೆ. ಅದರ ಮೇಲೆ ಮೆರಿಟ್ ಬರುತ್ತದೆ. ಇವೆರಡನ್ನೂ ಇಟ್ಟುಕೊಂಡು promotion ಮಾಡುತ್ತಾರೆ. ಒಂದು ವೇಳೆ ಆ ರೀತಿ ಇಲ್ಲದೇ ಹೋದರೆ...

(ಗೊಂದಲ)

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯದಲ್ಲಿಯೂ ಸಹ ಇಂಜಿನಿಯರಿಂಗ್, K.P.S.C. (Karnataka Public Service Commission), ಪೊಲೀಸ್ ಇಲಾಖೆಗಳಿದ್ದು, I.A.S. Officer ಇರಬಹುದು ಅಥವಾ ಯಾವುದೇ ಆಫೀಸರ್ ಇರಬಹುದು ಯಾರು ಸಹ ಪರೀಕ್ಷೆ ತೆಗೆದುಕೊಂಡು promotion ತೆಗೆದುಕೊಳ್ಳುತ್ತಿಲ್ಲ. ಆದರೆ, ಈ ಇಲಾಖೆಯಲ್ಲಿ ಇವರಿಗೆ ಮಾತ್ರ ಏತಕ್ಕೆ ಪರೀಕ್ಷೆ ನಡೆಸಿ promotion ಕೊಡುತ್ತಾರೆ? ಏಕೆಂದರೆ, ಈ ಪದ್ಧತಿ ಯಾವ ಇಲಾಖೆಯಲ್ಲಿಯೂ ಇರುವುದಿಲ್ಲ. ಇಬ್ಬರು ಅಧಿಕಾರಿಗಳನ್ನು deputation ಮೇರೆಗೆ ತೆಗೆದುಕೊಂಡಿದ್ದೇನೆಂದು ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ಅವರು ಯಾರು ಎಂಬುದನ್ನು ತಿಳಿಸುವುದಕ್ಕೆ ಆಗುತ್ತದೆಯೇ?

**ಡಾ: ಜಿ. ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ಆ ಅಧಿಕಾರಿಗಳ ಹೆಸರನ್ನು ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೆ, ಗುತ್ತಿಗೆ ಆಧಾರದ ಮೇರೆಗೆ ಇರುವವರಿಗೆ promotion ಕೊಡುತ್ತಾರೆಂದು ನಾನು ಮತ್ತೊಂದು ಪ್ರಶ್ನೆ ಕೇಳಿದ್ದೇನೆ. ಅವರಿಗೆ ಯಾವುದೇ ಪರೀಕ್ಷೆ ಇರುವುದಿಲ್ಲ. Revenue Officer ಆಗಿ ಗುತ್ತಿಗೆ ಆಧಾರದ ಮೇರೆಗೆ ತೆಗೆದುಕೊಂಡು ಅವರಿಗೆ ಮ್ಯಾನೇಜರ್ ಆಗಿ promotion ಕೊಡುತ್ತಾರೆ. ನಂತರ A.G.M. ಹುದ್ದೆಗೆ ತೆಗೆದುಕೊಳ್ಳುತ್ತಾರೆ. ಸ್ವಲ್ಪ ದಿನಗಳ ನಂತರ rejoin ಮಾಡಿ D.G.M. ಮಾಡುತ್ತಾರೆ. ಈ ಎಲ್ಲಾ ಉದಾಹರಣೆಗಳನ್ನು ಹೆಸರು ಸಹಿತ ಕೊಟ್ಟಿದ್ದೇನೆ.

**ಡಾ: ಜಿ. ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಈ ರೀತಿ out of turn ಮಾಡಿ ಅಥವಾ ಬೇರೆ ಯಾರಿಗೋ favour ಮಾಡುವುದಕೋಸ್ಕರ ಮಾಡಿದ್ದರೆ ಅದನ್ನು ಖಂಡಿತವಾಗಿ ನಾನು ಪರಿಶೀಲನೆ ಮಾಡುತ್ತೇನೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಮೆಟ್ರೋಗೆ ಸಂಬಂಧಪಟ್ಟಂತೆ ನನ್ನದೊಂದು ಉಪ ಪ್ರಶ್ನೆ ಇದೆ.

**ಸಭಾಪತಿಯವರು:-** ಇಲ್ಲ ಆಗುವುದಿಲ್ಲ. ದಯಮಾಡಿ ತಾವು ಕುಳಿತುಕೊಳ್ಳಿ. ಮುಂದಿನ ಪ್ರಶ್ನೆ ಶ್ರೀ ಎಂ.ಕೆ.ಪ್ರಾಣೇಶ್ ಅವರದ್ದು.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ರಾತ್ರಿ ಸಮಯದಲ್ಲಿ ಮೆಟ್ರೋ ರೈಲಿನ ಅವಧಿಯನ್ನು ವಿಸ್ತರಣೆ ಮಾಡಬೇಕು. ಏಕೆಂದರೆ, ಬೆಂಗಳೂರು ನಗರಕ್ಕೆ ಬಹಳ ಜನ ಬರುತ್ತಾರೆ. ಅವರೆಲ್ಲರೂ ಮೆಟ್ರೋ ರೈಲನ್ನು ಬಳಕೆ ಮಾಡುತ್ತಾರೆ. ಆ ವ್ಯವಸ್ಥೆ ಚೆನ್ನಾಗಿದೆ. ಆದುದರಿಂದ, ರಾತ್ರಿ ವೇಳೆಯಲ್ಲಿ ಮೆಟ್ರೋ ರೈಲಿನ ಅವಧಿಯನ್ನು ಅರ್ಧ ಗಂಟೆ ಅಥವಾ ಒಂದು ಗಂಟೆ ವಿಸ್ತರಣೆ ಮಾಡಬೇಕು.

**ಡಾ: ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಶರವಣರವರು ರಾತ್ರಿ ವೇಳೆಯಲ್ಲಿ ಓಡಾಡುತ್ತಾರೆಂದು ನನಗೆ ಈಗ ತಿಳಿಯಿತು.

**(ಗೊಂದಲ)**

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಬೆಂಗಳೂರು ನಗರಕ್ಕೆ ಬಹಳಷ್ಟು ಜನ ಬರುತ್ತಾರೆ. ಅವರು ಮೆಟ್ರೋ ರೈಲನ್ನು ಬಳಕೆ ಮಾಡುತ್ತಾರೆ. ಅವರಿಗೆ ಮೆಟ್ರೋ ರೈಲು ಸಮರ್ಪಕವಾಗಿ ಬಳಕೆಯಾಗಲಿ ಎಂದು ನಾನು ಹೇಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, Bengaluru never sleeps.

(ಗೊಂದಲ)

**ಡಾ: ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಶರವಣರವರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಚಿಂತನೆ ಮಾಡೋಣ.

**ಪ್ರಶ್ನೆ ಸಂಖ್ಯೆ: 19**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೆ, ಸರ್ಕಾರದವರು ಉತ್ತರಗಳನ್ನು ಕೊಟ್ಟಿದ್ದಾರೆ. ಬಹುಶಃ ಶ್ರೀ ಆರ್.ಧರ್ಮಸೇನರವರು ಪ್ರಶ್ನೆ ಮಾಡಿದಂತಹ ಸಂದರ್ಭದಲ್ಲಿ ನನ್ನ ಪ್ರಶ್ನೆಗಳನ್ನೆಲ್ಲಾ ಸೇರಿಸಿ ಮಾತನಾಡಿದ್ದಾರೆ. ಅವರು ಕೇಳಿದಂತಹ ಪ್ರಶ್ನೆಯೇ ಬೇರೆ, ನಾನು ಕೇಳಿದಂತಹ ಪ್ರಶ್ನೆಯೇ ಬೇರೆ. ಆದರೆ, ಇಲ್ಲಿ ಪ್ರಶ್ನೆಗಳಲ್ಲಿ ಇರುವಂತಹ ಸಮಸ್ಯೆಗಳಿಗೆ ಪರಿಹಾರದ ದೃಷ್ಟಿಯಿಂದ ನಾನು ಕೇಳಿರುವಂಥದ್ದು, ಪೊಲೀಸ್ ಇಲಾಖೆಯಲ್ಲಿ ಶ್ರೀ ಔರಾದ್ಕರ್‌ರವರ ವರದಿ ಏನಾಯಿತು ಮತ್ತು ವರದಿಯ ಬಗ್ಗೆ ಕೆಳಮನೆಯಲ್ಲಿ ಇನ್ನೊಂದು ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ ನನಗೊಂದು ಅನುಮಾನವಿದೆ. ಅದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು. ಒಬ್ಬ D.G. ಯವರೇ ಒಂದು ಸಮಿತಿ ರಚನೆ ಮಾಡುವುದು ಸರ್ಕಾರಕ್ಕೆ ಗೊತ್ತಿರುವುದಿಲ್ಲವೇ? ಏಕೆಂದರೆ, ಕೆಳಮನೆಯಲ್ಲಿ ಸರ್ಕಾರದವರು ಯಾವ ಉತ್ತರ ನೀಡಿದ್ದಾರೆಂದರೆ, ಕರ್ನಾಟಕ ರಾಜ್ಯ ಪೊಲೀಸ್ ನೇಮಕಾತಿ ಪ್ರಕ್ರಿಯೆಯ ಏಕ ಗವಾಕ್ಷಿ ವಿಧಾನ ಮೂಲಕ ನೇಮಕಾತಿ ಮಾಡಲು ಸರ್ಕಾರದಿಂದ ಯಾವುದೇ ಸಮಿತಿಯನ್ನು ರಚಿಸಿರುವುದಿಲ್ಲವೆಂದು ಕೆಳಗಿನ ಮನೆಯಲ್ಲಿ ಉತ್ತರ ಕೊಟ್ಟಿದ್ದಾರೆ. ಆದರೆ, ಈ ಸದನದಲ್ಲಿ ಶ್ರೀ ಔರಾದ್ಕರ್ ಸಮಿತಿಯನ್ನು ರಚನೆ ಮಾಡಿದ್ದಾರೆಯೇ ಎನ್ನುವ ಪ್ರಶ್ನೆ ಕೇಳಿದಂತಹ ಸಂದರ್ಭದಲ್ಲಿ ಮಾಡಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, D.G. ಯಿಂದ ಆ ಸಮಿತಿ ರಚನೆಯಾಗಿದೆ. ಅಂದರೆ, single window ಮಾಡುವುದಕ್ಕೆ D.G.ಯಿಂದ ರಚನೆಯಾಗಿದೆ. ಆದರೆ, D.G.ಯಿಂದ ಸಮಿತಿ ರಚನೆಯಾಗಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಅದನ್ನು ಸ್ಪಷ್ಟಪಡಿಸಬೇಕು.

(ಮುಂದುವರೆದಿದೆ...)

(457) 14-12-2018 (11.40) ವೈಎಲ್-ಬಿಎನ್ಎಸ್

ಶ್ರೀ ಎಂ.ಕೆ.ಪ್ರಾಣೇಶ್(ಮುಂದುವರೆದುದು...

ಎರಡನೆಯದಾಗಿ, ಈಗಾಗಲೇ ಅದರ ಉಲ್ಲೇಖವೂ ಆಗಿದೆ. ಆದರೂ ಇವತ್ತು ಇರುವಂಥ ದೊಡ್ಡ ಸಮಸ್ಯೆಯೆಂದರೆ, K.S.R.P. (Karnataka State Reserve Police), D.A.R. (District Armed Reserve), C.A.R. (City Armed Reserve), ಖಾಕಿಯವರು ಗುಡ್ ಬೈ ಹೇಳುತ್ತಿದ್ದಾರೆ. ಈಗಾಗಲೇ ಪೊಲೀಸ್

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಇಲಾಖೆಯ ಬಗ್ಗೆ ಕಾಳಜಿ ಇರುವುದಕ್ಕೆ ತುಂಬಾ ಸಂತೋಷವಾಗಿದೆ ಎಂದು ಹೇಳಿದರು. ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಾಗ ಮಾನ್ಯ ಜಿ.ಪರಮೇಶ್ವರವರೇ ಗೃಹ ಸಚಿವರಾಗಿದ್ದು, ಇವತ್ತಿಗೂ ಅವರೇ ಗೃಹ ಸಚಿವರಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದು, ಪೊಲೀಸ್ ಸಿಬ್ಬಂದಿಗಳ ಸಮಸ್ಯೆಗಳಿಗೆ ಏಕೆ ಪರಿಹಾರ ಸಿಕ್ಕಿರುವುದಿಲ್ಲ ಎನ್ನುವುದು ಅಥವಾ ಪೊಲೀಸ್ ಸಿಬ್ಬಂದಿಗಳನ್ನು reserve police ಸಿಬ್ಬಂದಿಗಳಾಗಿ ಉಳಿಸಿಕೊಳ್ಳುವುದಕ್ಕೆ ಸಾಧ್ಯವೇ ಎನ್ನುವುದು ನನ್ನ ಅನಿಸಿಕೆ. ಹಾಗಾಗಿ ಸಿಂಗಲ್ ವಿಂಡೋ ವ್ಯವಸ್ಥೆಯನ್ನು ತರಬೇಕು. ಪೊಲೀಸ್ ಸಿಬ್ಬಂದಿಗಳಿಗೆ ಒಂದು ವ್ಯವಸ್ಥೆಯನ್ನು ಮಾಡಬೇಕು. ಹಾಗೆಯೇ ನನ್ನ ಒಂದು ಸಲಹೆಯೇನೆಂದರೆ, ಕೇಂದ್ರದ ಮಾದರಿಯಲ್ಲಿ ಪೊಲೀಸ್ ಸಿಬ್ಬಂದಿಗಳಿಗೆ 08 ಗಂಟೆಗಳ ಕಾಲ ಕೆಲಸ ಮಾಡುವ ವ್ಯವಸ್ಥೆ ಇದೆ. ಆದರೆ, ನಮ್ಮಲ್ಲಿ 12 ಗಂಟೆಗಳ ಕಾಲ ಕೆಲಸ ಮಾಡುವ ವ್ಯವಸ್ಥೆ ಇದೆ. 08 ಗಂಟೆಗಳ ಕಾಲ ಕೆಲಸ ಮಾಡುವವರಿಗೂ ಒಂದೇ ರೀತಿಯ ಸೌಲಭ್ಯ, 12 ಗಂಟೆಗಳ ಕಾಲ ಕೆಲಸ ಮಾಡುವವರಿಗೂ ಒಂದೇ ರೀತಿಯ ಸೌಲಭ್ಯ ನೀಡಲಾಗುತ್ತಿದೆ. ಆದ್ದರಿಂದ 12 ಗಂಟೆಗಳ ಕಾಲ ಕರ್ತವ್ಯ ನಿರ್ವಹಿಸುವವರಿಗೆ ಹೆಚ್ಚುವರಿಯಾಗಿ ಸೌಲಭ್ಯವನ್ನು ಒದಗಿಸುವಂಥ ವ್ಯವಸ್ಥೆ ಸರ್ಕಾರದ ಮುಂದಿದೆಯೇ? ಏನಿದೆ ಎಂಬುದನ್ನು ಮಾನ್ಯ ಸಚಿವರನ್ನು ಸ್ಪಷ್ಟಪಡಿಸಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ.

**ಡಾ|| ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಈಗಾಗಲೇ ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಿರುವುದರಿಂದ ಅವರು ಕೇಳಿರುವಂಥ ಕೆಲವು ಪ್ರಶ್ನೆಗಳಿಗೆ ಉತ್ತರ ಸಿಕ್ಕಿದೆ ಎಂದು ಭಾವಿಸಿದ್ದೇನೆ. ಹಾಗೆಯೇ ಮಾನ್ಯ ಸದಸ್ಯರು ಕೇಳಿದ ಹಾಗೆ ಪ್ರಶ್ನೆಯನ್ನು ಮೊದಲು ಬಗೆಹರಿಸುತ್ತೇನೆ. ಮಾನ್ಯ ಸದಸ್ಯರೇ ಹೇಳಿದ ಹಾಗೆ D.G. ಯವರು ಮಾಡಿರುವ ಸಮಿತಿಯ ಬಗ್ಗೆ ಗೊತ್ತಿಲ್ಲವೇ ಎಂದು ಹೇಳುತ್ತಿದ್ದಾರೆ. D.G. ಯವರು ಮಾಡಿರುವ ಸಮಿತಿಯು ಸರ್ಕಾರದಿಂದ ರಚನೆ ಮಾಡಿರುವುದಿಲ್ಲ. ಇಲಾಖೆಯಲ್ಲಿಯೇ internal ಆಗಿ ಸಮಿತಿಯನ್ನು ಮಾಡಿಕೊಂಡು, ಈ ರೀತಿ ಮಾಡಿದರೆ ಸಾಧ್ಯತೆ ಇದೆಯೇ, ಒಂದು ವೇಳೆ ಸರ್ಕಾರ ಏನಾದರೂ ಕೇಳಿದರೆ ಯಾವ ರೀತಿಯ ಉತ್ತರವನ್ನು ನೀಡಬಹುದೆಂದು ಅವರ ಹಂತದಲ್ಲಿಯೇ ನಡೆಸಿದಂಥ ಸಮಿತಿಯಾಗಿದೆಯೆ ವಿನಾ ಸರ್ಕಾರ ರಚನೆ ಮಾಡಿರುವ ಸಮಿತಿ ಅಲ್ಲ. ಪೊಲೀಸ್ ಸಿಬ್ಬಂದಿಗಳ ಸಂಬಳ ಮತ್ತು ಇತರೆ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಸರ್ಕಾರದಿಂದ "ಔರಾದ್ಕರ್ ಸಮಿತಿ" ಯನ್ನು ರಚನೆ ಮಾಡಲಾಗಿದೆ. ಅದಕ್ಕಾಗಿ ಮೊದಲು ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಸ್ಪಷ್ಟೀಕರಣವನ್ನು ನೀಡುತ್ತಿದ್ದೇನೆ. That is not an official Committee of the Government. ಔರಾದ್ಕರ್ ಸಮಿತಿಯಿಂದ ವರದಿ ಬಂದ ನಂತರ ಅವರು ಬಹಳ ವಿವರವಾದ ವರದಿಯನ್ನು ಕೊಟ್ಟಿದ್ದಾರೆ. ಈ ಹಿಂದೆ ಕಡಿಮೆ ಸಂಬಳವನ್ನು ನೀಡಲಾಗುತ್ತಿದೆ ಹಾಗೂ ಬೇರೆ ಬೇರೆ ಇಲಾಖೆಗಳಲ್ಲಿ categorization ಮಾಡಲಾಗಿದೆ ಅದರ ಪ್ರಕಾರ ನಮಗೆ ಏನನ್ನೂ ಸಹ ನೀಡುತ್ತಿಲ್ಲ, ಆ ರೀತಿ ಸರಿಪಡಿಸಬೇಕು ಎಂದು ಪೊಲೀಸ್ ಇಲಾಖೆಯ ಸಿಬ್ಬಂದಿಗಳೆಲ್ಲರೂ ಸರ್ಕಾರದ ಮುಂದೆ ಮುಷ್ಕರ ಮಾಡುವ ಮಟ್ಟಕ್ಕೆ ಹೋಗಿದ್ದರು. ಆಗ ನಾನೇ ಗೃಹ ಸಚಿವನಾಗಿದ್ದು,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆ ಸಂದರ್ಭದಲ್ಲಿ ಸಮಿತಿಯನ್ನು ರಚನೆ ಮಾಡಿದ್ದೆ. ಯಾವ ರೀತಿ ಬೇರೆ ಬೇರೆ ರಾಜ್ಯದಲ್ಲಿ ಒಬ್ಬ ಪೊಲೀಸ್ ಪೇದೆಯಿಂದ ಹಿಡಿದು ಸಬ್-ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್‌ವರೆಗೂ ಯಾವ್ಯಾವ ರೀತಿ ವ್ಯವಸ್ಥೆಯನ್ನು ನಿಗದಿ ಮಾಡಲಾಗಿದೆ ಅದೆಲ್ಲವನ್ನು ಸಂಗ್ರಹ ಮಾಡಿ ವರದಿ ನೀಡಬೇಕೆಂದು ಸಮಿತಿಗೆ ತಿಳಿಸಲಾಗಿದ್ದು, ಸಮಿತಿಯು ವರದಿಯನ್ನು ಸಹ ನೀಡಿದೆ. ಅದರಲ್ಲಿ ನಮ್ಮ ರಾಜ್ಯದಲ್ಲಿರತಕ್ಕಂಥ ಒಬ್ಬ ಪೊಲೀಸ್ ಪೇದೆಯು ಕಂದಾಯ ಇಲಾಖೆಯ Village Accountant level ನಲ್ಲಿದ್ದಾರೆ. ಆದರೆ, Village Accountantಗೆ ಕೊಡುವಂಥ ಸಂಬಳ ಈ ಪೊಲೀಸ್ ಪೇದೆಗಳಿಗೆ ಸಿಗುತ್ತಿಲ್ಲ. ಔರಾದ್ಕರ್ ಸಮಿತಿ ಮಾಡುವ ಉದ್ದೇಶವೇನೆಂದರೆ, ಪೊಲೀಸ್ ಸಿಬ್ಬಂದಿಗಳಿಗೆ ಸಂಬಳದಲ್ಲಿ equate ಮಾಡಬೇಕು ಮತ್ತು categorization ನಲ್ಲಿಯೂ ಸಹ equate ಮಾಡಬೇಕೆನ್ನುವ ಕಾರಣದಿಂದ Terms of Reference ಕೊಡುವಾಗ ಮಾಡಿದ್ದೇವೆ. ಅದೇ ಪ್ರಕಾರ, a Constable is equivalent to a Driver in the Commercial Tax Department. General administration ನಲ್ಲಿ ದ್ವಿತೀಯ ದರ್ಜೆ ಸಹಾಯಕರ ಮಟ್ಟಕ್ಕೆ ಅವರು ಸಮಾನರಾಗುತ್ತಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ Grade-I Panchayath Secretaryಗೆ ಸಮಾನರಾಗಿರುತ್ತಾರೆ. ಆದರೆ, ಎಲ್ಲಿಯೂ ಸಹ ಪೊಲೀಸ್ ಪೇದೆಗಳಿಗೆ ಕೊಡುವ ಸಂಬಳವು ಅವರೆಲ್ಲರ ಸಂಬಳಕ್ಕೆ ಸರಿಸಮಾನವಾಗುತ್ತಿಲ್ಲ. ಅದಕ್ಕಾಗಿ ಪೊಲೀಸ್ ಪೇದೆಗಳೆಲ್ಲರಿಗೂ ಸಮಾನ ರೀತಿಯಲ್ಲಿ ಸಂಬಳವನ್ನು ನೀಡಬೇಕೆಂದು ಬೇರೆ ಬೇರೆ ರಾಜ್ಯಗಳಿಗೆ ಸಂಬಂಧಿಸಿದ ವಿವರವನ್ನು ಸಹ ನೀಡಿದ್ದಾರೆ. ಅದನ್ನು ಈ ಸಂದರ್ಭದಲ್ಲಿ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಅವಶ್ಯಕತೆ ಇದ್ದರೆ ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

**ಶ್ರೀ ಪ್ರಾಣೇಶ್ ಎಂ.ಕೆ.:-** ಮಾನ್ಯ ಸಭಾಪತಿಯವರೆ, ....

**ಡಾ|| ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ನನ್ನ ಮಾತು ಸಂಪೂರ್ಣವಾಗಿ ಮುಗಿದ ಮೇಲೆ ಮಾನ್ಯ ಸದಸ್ಯರು ಸ್ಪಷ್ಟೀಕರಣವನ್ನು ಕೇಳಲಿ. ನನ್ನ ಮಾತು ಇನ್ನೂ ಮುಗಿದಿಲ್ಲ. ಸಂಪೂರ್ಣವಾಗಿ ನಾನು ಉತ್ತರವನ್ನು ನೀಡಿಲ್ಲ. ಆದ್ದರಿಂದ ಔರಾದ್ಕರ್ ಸಮಿತಿಯ ವರದಿ ಪ್ರಕಾರ, Constable, Head Constable, Sub-Inspector ವರೆಗೂ 3 category ಗಳನ್ನು ಮಾಡಲಾಗಿದೆ ಅದಕ್ಕೆ ಔರಾದ್ಕರ್ ಸಮಿತಿಯ ವರದಿಯನ್ನು ಅನುಷ್ಠಾನ ಮಾಡುತ್ತೇವೆ. ಅದರಲ್ಲಿ ಯಾವುದೇ ಅನುಮಾನ ಬೇಡ. ಎರಡನೆಯದಾಗಿ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಸಹ ಎರಡು ತಿಂಗಳ ಹಿಂದೆ ಔರಾದ್ಕರ್ ಸಮಿತಿ ವರದಿಯನ್ನು ಅನುಷ್ಠಾನ ಮಾಡುತ್ತೇವೆ ಎಂದು ಹೇಳಿಕೆಯನ್ನು ನೀಡಿದ್ದಾರೆ. ಯಾವ ರೀತಿ ಅನುಷ್ಠಾನ ಮಾಡಬೇಕು, ಪೊಲೀಸ್ ಸಿಬ್ಬಂದಿಯನ್ನು equate ಮಾಡಬೇಕೆಂಬ ಪ್ರಕ್ರಿಯೆ ಏನಿದೆ, ಈಗಾಗಲೇ ಆ ಪ್ರಕ್ರಿಯೆಯನ್ನು ಪ್ರಾರಂಭ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಲಾಗಿದೆ. ಆರ್ಥಿಕ ಇಲಾಖೆಗೂ ಸಹ ಕಡತವನ್ನು ಕಳುಹಿಸಲಾಗಿದೆ. ಆದಷ್ಟು ಶೀಘ್ರವಾಗಿ ಔರಾದ್ಕರ್ ಸಮಿತಿಯ ವರದಿಯನ್ನು ಅನುಷ್ಠಾನ ಮಾಡುತ್ತೇವೆ. ಅದಕ್ಕೂ ಮೊದಲು ಈಗಾಗಲೇ ಕಳೆದ ಬಾರಿ ಪೊಲೀಸ್ ಸಿಬ್ಬಂದಿಗೆ ಭತ್ಯೆಯನ್ನು ನಿಗದಿಪಡಿಸಲಾಗಿದೆ. ಆ ಭತ್ಯೆಯನ್ನು ಔರಾದ್ಕರ್ ಸಮಿತಿಯಲ್ಲಿ ಶಿಫಾರಸ್ಸು ಮಾಡಲಾಗಿರುವ Hardship Allowance ಎಂದು 1000 ರೂಪಾಯಿಯನ್ನು ಸಮವಸ್ತ್ರ ಭತ್ಯೆ, ಸಾರಿಗೆ ಭತ್ಯೆ, ಈ ರೀತಿಯಾಗಿ ತಿಂಗಳಿಗೆ ಒಟ್ಟು 2000 ರೂಪಾಯಿ ಭತ್ಯೆಯನ್ನು ಜಾಸ್ತಿ ಮಾಡಿ ನೀಡಲಾಗುತ್ತಿದೆ. ಹಾಗೆಯೇ ಅವರಿಗೆ ನೀಡುತ್ತಿರುವ regular pay scale ಏನಿದೆ ಅದನ್ನು ಆದಷ್ಟು ಶೀಘ್ರವಾಗಿ ಹೆಚ್ಚಳ ಮಾಡುತ್ತೇವೆ.

**ಶ್ರೀ ಪ್ರಾಣೇಶ್ ಎಂ.ಕೆ.:–** ಮಾನ್ಯ ಸಭಾಪತಿಯವರೆ, ಈಗಾಗಲೇ ನ್ಯಾಯಮೂರ್ತಿ ಕೆ.ಟಿ.ಥಾಮಸ್ ಆಯೋಗದ ಶಿಫಾರಸ್ಸಿನನ್ವಯ ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಮಹಾರಾಷ್ಟ್ರ ರಾಜ್ಯಗಳಲ್ಲಿ ಸಿಂಗಲ್ ವಿಂಡೋ ಮಾಡಲಾಗಿದೆ. ಆದರೆ, ದಿನಾಂಕ 17.10.2017 ರಲ್ಲಿಯೇ ಇದನ್ನು ಶಿಫಾರಸ್ಸು ಮಾಡುವುದಕ್ಕೆ ಕಳುಹಿಸಿ, ಒಂದು ವರ್ಷವಾಗಿದೆ. ಒಂದು ವರ್ಷದಿಂದ ನೆನೆಗುದಿಗೆ ಬಿದ್ದಿದೆ. ಮತ್ತೆ ಔರಾದ್ಕರ್ ಸಮಿತಿ ವರದಿಯನ್ನು ತೆಗೆದುಕೊಂಡು, ಇನ್ನೂ ಮಾಡುತ್ತಿದ್ದೇವೆ ಎಂದರೆ ಹೇಗೆ? ಈಗಾಗಲೇ ಒಂದು ವರ್ಷ ಕಳೆದಿದೆ. ಬಾರಿ ಸುಲಭವಾಗಿ ಮಾಡಬೇಕಾದಂಥ ಕೆಲಸ ಇದು. ನ್ಯಾಯಮೂರ್ತಿ ಕೆ.ಟಿ.ಥಾಮಸ್ ಆಯೋಗದ ಶಿಫಾರಸ್ಸನ್ನು ತೆಗೆದುಕೊಂಡರೆ ಸುಲಭವಾಗಿ ಆಗುತ್ತದೆ. ಈಗಾಗಲೇ ನವದೆಹಲಿಯಲ್ಲಿಯೂ ನ್ಯಾಯಮೂರ್ತಿ ಕೆ.ಟಿ.ಥಾಮಸ್ ಆಯೋಗದ ಶಿಫಾರಸ್ಸನ್ನು ಜಾರಿ ಮಾಡಲಾಗಿದೆ. ಈ ರೀತಿ ಇರುವಾಗ ದೊಡ್ಡ ಸಮಸ್ಯೆ ಏನಾಗುವುದಿಲ್ಲ. ತಕ್ಷಣ ಪರಿಹಾರ ಕಂಡುಕೊಂಡು ಅವರಿಗೆ ನ್ಯಾಯ ಒದಗಿಸಿ ಕೊಡುವಂಥ ಕೆಲಸ ಆಗಬಹುದೆಂದು ಅನ್ನಿಸುತ್ತದೆ.

**ಡಾ|| ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಪೊಲೀಸ್ ಮಹಿಳಾ ಸಿಬ್ಬಂದಿಗಳು ಹಲವಾರು ಸ್ವರೂಪದ ಕೆಲಸವನ್ನು ಮಾಡುತ್ತಿದ್ದು, ಯುವಕರಿಗೆ ಪ್ರಹಾರ ದಳ ಅಥವಾ ತನಿಖಾ ದಳ ಮತ್ತು ಹಿರಿಯರಾದ ಮೇಲೆ ಉನ್ನತ ಅಧಿಕಾರಿಗಳಾಗಿ ಹುದ್ದೆಯನ್ನು ಕೊಡಲಾಗುವುದು. ಅವರಿಗೆ ಈಗ ಇರುವ ಸಮವಸ್ತ್ರವಾದ ಪ್ಯಾಂಟ್ ಮತ್ತು ಶರ್ಟ್ ಏನಿದೆ ಅದು ಕೆಲವೊಂದು ವಯೋಮಾನದವರೆಗೂ ಸರಿಹೋಗುತ್ತದೆ. ನಂತರ ಅವರಿಗೆ ಹಲವಾರು ದೈಹಿಕ ಸಮಸ್ಯೆಗಳು ಇರುತ್ತದೆ ಹಾಗೂ ಗರ್ಭಿಣಿಯಾದಂಥ ಸಂದರ್ಭದಲ್ಲಿ ಪ್ಯಾಂಟ್ ಮತ್ತು ಶರ್ಟ್ ಧರಿಸುವುದಕ್ಕೆ ಸಮಸ್ಯೆಯಾಗುವುದರಿಂದ ಪರ್ಯಾಯ ರೀತಿಯಲ್ಲಿ ಚೂಡಿದಾರ್ ಧರಿಸುವುದಕ್ಕೆ ಅನುವು ಮಾಡಿಕೊಡಬೇಕೆಂದು ಎಲ್ಲಾ ಸದಸ್ಯರ ಸಹಮತವನ್ನು ಕೇಳುತ್ತೇನೆ. ವಿರೋಧ ಪಕ್ಷದಲ್ಲಿ ನಾನೊಬ್ಬಳೇ ಹೆಣ್ಣು ಮಗಳು ಇರುವುದರಿಂದ ಕೆಲವೊಂದು ಸಂದರ್ಭದಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಸಮಸ್ಯೆಯನ್ನು ಹೇಳುವುದಕ್ಕೆ ದಯವಿಟ್ಟು ಸಹಕರಿಸಬೇಕು.

**ಸಭಾಪತಿಯವರು:–** ಅವಕಾಶ ಕಲ್ಪಿಸಲಾಗಿದೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೆ, ನಿವೃತ್ತಿಯ ಅಂಚಿನಲ್ಲಿರುವವರು, ಸ್ಥೂಲಕಾಯದವರು ಪ್ಯಾಂಟ್ ಮತ್ತು ಶರ್ಟ್ ಧರಿಸಿಕೊಂಡರೆ ಬಹಳ ಅಸಹ್ಯವಾಗಿರುತ್ತದೆ. ಹಾಗಾಗಿ ನನ್ನ ಈ ವಿನಂತಿಯನ್ನು ಮಾನವೀಯತೆಯಿಂದ ಪರಿಗಣಿಸಬೇಕೆಂದು ಬೇಡಿಕೊಳ್ಳುತ್ತೇನೆ.

**ಡಾ|| ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಬಹಳ ಉತ್ತಮವಾದ ಪ್ರಶ್ನೆಯನ್ನು ಮಾನ್ಯ ಸಹೋದರಿಯಾದ ಡಾ|| ತೇಜಸ್ವಿನಿ ಗೌಡರವರು ಕೇಳಿದ್ದಾರೆ. ಈಗಾಗಲೇ ಅದರ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. 40-50 ವರ್ಷದ ವಯೋಮಿತಿಯವರಿಗೆ ವಿನಾಯಿತಿ ಕೊಡುವಂಥ ಅಥವಾ option ಅನ್ನು ಅವರಿಗೆ ಕೊಡುವ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ಅದರಲ್ಲಿ ಒತ್ತಾಯ ಮಾಡುವ ಅಗತ್ಯವೇನಿಲ್ಲ. ಅವರು Disciplined Force ಆಗಿರುವುದರಿಂದ ಹಾಗೂ ಬಹಳಷ್ಟು ಹೆಣ್ಣು ಮಕ್ಕಳು ಸೀರೆಯನ್ನು ಧರಿಸಿದಾಗ ಸೀರೆಯನ್ನು ಹಿಡಿದುಕೊಳ್ಳಬೇಕೋ, ಲಾಠಿಯನ್ನು ಹಿಡಿದುಕೊಳ್ಳಬೇಕೋ, ತಪ್ಪಿತಸ್ಥರನ್ನು ಹಿಡಿದುಕೊಳ್ಳಬೇಕೋ ಎನ್ನುವ ಗೊಂದಲವಾಗುತ್ತದೆ ಎಂದು ಪ್ಯಾಂಟ್ ಮತ್ತು ಶರ್ಟ್ ಧರಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಮಾಡಲಾಗಿದೆ. 40-50 ವರ್ಷದ ವಯೋಮಿತಿಯಲ್ಲಿ ಬಟ್ಟೆ ಧರಿಸುವ ಬಗ್ಗೆ exemption ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ನ್ಯಾಯಮೂರ್ತಿ ಕೆ.ಟಿ.ಥಾಮಸ್ ಆಯೋಗದ ಶಿಫಾರಸ್ಸು ಇಡೀ ದೇಶಕ್ಕೆ, ಅನ್ವಯವಾಗುವ ರೀತಿಯಲ್ಲಿ ಇದೆ ಎಂದು ಹೇಳಿದ್ದಾರೆ. ಆದರೆ, ನಮ್ಮ ರಾಜ್ಯದ ಸಮಸ್ಯೆಗಳೇ ಬೇರೆ ಇವೆ. ಅದಕ್ಕಾಗಿ ಬೇರೆ ಸಮಿತಿಯನ್ನು ಮಾಡಬೇಕೆಂದು ಹೇಳುತ್ತಿದ್ದೇನೆ ವಿನಾ ಬೇರೆ ಯಾವ ಉದ್ದೇಶವು ಇರುವುದಿಲ್ಲ.

**(ಮುಂದುವರೆದಿದೆ...)**

**(458) 14-12-2018 SK-KS/11.50**

**ಪ್ರಶ್ನೆ ಸಂಖ್ಯೆ: 595**
**ಉತ್ತರವನ್ನು ಲಗತ್ತಿಸಲಾಗಿದೆ.**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-**ಮಾನ್ಯ ಸಭಾಪತಿಯವರೆ, ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಪ್ರಶ್ನೆ ಏನೆಂದರೆ, ರಾಜ್ಯದಲ್ಲಿ ಬಡವರ ಹಸಿವು ನೀಗಿಸಲು ಅನ್ನಭಾಗ್ಯ ಯೋಜನೆಯಡಿ ಸರ್ಕಾರ ವಿತರಿಸುತ್ತಿರುವ ಅಪಾರ ಪ್ರಮಾಣದ ಅಕ್ಕಿ ಮಧ್ಯವರ್ತಿಗಳ ಪಾಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶೆಗೆ ಲಿಖಿತ ಉತ್ತರದಲ್ಲಿ ರಾಜ್ಯದಲ್ಲಿ ಬಡವರ ಹಸಿವು ನೀಗಿಸಲು ಅನ್ನಭಾಗ್ಯ ಯೋಜನೆಯಡಿ ಸರ್ಕಾರ ವಿತರಿಸುತ್ತಿರುವ ಅಪಾರ ಪ್ರಮಾಣದ ಅಕ್ಕಿ ಮಧ್ಯವರ್ತಿಗಳ ಪಾಲಾಗದೇ ಇರುವಂತೆ ರಾಜ್ಯ ಸರ್ಕಾರವು ಆಹಾರ ಇಲಾಖೆಯ ಅನ್ನ ಭಾಗ್ಯ ಯೋಜನೆಯಡಿ ನಡೆಯಬಹುದಾದ ಅಕ್ರಮಗಳನ್ನು ಗಣನೀಯವಾಗಿ ಹತೋಟಿಗೆ ತಂದು ಪಡಿತರ ವಿತರಣೆ ವ್ಯವಸ್ಥೆಯನ್ನು ಸರಳೀಕರಿಸಿ ಸಂಪೂರ್ಣ ಪಾರದರ್ಶಕಗೊಳಿಸಿದೆ ಎಂದು ತಿಳಿಸಿದ್ದಾರೆ. ಆದರೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರ ಇದರ ಬಗ್ಗೆ ಗಮನಹರಿಸಿದೆಯೇ ಎಂಬುದು ನನಗೆ ಗೊತ್ತಿಲ್ಲ. ಸರ್ಕಾರ ಏನು ಮಲಗಿಕೊಂಡಿದೆಯಾ? ಈ ಇಲಾಖೆಯ ಅಧಿಕಾರಿಗಳು ಕೆಲಸದ ಒತ್ತಡದಲ್ಲಿ ಸದನಕ್ಕೆ ಈ ರೀತಿಯ ಉತ್ತರ ಕೊಟ್ಟಿದ್ದಾರೆಯೇ ಎಂಬುದು ನನಗೆ ಗೊತ್ತಿಲ್ಲ. ಇದೊಂದು ಹಗರಣ, ಇದನ್ನು ನಾನು ಹೇಳುತ್ತಿಲ್ಲ. ಇದು ಬೀದರ್ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ಹೇಳಿಕೆಯಾಗಿದೆ. ಬೀದರ್, ಬಸವ ಕಲ್ಯಾಣ, ಹುಮ್ನಾಬಾದ್, ಚಿಟಗುಪ್ಪಾ, ಮನ್ನಳ್ಳಿ ಸಂಕಪೂರ್ ಸೇರಿದಂತೆ, ಜಿಲ್ಲೆಯ ವಿವಿಧಡೆ ಖಚಿತ ಮಾಹಿತಿಯ ಮೇರೆಗೆ ದಾಳಿ ನಡೆಸಿ, ಅಕ್ರಮವಾಗಿ ಸಂಗ್ರಹಿಸಿದ ಲಕ್ಷಾಂತರ ಮೌಲ್ಯದ ಅಕ್ಕಿ, ಗೋಧಿ, ಹಾಲಿನ ಪುಡಿ, ತೊಗರಿಬೇಳೆಯನ್ನು ಜಪ್ತಿ ಮಾಡಲಾಗಿದೆ. ವಾಹನಗಳನ್ನು ಸಹ ಬಂಧಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿಯವರು ಹೇಳಿರುವುದು.

**ಸಭಾಪತಿಯವರು:–** ಮಾನ್ಯ ರಘುನಾಥ ರಾವ್ ಮಲ್ಕಾಪೂರೆಯವರೇ, ಪತ್ರಿಕೆಯಲ್ಲಿರುವುದನ್ನು ಓದಬೇಡಿ, ನಿಮ್ಮ ಉಪ ಪ್ರಶ್ನೆ ಕೇಳಿ.

**ಶ್ರೀ ಬಿ.ಜೆಡ್. ಜಮೀರ್ ಅಹ್ಮದ್ ಖಾನ್:–** ಮಾನ್ಯ ಸಭಾಪತಿಯವರೇ, ಯಾವ ದಿನಾಂಕದ ಪತ್ರಿಕೆಯಲ್ಲಿ ವರದಿ ಬಂದಿದೆ ಎಂಬ ಬಗ್ಗೆ ತಿಳಿಸಲಿ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–**ಮಾನ್ಯ ಸಭಾಪತಿಯವರೇ, ದಿನಾಂಕ: 24.10.2018 ರ ಪತ್ರಿಕೆಯಲ್ಲಿ ಬಂದಿದೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರ ಕೊಡಿ.

**ಶ್ರೀ ಬಿ.ಜೆಡ್.ಜಮೀರ್ ಅಹ್ಮದ್ ಖಾನ್:–** ಮಾನ್ಯ ಸಭಾಪತಿಯವರೆ, ಮಾನ್ಯ ಮಲ್ಕಾಪೂರೆಯವರಿಗೆ ಗೊತ್ತಿರುವ ಹಾಗೆ ನಮ್ಮ ರಾಜ್ಯದಲ್ಲಿ ಸುಮಾರು ಇಪ್ಪತ್ತು ಸಾವಿರ ನ್ಯಾಯಬೆಲೆ ಅಂಗಡಿಗಳು ಇವೆ. ಒಂದೂವರೆ ವರ್ಷದ ಹಿಂದೆ ಬಯೋಮೆಟ್ರಿಕ್ ಸಿಸ್ಟಂ ಅನ್ನು ಮಾಡಿದ್ದೇವೆ. ಬಯೋಮೆಟ್ರಿಕ್ ಮಾಡುವುದಕ್ಕಿಂತ ಮುಂಚೆ ಸ್ವಲ್ಪ ಅವ್ಯವಹಾರಗಳಾಗಿವೆ. ಗ್ರಾಹಕರು B.P.L. (Below Poverty Line) card holders ration ಅನ್ನು ತೆಗೆದುಕೊಳ್ಳುತ್ತಿರಲಿಲ್ಲ. ನ್ಯಾಯ ಬೆಲೆ ಅಂಗಡಿಯವರು ration ಅನ್ನು ತೆಗೆದುಕೊಂಡಿದ್ದಾರೆಂದು ಲೆಕ್ಕವನ್ನು ತೋರಿಸುತ್ತಿದ್ದರು. RTI (Right to Information) ಅಡಿಯಲ್ಲಿ ದಾಖಲೆಯನ್ನು ಸರ್ಕಾರದ ವತಿಯಿಂದಲೂ ತೆಗೆದುಕೊಳ್ಳಬಹುದು. ಬಯೋಮೆಟ್ರಿಕ್ ಬಂದಾದ ಮೇಲೆ ಅದು misuse ಆಗಿದ್ದು ಸಹ ಇದೆ. ಉದಾಹರಣೆಗೆ, ನಮ್ಮ ರಾಜ್ಯದಲ್ಲಿ ಸುಮಾರು 20,033 ನ್ಯಾಯಬೆಲೆ ಅಂಗಡಿಗಳಿವೆ. ಅದರಲ್ಲಿ ಸುಮಾರು 19,012 ನ್ಯಾಯಬೆಲೆ ಅಂಗಡಿಗಳಿಗೆ thumb impression ಕೊಡುವ ಬಯೋಮೆಟ್ರಿಕ್ ಸಿಸ್ಟಂನ್ನು ಹಾಕಿದ್ದೇವೆ. ಆದರೆ ಸುಮಾರು ಒಂದು ಸಾವಿರ ಬಯೋಮೆಟ್ರಿಕ್ ಸಿಸ್ಟಂನ್ನು ನ್ಯಾಯಬೆಲೆ ಅಂಗಡಿಗಳಿಗೆ ಹಾಕುವುದಕ್ಕೆ ಆಗಿಲ್ಲ. ಆದಕ್ಕೆ ಕಾರಣವೇನೆಂದರೆ, ಗುಡ್ಡಗಾಡು

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರದೇಶದಲ್ಲಿ ಬಹಳ ತೊಂದರೆ ಇದೆ. ಉದಾಹರಣೆಗೆ, ಮಂಗಳೂರು ಸಹ ಗುಡ್ಡಗಾಡು ಪ್ರದೇಶವಾಗಿರುವುದರಿಂದ, ಅದು ಲೋಡ್ ತೆಗೆದುಕೊಳ್ಳುವುದಿಲ್ಲ. ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗದಲ್ಲಿಯೂ ಸಹ ಇದೇ ರೀತಿಯ ಸಮಸ್ಯೆ ಇದೆ. ಎಲ್ಲೆಲ್ಲಿ ಬಯೋಮೆಟ್ರಿಕ್ ಸಿಸ್ಟಂನ್ನು ಫಿಟ್ ಮಾಡಿಲ್ಲ. ಅಲ್ಲಿ ಶೇಕಡಾ 90 ರಷ್ಟು ವಿತರಣೆಯಾಗಿದೆ ಎಂದು ತೋರಿಸುತ್ತಾರೆ. ಎಲ್ಲಿ ಬಯೋಮೆಟ್ರಿಕ್ ಇದೆಯೋ, ಅಲ್ಲಿ ಸರ್ಕಾರಕ್ಕೆ ಶೇಕಡಾ 25 ರಿಂದ 30 ರಷ್ಟು ಉಳಿತಾಯವಾಗುತ್ತದೆ. ಈ ವರ್ಷ ಸರ್ಕಾರಕ್ಕೆ ಸುಮಾರು ಐದುನೂರ ಎಂಭತ್ತು ಕೋಟಿ ರೂಪಾಯಿಗಳು ಉಳಿತಾಯ ಆಗಿದೆ. ಅದರ ಜೊತೆಗೆ ಪಡಿತರ ಚೀಟಿಗೆ ಆಧಾರ್ ಲಿಂಕ್ ಆದಮೇಲೆ bogus ಇಲ್ಲವೇ ಇಲ್ಲ. ನಮ್ಮ ಇಲಾಖೆಯಿಂದಲೇ ಅನ್ನ ಭಾಗ್ಯ ಯೋಜನೆಯನ್ನು ಕೊಡುತ್ತಾ ಇಲ್ಲ. ಇದನ್ನು ಬೇರೆ ಬೇರೆ ಇಲಾಖೆಯಿಂದಲೂ ಕೊಡುತ್ತಾರೆ. Mid-day Meals (MDM) Scheme, ಅಂಗನವಾಡಿ, Welfare institutions ನಲ್ಲಿ ಕೊಡುತ್ತಾರೆ. ಮಾನ್ಯ ಸದಸ್ಯರು ಹೇಳಿದನ್ನು ಯಾವ ಇಲಾಖೆಯ ಪಡಿತರ ಆಹಾರ ಪದಾರ್ಥಗಳನ್ನು ಜಪ್ತಿ ಮಾಡಿದ್ದಾರೆಂದು ಗೊತ್ತಾಗಬೇಕು. ಈ ಅಕ್ಕಿಯನ್ನು ಎಲ್ಲೋ ಹಿಡಿದರೆ, ಅದು ನಮ್ಮ ಇಲಾಖೆ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸಭಾಪತಿಯವರೆ, ಅದು ಯಾವ ಇಲಾಖೆಯದು ಎಂದು ಹೇಳಲಿ. ನಮ್ಮ ಇಲಾಖೆಯಿಂದ ಏನಾದರೂ ತಪ್ಪಾಗಿದ್ದರೆ, ಅದನ್ನು ಸರಿಪಡಿಸಿಕೊಡುತ್ತೇವೆ. ನಮ್ಮ ಇಲಾಖೆಯಿಂದ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಜಾರಿಗೊಳಿಸಿದ ಮೇಲೆ ಯಾವ ಕಾರಣಕ್ಕೂ misuse ಆಗುತ್ತಾ ಇಲ್ಲ. ಈಗ ಬಿಪಿಎಲ್ ಕಾರ್ಡ್ ಇದ್ದಂತಹವರು ಬಂದು thumb impression ಕೊಟ್ಟು ಅಕ್ಕಿಯನ್ನು ತೆಗೆದುಕೊಂಡು ಹೋಗಬೇಕು, without thumb impression ಅವರುಗಳಿಗೆ ಕೊಡುವುದಕ್ಕೆ ಬರುವುದಿಲ್ಲ. ನಾನು ಮುಂಚೆಯೇ misuse ಆಗುತ್ತಿಲ್ಲ ಎಂದು ಹೇಳಿದ್ದೇನೆ. ಅವರು ಅಕ್ಕಿಯನ್ನು ತೆಗೆದುಕೊಂಡು ಹೊರಗಡೆ ಮಾರುತ್ತಾರೆಂಬುದರ ಬಗ್ಗೆ ನನಗೆ ಮಾಹಿತಿ ಬಂದಿದೆ. ಇದರ ಬಗ್ಗೆ ಗಮನಹರಿಸಲು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಸೂಕ್ತವಾದ ಕ್ರಮಗಳನ್ನು ಕೈಗೊಂಡು, ಅಂತಹ ಬಿಪಿಎಲ್ ಕಾರ್ಡ್‌ನ್ನೇ ರದ್ದು ಮಾಡಬೇಕೆಂದು ಹೇಳಿದ್ದೇನೆ. ಅಂತಹವರು ಆ ರೀತಿ ಮಾಡುತ್ತಿದ್ದಾರೆ. ಒಂದು ಕುಟುಂಬದಲ್ಲಿ ಐದು ಜನ ಸದಸ್ಯರು ಇರುತ್ತಾರೆ. ಒಬ್ಬರಿಗೆ ಏಳು ಕೆಜಿ ಅಕ್ಕಿ ಎಂದರೆ, ಐದು ಜನ ಸದಸ್ಯರಿಗೆ ಒಟ್ಟು ಮೂವತ್ತೈದು ಕೆಜಿ ಅಕ್ಕಿ ಆಯಿತು. ಆ ಮೂವತ್ತೈದು ಕೆಜಿ ಅಕ್ಕಿಯನ್ನು ತೆಗೆದುಕೊಂಡಾದ ಮೇಲೆ, ಬಹಳ ಜನರು ಹೊರಗಡೆ ಅಕ್ಕಿಯನ್ನು ಮಾರಾಟ ಮಾಡಿ ಬಿಡುತ್ತಾರೆ. ನಾನು ಇಲ್ಲ ಎಂದು ಹೇಳುತ್ತಿಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ದಯವಿಟ್ಟು, ಒಬ್ಬ squad ನ್ನು ಹಾಕಿ, ಅಂತಹವರು ಯಾರಾದರೂ ಅಕ್ಕಿಯನ್ನು ಮಾರಿದರೆ, ಆ ಬಿಪಿಎಲ್ ಕಾರ್ಡ್‌ನ್ನೇ ರದ್ದು ಮಾಡಿ ಎಂದು ಹೇಳಿದ್ದೇನೆ. ಮಾನ್ಯ ಸದಸ್ಯರು ಇದರ ಬಗ್ಗೆ ಹೇಳುವುದೇ ಬೇಕಾಗಿಲ್ಲ. ನಮ್ಮ ರಾಜ್ಯದ ಎಲ್ಲಾ ಕಡೆಗಳಲ್ಲಿ 'ಆಹಾರ ಸರ್ವರ್' ಎಂದು ಹೇಳಿ ಫಿಕ್ಸ್ ಮಾಡಿದ್ದೇವೆ. ಸಾರ್ವಜನಿಕರು ತಮ್ಮ ಮೊಬೈಲ್‌ನಿಂದಲೇ ನೋಡಿಕೊಳ್ಳಬಹುದು. ಎಷ್ಟು ನ್ಯಾಯಬೆಲೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಂಗಡಿಗಳಲ್ಲಿ ಎಷ್ಟು ರೇಷನ್ ವಿತರಣೆಯಾಗಿದೆ, ಎಷ್ಟು ಉಳಿತಾಯವಾಗಿದೆ ಹಾಗೂ ಯಾವ depot ನಲ್ಲಿ ಎಷ್ಟು stock ಲಭ್ಯವಿದೆ ಎಂಬ ಬಗ್ಗೆ ತಮ್ಮ ಮೊಬೈಲ್‌ಗಳಲ್ಲಿಯೇ ನೋಡಿಕೊಳ್ಳಬಹುದು.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೆ, ನಾನು ಕೇಳಿರುವ ಪ್ರಶ್ನೆ ಏನೆಂದರೆ, ಇಂತಹ ಊರಿನಲ್ಲಿ ಇಂತಹ ಸಮಸ್ಯೆಯಾಗಿದೆ ಎಂದು ಹೇಳುತ್ತಿದ್ದೇನೆ. ಮಾನ್ಯ ಸಚಿವರು ಇಡೀ ಲೋಕವನ್ನೇ ಸುತ್ತಾಡಿಕೊಂಡು ಬಂದಿದ್ದಾರೆ. ಬಯೋಮೆಟ್ರಿಕ್ ಮಾಡಿರುವ ಬಗ್ಗೆ ಬಹಳ ಸಂತೋಷ. ಮಾನ್ಯ ಸಚಿವರು ಬರುವುದಕ್ಕಿಂತ ಮೊದಲೇ ಈ ಬಯೋಮೆಟ್ರಿಕ್ ಆಗಿದೆ. ಇದನ್ನು ಈ ಹಿಂದೆ ಸಚಿವರಾಗಿದ್ದ ಮಾನ್ಯ ಯು.ಟಿ.ಖಾದರ್‌ರವರು ಮತ್ತು ಅಧಿಕಾರಿಯಾದ ಶ್ರೀ ಹರ್ಷಗುಪ್ತರವರು ಮಾಡಿದ್ದಾರೆ. ಇದು ಬಹಳ ಸಂತೋಷ. ತಾವು ಪ್ರಯತ್ನ ಮಾಡುತ್ತಿಲ್ಲವೆಂದು ಹೇಳುತ್ತಿಲ್ಲ. ನಾನು ಹೇಳುತ್ತಿರುವುದೇನೆಂದರೆ, ಇದು ಅಕ್ಟೋಬರ್ ತಿಂಗಳು ಇಪ್ಪತ್ನಾಲ್ಕನೆಯ ತಾರೀಖಿನಂದು ನಡೆದಂತಹ ಘಟನೆ. (ಗೊಂದಲ) ನಾನು ತಮ್ಮ ಮೇಲೆ ಆರೋಪ ಮಾಡುತ್ತಿಲ್ಲ. Hon'ble Minister first listen to me sportively and then solve this problem. ನನ್ನ ಪ್ರಶ್ನೆ ಏನೆಂದರೆ, ಕಳವಿನ ಮಾಲನ್ನು ಬೀದರ್ ಜಿಲ್ಲೆಯಲ್ಲಿ ಹಿಡಿದಿದ್ದಾರೆ. ಅಲ್ಲಿರುವ ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಯವರ ಹೇಳಿಕೆ ಇದೆ. ಲಕ್ಷಾಂತರ ರೂಪಾಯಿಗಳ ಆಹಾರ ಧಾನ್ಯವನ್ನು ವಶಪಡಿಸಿಕೊಂಡಿದ್ದೇವೆ. ಇದು ದಿನಾಂಕ:24–10–2018ರಲ್ಲಿ ನಡೆದಂತಹ ಘಟನೆಯಾಗಿದೆ. ಆದರೆ ಇವತ್ತಿನವರೆಗೂ ಯಾರ ಮೇಲೆಯೂ case ದಾಖಲಿಸಿ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಪೊಲೀಸ್‌ನವರು ಕ್ರಮ ಕೈಗೊಳ್ಳಬೇಕಾದರೆ, ಆಹಾರ ಇಲಾಖೆಯಿಂದಲೇ ಹೋಗಿ, ಅದನ್ನು ಪರಿಶೀಲನೆ ಮಾಡಬೇಕು. ಆಹಾರ ಇಲಾಖೆಯಿಂದ inspection ಆಗುವವರೆಗೆ, ಪೊಲೀಸ್ ಇಲಾಖೆಯವರು ಯಾವುದೇ ಕ್ರಮ ಕೈಗೊಳ್ಳುವುದಕ್ಕೆ ಬರುವುದಿಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ನಿಮ್ಮ ನಿರ್ದಿಷ್ಟವಾದ ಪ್ರಶ್ನೆ ಏನಿದೆ?

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೆ, ಇದು ಎರಡು ತಿಂಗಳಾಗಿದೆ. ಒಂದು racket ಆಗಿದೆ. ಇದರ ಬಗ್ಗೆ ವಿಚಾರ ಮಾಡಿ, ಸದನ ಸಮಿತಿ ರಚನೆ ಮಾಡುತ್ತೀರಾ ನೋಡಿ.

**(ಗೊಂದಲ)**

**ಶ್ರೀ ಬಿ.ಜೆಡ್. ಜಮೀರ್ ಅಹ್ಮದ್ ಖಾನ್:–** ಮಾನ್ಯ ರಘುನಾಥ ರಾವ್ ಮಲ್ಕಾಪೂರೆಯವರೆ, ತಮ್ಮ ಪ್ರಶ್ನೆ ನನಗೆ ಅರ್ಥವಾಗಿದೆ. ಒಂದು ನಿಮಿಷ ನಾನೇ ಹೇಳುತ್ತೇನೆ. ತಾವು ಹೇಳಿರುವುದೇನೆಂದರೆ, ...

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೆ, ...

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸದಸ್ಯರು ಹೇಳಿರುವಂತಹ ಉಪ ಪ್ರಶ್ನೆಯನ್ನು ಸೇರಿಸಿಕೊಂಡು, ಮಾನ್ಯ ಸಚಿವರೇ, ಉತ್ತರ ಕೊಡಿ.

**(ಗೊಂದಲ)**

**ಶ್ರೀ ಬಿ.ಜೆಡ್.ಜಮೀರ್ ಅಹ್ಮದ್ ಖಾನ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಒಂದೇ ಜಿಲ್ಲೆಯಲ್ಲ. ಜಿಲ್ಲೆಯಲ್ಲಿ ಒಟ್ಟು 81 ಪ್ರಕರಣಗಳಲ್ಲಿ F.I.R.(First Information Report) ಹಾಕಿ, ಕೇಸ್ ಮಾಡಿದ್ದೇವೆ. ಒಂದೆರಡು ಪ್ರಕರಣವಲ್ಲ ಒಟ್ಟು 81 ಪ್ರಕರಣ. ಮಾನ್ಯ ಸದಸ್ಯರು ಹೇಳಿದ ಹಾಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ನಾನು ಕುಳಿತುಕೊಂಡು ಮಾತನಾಡಿ, ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

**(ಗೊಂದಲ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೆ, ಒಂದು ಡೈರಿ ಸಿಕ್ಕಿದೆ. ಅದು ಪೊಲೀಸ್ ವರಿಷ್ಠಾಧಿಕಾರಿಗಳ ಹತ್ತಿರ ಹೋಗಿ, ಜಿಲ್ಲಾಡಳಿತದ ವತಿಯಿಂದ...

**ಸಭಾಪತಿಯವರು:-** ಮಾನ್ಯ ಸಚಿವರು ಅದನ್ನು ನೋಡಿ, ಪರಿಶೀಲಿಸುತ್ತೇವೆಂದು ಹೇಳಿದ್ದಾರೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೆ, ಒಂದು ಡೈರಿ ಸಿಕ್ಕಿದೆ. ಅದರಲ್ಲಿ ತಿಂಗಳಲ್ಲಿ ಯಾರ್ಯಾರು ಎಷ್ಟು ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ರಾಜಕಾರಣಿಗಳು ಎಷ್ಟೆಷ್ಟು ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ. ಇದರಲ್ಲಿ ರಾಜಕಾರಣಿಗಳ ಹೆಸರು ಇದೆ ಎಂದು ಹೇಳಿದ್ದಾರೆ. ಅದು ಬಹಿರಂಗವಾಗಬೇಕು ಮತ್ತು inquest ಆಗಬೇಕು.

**ಶ್ರೀ ಬಿ.ಜೆಡ್.ಜಮೀರ್ ಅಹ್ಮದ್ ಖಾನ್:-** ಅದನ್ನು ಪರಿಶೀಲನೆ ಮಾಡುತ್ತೇನೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿರುವ ಘಟನೆಯ ಬಗ್ಗೆ ಸರ್ಕಾರದಿಂದ ತನಿಖೆ ಮಾಡಿಸಲಾಗುತ್ತದೆಯೇ ಎಂಬುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕಾಗುತ್ತದೆ.

**(ಗೊಂದಲ)**

**ಶ್ರೀ ಬಿ.ಜೆಡ್.ಜಮೀರ್ ಅಹ್ಮದ್ ಖಾನ್:-** ಅದರಲ್ಲಿ ಆಗಿದ್ದರೆ, ನಾನು ತನಿಖೆ ಮಾಡುತ್ತೇನೆ.



" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಶ್ರೀ ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಅಲ್ಲಿ ಘಟನೆ ನಡೆದಿರುವ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ಅಧಿಕಾರಿಗಳು ಅದನ್ನು ಒಪ್ಪಿಕೊಳ್ಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೃಷ್ಣಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಮುಖ್ಯಮಂತ್ರಿಯವರ ಹತ್ತಿರ ಮಾತನಾಡಿ, ಮುಂದಿನ ಕ್ರಮ ಕೈಗೊಳ್ಳುವುದಕ್ಕೆ ತೀರ್ಮಾನ ಮಾಡುತ್ತಾರೆ.

**ಚುಕ್ಕೆ ಗುರುತಿನ ಪ್ರಶ್ನೆ 652**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ. ವೈ.ಎ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಜಾಗರೂಕತೆಯಿಂದ ಉತ್ತರವನ್ನು ಕೊಟ್ಟಿದ್ದಾರೆ. ನನ್ನ ನೇರವಾದ ಪ್ರಶ್ನೆ ಎಂದರೆ, ಅಲ್ಪಸಂಖ್ಯಾತರ ಇಲಾಖೆ ಅಡಿಯಲ್ಲಿ ಅಲ್ಪಸಂಖ್ಯಾತರ ಆಯೋಗ ಕೆಲಸ ಮಾಡುತ್ತದೆಯೆ? ವಕ್ಫ್ ಮಂಡಳಿಗೂ ಮತ್ತು ನಿಮ್ಮ ಇಲಾಖೆಗೂ ಸಂಬಂಧ ಇದೆಯೋ ಅಥವಾ ಇಲ್ಲವೋ ಎಂಬ ಪ್ರಶ್ನೆಗೆ ಉತ್ತರ ಕೊಟ್ಟಿರುವುದನ್ನು ನೋಡಿದರೆ ನಿಮ್ಮ ಇಲಾಖೆಗೂ ಮತ್ತು ಅದಕ್ಕೂ ಸಂಬಂಧವಿಲ್ಲವೇನೋ ಎನ್ನುವ ಭಾವನೆ ಬರುತ್ತಿದೆ. ಆದ್ದರಿಂದ ತಾವು ಕೊಟ್ಟಿರುವಂತಹ ಉತ್ತರ ನನಗೆ ತೃಪ್ತಿಯಾಗಿಲ್ಲ. ನಾನು ಪ್ರಶ್ನೆಯನ್ನು ತಮಗೆ ನೇರವಾಗಿ ಕೇಳುತ್ತಿದ್ದೇನೆ. *'Anwar Manipaddy Report'* ಅನ್ನು ಯಾವಾಗ ಈ ಸದನದಲ್ಲಿ ಮಂಡಿಸುತ್ತೀರಾ. ಆ ಸಂಬಂಧವಾಗಿ ಮಾನ್ಯ ಉಚ್ಚ ನ್ಯಾಯಾಲಯ ಮೊನ್ನೆ ಆದೇಶ ಕೊಟ್ಟಿದೆ. ಆ ಆದೇಶವನ್ನು ಯಾವಾಗ ಪಾಲನೆ ಮಾಡುತ್ತೀರಿ? ಯಾವ ನಿಗದಿತ ಸಮಯದೊಳಗೆ ಅದನ್ನು ಮಂಡನೆ ಮಾಡಿ, ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಿ ಎಂಬ ಪ್ರಶ್ನೆಯನ್ನು ನೇರವಾಗಿ ಕೇಳುತ್ತೇನೆ.

**ಶ್ರೀ ಬಿ.ಜೆಡ್.ಜಮೀರ್ ಅಹ್ಮದ್ ಖಾನ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು *Anwar Manipaddy Report* ಕುರಿತಾಗಿ ಕೇಳುತ್ತಿರುವ ಪ್ರಶ್ನೆಯನ್ನು ಎಲ್ಲಿಯೂ ಸಹ mention ಮಾಡಿಲ್ಲ. ಮಾನ್ಯ ನಾರಾಯಣ ಸ್ವಾಮಿಯವರೇ, ತಾವು ಮಾತನಾಡಿದ್ದಕ್ಕೆ ನಾನು ಮಾತನಾಡಿಲ್ಲ. ನಾನು ಮಾತನಾಡಲು ತಾವು ಅವಕಾಶ ಮಾಡಿಕೊಡಿ. ತಾವು ಕೇಳಿರುವ *Anwar Manipaddy Report* ಬಗ್ಗೆ ಎಲ್ಲಿಯಾದರು mention ಮಾಡಿದ್ದೀರಾ? ನನಗೆ ಕಮಿಟಿ ರಚನೆ ಬಗ್ಗೆ ಪ್ರಶ್ನೆ ಮಾಡಿದ್ದೀರಿ, ನಾವು ಯಾವುದೇ ಕಮಿಟಿಯನ್ನು ರಚನೆ ಮಾಡಿಲ್ಲ.

**(ಮುಂದುವರೆದಿದೆ...)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(459) 14.12.2018 12.00 ಟಿಸಿಹೆಚ್/ಕೆಎಸ್

**ಡಾ|| ವೈ.ಎ.ನಾರಾಯಣ ಸ್ವಾಮಿ(ಮುಂದುವರೆದುದು...)**

ಅಲ್ಪಸಂಖ್ಯಾತರ ಏಳಿಗೆಗಾಗಿ ಇರುವ ವಕ್ಫ್ ಮಂಡಳಿಯಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ವರದಿ ಸಲ್ಲಿಸಲು ನೇಮಿಸಿದ್ದ ಸಮಿತಿ ಯಾವುದು ಎಂದು ಪ್ರಶ್ನೆ ಕೇಳಿದ್ದೆನು. ಹಾಗಾದರೆ, ಸರ್ಕಾರದವರು ಇನ್ಯಾವ ಸಮಿತಿಯನ್ನು ರಚನೆ ಮಾಡಿದ್ದಾರೆ.

**ಶ್ರೀ ಬಿ.ಜೆಡ್.ಜಮೀರ್ ಅಹಮದ್ ಖಾನ್:-** ಮಾನ್ಯ ಸಭಾಪತಿಯವರೇ, ನಾವು ಯಾವುದೇ ಸಮಿತಿಯನ್ನು ರಚನೆ ಮಾಡಿಲ್ಲ.

**ಡಾ|| ವೈ.ಎ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೆ, ಅವರು ಯಾವುದೇ ಆಯೋಗವನ್ನು ರಚನೆ ಮಾಡಿಲ್ಲವೆ?

**ಶ್ರೀ ಬಿ.ಜೆಡ್.ಜಮೀರ್ ಅಹಮದ್ ಖಾನ್:-** ಮಾನ್ಯ ಸಭಾಪತಿಯವರೆ, ಆಯೋಗವೇ ಬೇರೆ, ಸಮಿತಿ ರಚನೆ ಮಾಡುವುದೇ ಬೇರೆ.

**ಸಭಾಪತಿಯವರು:-** ಅದರ ಬಗ್ಗೆ ನಿರ್ದಿಷ್ಟವಾಗಿ ಹೇಳಬೇಕಲ್ಲವೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಶಬ್ದಗಳ ಉಚ್ಛಾರಣೆ ಬೇರೆ ಇರಬಹುದು. ಆದರೆ ವಾಸ್ತವಿಕ ಸ್ಥಿತಿ ಏನೆಂದರೆ, ಇಲ್ಲಿಯವರೆಗೂ ತಗಾದೆ ಇರುವಂಥದ್ದು, ಅನ್ವರ್ ಮಣಿಪ್ಪಾಡಿ ವರದಿಯನ್ನು ಸರ್ಕಾರದವರು ಯಾವಾಗ ಮಂಡಿಸುತ್ತಾರೆ ಎಂಬುದನ್ನು ತಿಳಿಸಬೇಕು. ನಿನ್ನೆ ದಿವಸ ಮಾನ್ಯ ಹೈಕೋರ್ಟ್ ಕೂಡ ಇದೇ ಸದನದಲ್ಲಿ ಆ ವರದಿಯನ್ನು ಮಂಡಿಸಬೇಕೆಂದು ಆದೇಶ ನೀಡಿರುವ ವಿಚಾರವಿತ್ತು. ನಾವು ಇದನ್ನು ಸುಮ್ಮನೆ ಹೇಳುತ್ತಿಲ್ಲ, ಇದರಲ್ಲಿ ಯಾವುದೇ ರಾಜಕೀಯ ಕಾರಣವೂ ಇಲ್ಲ. ಮಾನ್ಯ ವಿರೋಧ ಪಕ್ಷಕ್ಕೂ ಕೂಡ ಜವಾಬ್ದಾರಿ ಇದೆ. ವಕ್ಫ್ ಮಂಡಳಿಗೆ ಸೇರಿದ 54 ಸಾವಿರ ಎಕರೆ ಭೂಮಿಯಲ್ಲಿ 27 ಸಾವಿರ ಎಕರೆ ಜಮೀನಿಗೆ ಯಾರೋ ಅಕ್ರಮವಾಗಿ ಬೇಲಿ ನಿರ್ಮಿಸಿಕೊಂಡು ಎರಡು ಲಕ್ಷದ ಮೂವತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಭೂಮಿಯನ್ನು ಅಪಹರಣ ಮಾಡಿದ್ದಾರೆ. ಆ ಹಿನ್ನೆಲೆಯಲ್ಲಿ, ಇದನ್ನು ಸದನದಲ್ಲಿ ಮಂಡನೆ ಮಾಡುವಂತೆ ಕೋರ್ಟ್ ನಿರ್ದೇಶನವನ್ನು ಕೊಟ್ಟಿದೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಉತ್ತರ ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಮೊನ್ನೆ ದಿವಸ ಮಾನ್ಯ ಸಚಿವರು ಮಾತನಾಡುವಾಗ ಏನು ಹೇಳಿದರೆಂದರೆ, ಅಕ್ರಮವೆಸಗಿದವರನ್ನು ನಾವು ಯಾರನ್ನು ಬಿಡುವುದಿಲ್ಲ, ನಮ್ಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಂದೆಯಾದರೂ ಬಿಡುವುದಿಲ್ಲವೆಂದು ಅದನ್ನು CBI (Central Bureau of Investigation) ಗೆ ವಹಿಸಲಾಗುವುದೆಂದು ಹೇಳಿದ್ದರು. ನಾನು ಈಗ ಅದ್ಯಾವುದನ್ನೂ ನೆನಪು ಮಾಡುವುದಿಲ್ಲ. ಈಗ ಇರುವಂತಹ ಸ್ಥಿತಿಯ ಆಧಾರದಲ್ಲಿ ಗೌರವಾನ್ವಿತ ಹೈಕೋರ್ಟ್ ತೀರ್ಪು ಕೊಟ್ಟ ನಂತರ ಅದನ್ನು ಪಾಲಿಸಬೇಕು. ಸರ್ಕಾರಕ್ಕೆ ಒಂದು ಗೌರವ ಇರುವುದು ಬೇಡವೇ? ಕಾನೂನು ನ್ಯಾಯ ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು ಇದ್ದಾರೆ, ನಮ್ಮ ಸರ್ಕಾರ ಪಾರದರ್ಶಕವಾಗಿದೆ, ಯಾರನ್ನು ರಕ್ಷಣೆ ಮಾಡುವುದಿಲ್ಲ ಎನ್ನುವಂತಹ ಭಾವನೆಗಳು ಸರ್ಕಾರದವರಿಗಿದ್ದಲ್ಲಿ ಈಗಾಗಲೇ ಮಾನ್ಯ ಹೈಕೋರ್ಟ್ ಆದೇಶವನ್ನು ಕೊಟ್ಟಿರುವ ಹಿನ್ನೆಲೆಯಲ್ಲಿ ಮಾಡುತ್ತಾರೆಯೊ, ಈಗಲೇ ಆ ವರದಿಯನ್ನು ಮಂಡಿಸುತ್ತಾರೆಯೊ ಅಥವಾ ನಾಳೆ ಮಂಡಿಸುತ್ತಾರೆಯೊ ಅಥವಾ ಯಾವಾಗ ಮಂಡಿಸುತ್ತಾರೆ ಎಂದು ನಮಗೆ ಸ್ಪಷ್ಟವಾಗಿ ತಿಳಿಸಬೇಕು.

**ಸಭಾಪತಿಯವರು:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ, ಪ್ರಶ್ನೋತ್ತರ ಅವಧಿಯಲ್ಲಿ ಆ ವಿಚಾರ ಬರುವುದಿಲ್ಲ. ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆಯೋ ಅದಕ್ಕೆ ಮಾತ್ರ ಉತ್ತರ ಕೇಳಿ.

**ಶ್ರೀ ಬಿ.ಜೆಡ್.ಜಮೀರ್ ಅಹಮದ್ ಖಾನ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಯೇ ಬೇರೆ, ಸದನದಲ್ಲಿ ಚರ್ಚೆ ಆಗುತ್ತಿರುವುದೇ ಬೇರೆ. ಆಯಿತು, ಅದಕ್ಕೂ ನಾನು ಉತ್ತರ ಕೊಡುತ್ತೇನೆ. (ಗೊಂದಲ) ಮಾನ್ಯ ಸದಸ್ಯರಿಗೆ ಉತ್ತರ ಬೇಕಿಲ್ಲ, ಗಲಾಟೆ ಬೇಕಾಗಿದೆ ಎನಿಸುತ್ತಿದೆ. ಅವರು ಅನ್ವರ್ ಮಣಿಪ್ಪಾಡಿ ವರದಿ ಬಗ್ಗೆ ಎಲ್ಲೂ ಪ್ರಶ್ನೆ ಕೇಳಿಲ್ಲ, ಆದರೂ ಕೂಡ ಕೇಳುತ್ತಿದ್ದಾರೆ. ನಾನು ಅದರ ಬಗ್ಗೆ ತಿಳಿಸಲು ಸಿದ್ಧನಿದ್ದೇನೆ. 12ನೇ ತಾರೀಖಿನಂದು ಗೌರವಾನ್ವಿತ ಹೈಕೋರ್ಟ್‌ನಲ್ಲಿ ವಿಡಿಯೋ ಕಾನ್ಫರೆನ್ಸ್ ಮುಖಾಂತರ ಅನ್ವರ್ ಮಣಿಪ್ಪಾಡಿ ವರದಿ ಬಗ್ಗೆ ಆದೇಶವಾಗಿದೆಯೆಂದು ನನಗೂ ಕೂಡ ಗೊತ್ತಾಯಿತು. ಆದರೆ, ಅದರ certified copy ನಮಗಿನ್ನೂ ತಲುಪಿಲ್ಲ. ವಿಡಿಯೋ ಕಾನ್ಫರೆನ್ಸ್‌ನ ಮೂಲಕ ಆ ಆದೇಶ ಆಗಿರುವುದರಿಂದ, ನಮಗೆ ತಲುಪಲು ಕನಿಷ್ಠಪಕ್ಷ ಒಂದು ವಾರ ಆಗುತ್ತದೆ. ಗೌರವಾನ್ವಿತ ಹೈಕೋರ್ಟ್ ಏನು ಆದೇಶ ಮಾಡಿದೆ ಎಂದು ಮಾನ್ಯ ಸದಸ್ಯರ ಬಳಿ ಮಾಹಿತಿ ಇದ್ದಲ್ಲಿ ಅದನ್ನು ನನಗೆ ಕೊಟ್ಟರೆ, ಅದಕ್ಕೆ ನಾನು ರಿಪ್ಲೈ ಮಾಡುತ್ತೇನೆ. ಈಗ ಆ ಆದೇಶದ ದೃಢೀಕೃತ ಪ್ರತಿ ನನ್ನ ಬಳಿ ಇರುವುದಿಲ್ಲ, ಅದನ್ನು ಅವರು ಕೊಡಲಿ.

(ಗೊಂದಲ)

**ಡಾ॥ ವೈ.ಎ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೆ, ಅವರದೇ ಸರ್ಕಾರ ಇದೆ, ಮಾನ್ಯ ಕಾನೂನು ಸಚಿವರು ಇದ್ದಾರೆ, ಸಿಐಜಿ ಅವರಿಂದ ಸದರಿ ಆದೇಶವನ್ನು ಅವರು ತರಿಸಿಕೊಳ್ಳಬಹುದಲ್ಲವೇ?

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಕೋರ್ಟ್‌ನಲ್ಲಿ ಆದೇಶ ಆಗಿದೆ. ಅಡ್ವೋಕೇಟ್ ಜನರಲ್‌ರವರಿಂದ ಆ ಆದೇಶದ ದೃಢೀಕೃತ ಪ್ರತಿಯನ್ನು ಅವರು ಪಡೆದುಕೊಳ್ಳಬಹುದು.

**ಶ್ರೀ ಬಿ.ಜೆಡ್.ಜಮೀರ್ ಅಹಮದ್ ಖಾನ್:–** ಡಾ॥ ವೈ.ಎ.ನಾರಾಯಣ ಸ್ವಾಮಿಯವರೆ, ಒಂದು ನಿಮಿಷ. ನಾನು ಮಾತನಾಡಲು ಬಿಡಿ. ಆನಂತರ ತಾವು ಮಾತನಾಡಬಹುದು. ತಾವು ಮಾತನಾಡಿದರೆ ನಾನು ಕುಳಿತುಕೊಳ್ಳುತ್ತೇನೆ.

**ಡಾ॥ ವೈ.ಎ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೆ, ಆಯಿತು ಅವರು ಮಾತನಾಡಲಿ.

**ಶ್ರೀ ಬಿ.ಜೆಡ್.ಜಮೀರ್ ಅಹಮದ್ ಖಾನ್:–** ಮಾನ್ಯ ಸಭಾಪತಿಯವರೆ, ಅನ್ವರ್ ಮಣಿಪಾಡಿ ವರದಿ ಬಗ್ಗೆ ತಮಗೆಲ್ಲಾ ಗೊತ್ತಿರುವಂತೆ ಕಳೆದ ಬಾರಿ ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಚಿವರೆ, ಆ ವರದಿಯ ಬಗ್ಗೆ ನಮ್ಮ ಮೇಲೆ ಏನಾದರೂ ಆಕ್ರೋಶ ಇದೆಯೇ?

**ಶ್ರೀ ಬಿ.ಜೆಡ್.ಜಮೀರ್ ಅಹಮದ್ ಖಾನ್:–** ಮಾನ್ಯ ಸಭಾಪತಿಯವರೆ, ಅವರ ಮೇಲೆ ಏನೂ ಆಕ್ರೋಶ ವ್ಯಕ್ತಪಡಿಸುವುದಿಲ್ಲ. ನಾನೇಕೆ, ಅವರ ಮೇಲೆ ಆಕ್ರೋಶ ವ್ಯಕ್ತಪಡಿಸಲಿ? ನೀವೆಲ್ಲಾ ನಮ್ಮ ಸ್ನೇಹಿತರು ಇದ್ದೀರಿ. ನೀವೆಲ್ಲರೂ ಮುಸಲ್ಮಾನರು ಹಾಗೂ ವಕ್ಫ್ ಆಸ್ತಿ ಬಗ್ಗೆ ಕಾಳಜಿ ಇಟ್ಟುಕೊಂಡಿದ್ದೀರಿ, ಟಿಪ್ಪು ಸುಲ್ತಾನ್ ಅವರ ಬಗ್ಗೆ ಕಾಳಜಿಯನ್ನು ಇಟ್ಟುಕೊಂಡಿದ್ದೀರಿ. ಬಿ.ಜೆ.ಪಿ. ಸದಸ್ಯರು ಅವರ ಬಗ್ಗೆ ಕಾಳಜಿ ವಹಿಸುತ್ತಿರುವುದಕ್ಕೆ ನನಗೆ ಬಹಳ ಖುಷಿ ಆಗುತ್ತದೆ. ನಾನು ಖುಷಿಯಲ್ಲಿ ಆಕ್ರೋಶ ವ್ಯಕ್ತಪಡಿಸುತ್ತಿದ್ದೇನೆ ಅಷ್ಟೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ನಮ್ಮ ಸದನವು ರಾಜಧಾನಿ ಎಕ್ಸ್‌ಪ್ರೆಸ್ ರೈಲ್‌ನ ರೀತಿ ನಡೆಯುತ್ತಿದೆ. ಪ್ಯಾಸೆಂಜರ್ ರೈಲಿನ ರೀತಿ ನಡೆಯುತ್ತಿಲ್ಲ.

**ಶ್ರೀ ಬಿ.ಜೆಡ್.ಜಮೀರ್ ಅಹಮದ್ ಖಾನ್:–** ಮಾನ್ಯ ಸಭಾಪತಿಯವರೆ, ಟಿಪ್ಪು ಸುಲ್ತಾನ್ ಜಯಂತಿ ಬಗ್ಗೆ ವಿಧಾನ ಪರಿಷತ್‌ನಲ್ಲಿ ಚರ್ಚೆ ಮಾಡಲಾಯಿತು ಎಂದು ನಿನ್ನೆಯ ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ.

(ಗೊಂದಲ)

**ಡಾ॥ ವೈ.ಎ ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೆ, ಅಲ್ಪಸಂಖ್ಯಾತರ ಏಳಿಗೆಗಾಗಿ ಇರುವ ವಕ್ಫ್ ಬೋರ್ಡ್ ಆಸ್ತಿಯಲ್ಲಿ 2 ಲಕ್ಷ 94 ಸಾವಿರ ಕೋಟಿ ರೂಪಾಯಿಗಳಷ್ಟು ಹಣದ ಹಗರಣವಾಗಿರುವ ಬಗ್ಗೆ ರಚಿಸಲಾಗಿರುವ ಸಮಿತಿಯ ವರದಿ ಕೊಡಿ ಎಂದರೆ ಮಾನ್ಯ ಸಚಿವರು ರಾಜಕೀಯದ ಬಗ್ಗೆ ಮಾತನಾಡುತ್ತಿದ್ದಾರೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಆ ವರದಿಯನ್ನು ಯಾವಾಗ ಮಂಡಿಸುತ್ತಾರೆ ಎಂಬುದನ್ನು ತಿಳಿಸಬೇಕು.

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ವರದಿಯನ್ನು ಯಾವಾಗ ಮಂಡಿಸುತ್ತಾರೆಂದು ಸರ್ಕಾರ ಸ್ಪಷ್ಟವಾಗಿ ತಿಳಿಸಬೇಕು.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಸರ್ಕಾರಕ್ಕೆ ಪ್ರಶ್ನೆ ಕೇಳಿ, ನೀವು ಅನ್ವರ್ ಮಣಿಪ್ಪಾಡಿ ಸಮಿತಿಯನ್ನು ರಚನೆ ಮಾಡಿದ್ದೀರಿ, ಅದರ ವರದಿ ಮಂಡಿಸಬೇಕೆಂದು ಕೇಳುತ್ತಿದ್ದಾರೆ. ಸರ್ಕಾರ ತನಿಖೆಗಾಗಿ ಯಾವುದೇ ಸಮಿತಿಯನ್ನು ನೇಮಕ ಮಾಡಿಲ್ಲ. ವಕ್ಫ್ ಮಂಡಳಿಯಲ್ಲಿ ಅವರದ್ದು ಒಂದು ವರದಿ ಇದೆ. ಅದರ ಬಗ್ಗೆ ಈ ಸದನದಲ್ಲಿಯೂ ಸಾಕಷ್ಟು ಚರ್ಚೆ ಆಗಿದೆ. ಅದಕ್ಕೆ ಉತ್ತರ ಕೊಡುವುದಕ್ಕೂ ಕೂಡ ನಾವು ತಯಾರಿದ್ದೇವೆ. ಅದರ ಬಗ್ಗೆ ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ. ಅವರು ಏನು ಕೇಳಿದ್ದಾರೆಂದರೆ, ಸರ್ಕಾರ ಅನ್ವರ್ ಮಣಿಪ್ಪಾಡಿ ಸಮಿತಿಯನ್ನು ನೇಮಕ ಮಾಡಿದ್ದು, ಅದರ ವರದಿಯನ್ನು ಸದನದಲ್ಲಿ ಮಂಡಿಸಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಆದರೆ, ಸರ್ಕಾರ ಯಾವುದೇ ಸಮಿತಿಯನ್ನು ನೇಮಕ ಮಾಡಿಲ್ಲ, ಇದು ವಾಸ್ತವಿಕ ಸಂಗತಿಯಾಗಿದೆ. ವಕ್ಫ್ ಮಂಡಳಿಯ ಬಗ್ಗೆ ತಮ್ಮ ನಿಲುವು ಏನಿದೆ, ಅದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬಂದರೆ ಅದರ ಬಗ್ಗೆ ಚರ್ಚೆ ಮಾಡೋಣ. ಕೋರ್ಟ್ ಆದೇಶದ certified copy ಅನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. As per, that we will take this for discussion.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 702**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ನಾನು ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಯಾರ್‍ಯಾರು ಇದ್ದಾರೆ ಎಂದು ನೇರವಾಗಿ ಪ್ರಶ್ನೆ ಕೇಳಿದ್ದೇನೆ. ಆದರೆ, ಬಹುತೇಕ ಅದರಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವರು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇರುತ್ತಾರೆ. ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿರುವಂತಹ ಗಣ್ಯವ್ಯಕ್ತಿಗಳನ್ನು ಹೊರತುಪಡಿಸಿ, ಬೇರೆ ಯಾರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎನ್ನುವುದಕ್ಕೆ ಮಾನ್ಯ ಉಪ ಮುಖ್ಯಮಂತ್ರಿಗಳು ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಸದರಿ ಪ್ರಾಧಿಕಾರಕ್ಕೆ ಪ್ರತಿ ವರ್ಷ ಸುಮಾರು 16 ಕೋಟಿ 25 ಲಕ್ಷ ರೂಪಾಯಿಗಳ ಅನುದಾನವನ್ನು ಕೊಡುತ್ತಿದ್ದರು. 16 ಕೋಟಿ ರೂಪಾಯಿ exchequer ಹಣ ಆಗಿರುತ್ತದೆ. ಆದರೆ, ಕ್ರೀಡಾ ಪ್ರಾಧಿಕಾರದಲ್ಲಿ ಸರ್ಕಾರದಿಂದ ಮಂಜೂರಾದ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಯಾವುದೇ ಖಾಯಂ ಹುದ್ದೆಗಳು ಇರುವುದಿಲ್ಲ. ಇದರ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳಾದವರು ಗಮನ ಹರಿಸಬೇಕಾಗುತ್ತದೆ. ಕಳೆದ ಸರ್ಕಾರದಲ್ಲಿ ಅವರಿಂದ ನಾವು ಏನನ್ನೂ ನಿರೀಕ್ಷೆ ಮಾಡಿರಲಿಲ್ಲ. ಅದು ನಮಗೂ ಕೂಡ ಅರ್ಥ ಆಗಿತ್ತು. ಆದರೆ, ಸಮ್ಮಿಶ್ರ ಸರ್ಕಾರದಲ್ಲಿ ಅವರು ಪ್ರಮುಖ ಪಾತ್ರ ವಹಿಸುತ್ತಿರುವಂತಹವರು, ಅವರಿಂದ ತುಂಬಾ ನಿರೀಕ್ಷೆ ಇದೆ. ಮಾನ್ಯ ಉಪ ಮುಖ್ಯಮಂತ್ರಿಯವರ ಅಧೀನದಲ್ಲಿ ಕರ್ನಾಟಕ ಕ್ರೀಡಾ ಇಲಾಖೆ ಇರುತ್ತದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸದಸ್ಯರೆ, ಮತ್ತೆ ಆ ಸರ್ಕಾರಕ್ಕೂ ಮತ್ತು ಈ ಸರ್ಕಾರಕ್ಕೂ ಏನು ವ್ಯತ್ಯಾಸ ಇದೆ ಹೇಳಿಬಿಡಿ. ಆದರೆ, ಈ ಸಂದರ್ಭದಲ್ಲಿ ನನಗೆ ಒಂದೇ ಒಂದು ಅಪೇಕ್ಷೆ ಇದೆ. ಮಾನ್ಯ ಉಪ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಈ ಕ್ರೀಡಾ ಪ್ರಾಧಿಕಾರ ಇರುತ್ತದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಕಳೆದ ಬಾರಿ ಕಾಳಜಿ ಹೊಂದಿದ್ದರು. ಈ ಬಾರಿ ಅಷ್ಟು ಚೆನ್ನಾಗಿ ಕಾಳಜಿ ವಹಿಸುತ್ತಿಲ್ಲವೆಂದು ಹೇಳುತ್ತಿದ್ದಾರೆ. ಆದರೆ, ಈ ಬಾರಿ ಅವರಿಗೆ ರಾಜಕೀಯ ಒತ್ತಡ ಹೆಚ್ಚಾಗಿದೆ ಎನಿಸುತ್ತದೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೆ, ನಾವು ಕಳೆದ ಸರ್ಕಾರದಲ್ಲಿ ಅವರಿಂದ ಹೆಚ್ಚು ನಿರೀಕ್ಷೆ ಮಾಡಿರಲಿಲ್ಲ. ಪಾಪ, ಅವರು ಮಾನ್ಯ ಉಪ ಮುಖ್ಯಮಂತ್ರಿ ಆಗುವಂತಹ ಸಂದರ್ಭದಲ್ಲಿ ಮತ್ತೆ ವಾಪಸ್ಸು ಸರ್ಕಾರದೊಳಗೆ ಬರಲು ಎಷ್ಟು ಕಷ್ಟಪಟ್ಟಿದ್ದಾರೆಂದು ನಮಗೂ ಕೂಡ ಗೊತ್ತಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಅವರ ಕಡೆಗೆ ಲಕ್ಷ್ಯ ಕೊಡುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಅರುಣ ಶಹಾಪುರರವರೆ, ಪ್ರಶ್ನೆ ಮಾತ್ರ ಕೇಳಿ. ರಾಜಕಾರಣದ ಬಗ್ಗೆ ಮಾತನಾಡುವುದಕ್ಕೆ ಹೋಗಬೇಡಿ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೆ, ಆ ಹಿನ್ನೆಲೆಯಲ್ಲಿ, ಮಾನ್ಯ ಉಪ ಮುಖ್ಯಮಂತ್ರಿಗಳಿಂದ ವಿಶೇಷ ನಿರೀಕ್ಷೆ ಇದೆ. ಆ ಕ್ರೀಡಾ ಪ್ರಾಧಿಕಾರದಲ್ಲಿ ಆಡಳಿತ ಮಂಡಳಿಯನ್ನು ಹೊರತುಪಡಿಸಿ, ಉಳಿದ ಯಾವುದೇ ಒಂದು ಹುದ್ದೆ ಇಲ್ಲ. 'ಯುವ ಜನ ಸಬಲೀಕರಣ ಮತ್ತು ಕ್ರೀಡಾ ಸಚಿವಾಲಯದವರೇ ಎಲ್ಲವನ್ನೂ ಮಾಡುತ್ತಿದ್ದಾರೆ. ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಒಟ್ಟು 136 ತರಬೇತುದಾರರು ಮಾಸಿಕ ಸಂಚಿತ ವೇತನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. ಕಳೆದ ಹಲವಾರು ವರ್ಷಗಳಿಂದ ಈ 136 ತರಬೇತುದಾರರು ಕೆಲಸ ಮಾಡಿರುವಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾರಣಕ್ಕಾಗಿ ಸದರಿ ಕ್ರೀಡಾ ಪ್ರಾಧಿಕಾರವು ಇನ್ನೂ ಜೀವಂತವಾಗಿದೆ. ಕ್ರೀಡೆ ಬಗ್ಗೆ ನಾವು ಯಾವಾಗ ಚರ್ಚೆ ಮಾಡುತ್ತೇವೆ ಎಂದರೆ, ಭಾರತ ದೇಶದಲ್ಲಿ ಹಾಗೂ ಕರ್ನಾಟಕದಲ್ಲಿ ಇಷ್ಟೊಂದು ದೊಡ್ಡ ಮಾನವ ಸಂಪನ್ಮೂಲ ಇದೆ. ಕ್ರೀಡೆಯಲ್ಲಿ ನಾವೇನು ಸಾಧನೆ ಮಾಡಿಲ್ಲ ಎನ್ನುವಂತಹ ವಿಚಾರದಲ್ಲಿ ಚರ್ಚೆ ಬಂದಂತಹ ಸಂದರ್ಭದಲ್ಲಿ ಮಾತ್ರ ಈ ಕ್ರೀಡೆ ನೆನಪಾಗುತ್ತದೆ. ಈ ಕ್ರೀಡಾ ಪ್ರಾಧಿಕಾರವನ್ನು ನಾವು ಈ ರೀತಿ ಇಟ್ಟುಕೊಂಡಿದ್ದೇವೆ. ಇವತ್ತಿನ ದಿವಸ ಈ ಕ್ರೀಡಾ ಪ್ರಾಧಿಕಾರವು ಇನ್ನೂ ಜೀವಂತವಾಗಿದೆ ಎಂದು ಹೇಳಿದರೆ, ಈ ತರಬೇತುದಾರರು ಇರುವುದರಿಂದ ಮಾತ್ರ. ಆದರೆ, ಇವರಿಗೆ ಸರ್ಕಾರ ಯಾವುದೇ ಸವಲತ್ತುಗಳನ್ನು ಕೊಡುತ್ತಿಲ್ಲ. ಅವರೆಲ್ಲಾ consolidated salary ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ಅನ್ಯಾಯ ಆಗುತ್ತಿರುವುದೇನೆಂದರೆ, ಕಿರಿಯ ತರಬೇತುದಾರರಿಗಿಂತ, ಅವರ ಸಮಾನವಾಗಿ 20 ವರ್ಷದಿಂದ ಕೆಲಸ ಮಾಡುತ್ತಿರುವವರು ಕಡಿಮೆ ವೇತನವನ್ನು ಪಡೆದುಕೊಳ್ಳುತ್ತಿದ್ದಾರೆ. ಅವರ ಸಕ್ರಮಾತಿ ಬಗ್ಗೆ ಕೂಡ ಉತ್ತರ ಕೊಟ್ಟಿಲ್ಲ. ಸರ್ಕಾರ ಇದಕ್ಕೊಂದು ಕಾಯಕಲ್ಪ ಕೊಟ್ಟು, ಈ ತರಬೇತುದಾರರಿಗೆ ಖಾಯಮಾತಿ ಮಾಡಬೇಕು. C & R (Cadre and Recruitment) Rules ನಿರ್ಮಾಣ ಮಾಡಬೇಕು ಎನ್ನುವುದರ ಬಗ್ಗೆ ಏನು ಕ್ರಮ ಕೈಗೊಂಡಿರುತ್ತಾರೆ ಎನ್ನುವ ಬಗ್ಗೆ ನಾನು ನೇರವಾಗಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ನಿಜವಾಗಿಯೂ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ತರಬೇತುದಾರರಿಗೆ ತೊಂದರೆಯಾಗಿದೆ. ಅವರು 1976 ರಿಂದಲೂ 1,750/- ರೂಪಾಯಿಗಳಿಂದಲೂ ದುಡಿಯುತ್ತಿದ್ದಾರೆ. ಒಬ್ಬ ಕ್ರೀಡಾಪಟು ಕ್ರೀಡೆಯಲ್ಲಿ ಗೆದ್ದು ಪ್ರಶಸ್ತಿ ತರಬೇಕಾದರೆ, ತರಬೇತುದಾರರ ಪಾತ್ರ ಬಹಳ ಪ್ರಮುಖವಾದುದು. ಅವರು ಪ್ರಾಧಿಕಾರ ಪ್ರಾರಂಭ ಆದಾಗಿನಿಂದ ಸುಮಾರು 5,200/- ರೂಪಾಯಿಗಳ ವೇತನ ಪಡೆದು, ಅಂತಿಮವಾಗಿ 18,500/- ರೂಪಾಯಿಗಳ ವೇತನವನ್ನು ಪಡೆಯುತ್ತಿದ್ದರು. ಆದರೆ, ಇವತ್ತಿನ ದಿವಸ ಅವರು 39,960/- ರೂಪಾಯಿಗಳ ವೇತನವನ್ನು ಪಡೆಯುತ್ತಿದ್ದಾರೆ. ಆದರೆ, ಇತ್ತೀಚೆಗೆ ಆಯ್ಕೆ ಆಗಿರುವಂತಹ ತರಬೇತುದಾರರಿಗೆ ರೂ.39,960/- ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದಾರೆ. 70,000/- ರೂಪಾಯಿಗಳ ಸಂಬಳವನ್ನು ಒಂದು ವರ್ಗಕ್ಕೆ ಕೊಟ್ಟು, ಇನ್ನೊಂದು ವರ್ಗಕ್ಕೆ ಕಡಿಮೆ ಸಂಬಳ ಕೊಡುತ್ತಿದ್ದಾರೆ. ಈ ರೀತಿ ತಾರತಮ್ಯ ಮಾಡುವುದಾದರೆ, ನಾವು ಕ್ರೀಡೆಯನ್ನು ಬೆಳೆಸುವುದಕ್ಕೆ ಹೇಗೆ ಸಾಧ್ಯವಾಗುತ್ತದೆ. ಕರ್ನಾಟಕ ಕ್ರೀಡಾ ಪ್ರಾಧಿಕಾರ ಬಹಳ ಪ್ರಮುಖವಾದಂತಹ ಅಂಗವಾಗಿದೆ. 136 ತರಬೇತುದಾರರಲ್ಲಿ ಕೆಲವು ಮಂದಿ ಈಗಾಗಲೇ ಸತ್ತು ಹೋಗಿದ್ದಾರೆ. ಪ್ರಸ್ತುತ 88 ತರಬೇತುದಾರರು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇಷ್ಟು ವರ್ಷವಾದರೂ ಕೂಡ ಅವರನ್ನು ಖಾಯಮಾತಿ ಮಾಡಿಲ್ಲ. ಅವರಿಗೆ ಮದುವೆಯಾಗಿ ಮಕ್ಕಳು ಇರುತ್ತಾರೆ, ಇದನ್ನು ತಾವೇ ಲೆಕ್ಕ ಹಾಕಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಅವರು ನನ್ನ ಬಳಿಯೂ ಈ ಬಗ್ಗೆ ಸಾಕಷ್ಟು ಬಾರಿ ಬಂದಿದ್ದಾರೆ. ಈ ಕ್ರೀಡಾ ಪ್ರಾಧಿಕಾರದಲ್ಲಿ coaches ಏನಿದ್ದಾರೆ, NIS

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(National Institute of Sports) ನಲ್ಲಿ ಆದವರು ಇದ್ದಾರೆ, M.P.Ed.( Master of Physical Education), NIS ಆದವರು ಇದ್ದಾರೆ. ಆದರೆ, ಇವರೆಲ್ಲರೂ ವಯೋಮಾನ ಮೀರುತ್ತಿದ್ದಾರೆ.

**(ಮುಂದುವರೆದಿದೆ...)**

**(460)14-12-2018(12-10)mm-gr**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದುವರೆದುದು...)**

ಅವರಿಗೆ ಕೆಲಸ ಮಾಡಬೇಕೆನ್ನುವ ಆತುರ ಕಡಿಮೆಯಾಗುತ್ತಿದೆ. ಮಕ್ಕಳನ್ನು ಹೇಗೆ ತಯಾರು ಮಾಡುತ್ತಾರೆ? ನಾನು ಹೇಳುವುದೇನೆಂದರೆ, ಒಂದು ತೀರ್ಮಾನ ಮಾಡಿ 10 ವರ್ಷ 20 ವರ್ಷಗಳಿಂದ ಕೆಲಸ ಮಾಡಿದ್ದರೂ ಅವರಿಗೆ ಖಾಯಂ ಆಗಿಲ್ಲ. ಸಂಬಳ ಕೊಡುವುದು ದೊಡ್ಡದಲ್ಲ. ಸಂಬಳ ಬೇಕಾದರೆ 1000 ರೂಪಾಯಿ ಕಡಿಮೆ ಕೊಡಿ. ಆದರೆ ಅವರ ಪ್ರಶ್ನೆಯೇನೆಂದರೆ, 22 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಒಬ್ಬ ಕೋಚ್ ಮೈದಾನದಲ್ಲಿ ಇದ್ದುಕೊಂಡು ಮಕ್ಕಳಿಗೆ ತರಬೇತಿ ಕೊಡಬೇಕಾದರೆ ಅವರ ತಲೆ ಯಾವಾಗಲೂ ಅವನ ಕೆಲಸದ ಬಗ್ಗೆ, ಕುಟುಂಬದ ಬಗ್ಗೆ ಯೋಚನೆ ಮಾಡುತ್ತಿರುತ್ತದೆ. ನಾನು ಒಮ್ಮೆ ಶಿರಸಿಗೆ ಹೋಗಿದ್ದಾಗ ಅಲ್ಲಿ ಮೈದಾನಕ್ಕೆ ವಾಯುವಿಹಾರಕ್ಕೆ ಹೋಗಿದ್ದೆ. ಅಲ್ಲಿ ಕೋಚ್ ಒಬ್ಬರು ಮೈದಾನದಲ್ಲಿ ಕುಳಿತುಕೊಂಡಿದ್ದರು. ಕೋಚ್ ಆಗಿ ಮೈದಾನದಲ್ಲಿ ಏಕೆ ಕುಳಿತುಕೊಂಡಿದ್ದೀರಿ ಎಂದು ಕೇಳಿದೆ. ಮುಂಜಾನೆ ಮತ್ತು ಸಾಯಂಕಾಲ ಅದೇ ವಿಚಾರ ತಲೆಯಲ್ಲಿರುತ್ತದೆ ಎಂದರು. ಆದ್ದರಿಂದ ಈ ವಿಚಾರದ ಬಗ್ಗೆ ಒಂದು ತೀರ್ಮಾನ ಮಾಡಿ. ಇದೊಂದು ಮಹತ್ವವಾದ ಇಲಾಖೆಯಾಗಿದೆ. ಈ ಇಲಾಖೆಯಲ್ಲಿ ಕೆಲಸ ಮಾಡುವ ತರಬೇತುದಾರರಿಗೆ ಸಹಾಯ ಮಾಡದಿರುವುದು ಸರಿಯಲ್ಲ. ಅದನ್ನು ಗಮನಿಸಿ ಅವರಿಗೆ ಏನಾದರೂ ಸಹಾಯ ಮಾಡಿ ಎಂದು ಹೇಳಬಯಸುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಉಪಮುಖ್ಯಮಂತ್ರಿಯವರೆ, ತಾವು ಕೂಡ ಕ್ರೀಡಾಪಟುಗಳಾಗಿದ್ದು ಅವಾರ್ಡ್‌ಗಳನ್ನು ತಂದಿದ್ದೀರಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಹಾಗಿದ್ದುಕೊಂಡು ಇವರೇಕೆ ಹೀಗೆ ಮಾಡುತ್ತಾರೆ? ಮಾನ್ಯ ಉಪಮುಖ್ಯಮಂತ್ರಿಯವರು ಕ್ರೀಡಾಪಟುವೆಂದು ನಮಗೆ ಗೊತ್ತಿರಲಿಲ್ಲ. ಕ್ರೀಡಾಪಟುವಾಗಿ ಅವರೇ ಹೀಗೆ ಮೋಸ ಮಾಡಿದರೆ ಹೇಗೆ?

**ಡಾ|| ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ಮಾನ್ಯ ಬಸವರಾಜ ಹೊರಟ್ಟಿಯವರ ಕಳಕಳಿ ನನಗೆ ಅರ್ಥವಾಗುತ್ತದೆ, ಮಾನ್ಯ ಸದಸ್ಯರಾದ ರೇವಣ್ಣನವರ ಕಳಕಳಿಯೂ ಅರ್ಥವಾಗುತ್ತದೆ. ಆದರೆ ಶ್ರೀ ಅರುಣ ಶಹಾಪೂರರವರು ಯಾವಾಗ sports ಆಡಿದ್ದರು? ಆದರೆ ಈ ವಿಚಾರದ ಬಗ್ಗೆ ಬಹಳ ಆಸಕ್ತಿ ವಹಿಸಿರುವುದಕ್ಕೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬಹಳ ಸಂತೋಷವಾಗಿದೆ. ನಾನು ಮಾನ್ಯ ಸದಸ್ಯರು ಹೇಳಿದ ಹಾಗೆ ಒಬ್ಬ ಕ್ರೀಡಾಪಟುವಾಗಿ ಕೋಚ್‌ಗಳ ಪ್ರಾಮುಖ್ಯತೆ ಏನು ಎನ್ನುವುದು ಬಹಳ ಚೆನ್ನಾಗಿ ಗೊತ್ತಿದೆ. ಯಾವ ರೀತಿ ಒಬ್ಬ ಅಥ್ಲೀಟ್ ಅನ್ನು, sports man ಅನ್ನು ತಯಾರು ಮಾಡುವುದಕ್ಕೆ ಕೋಚ್‌ಗಳು ಕ್ರಮ ವಹಿಸುತ್ತಾರೆ ಎನ್ನುವುದು ಸ್ವತಃ ನನಗೆ ಅನುಭವ ಇರುವುದರಿಂದ ಅರ್ಥವಾಗುತ್ತದೆ. ಮಾನ್ಯ ಸದಸ್ಯರಾದ ರೇವಣ್ಣನವರು ಹೇಳಿದ ಹಾಗೆ 1500, 2000, 2500 ರೂಪಾಯಿ ಈ ರೀತಿಯ ಸಂಬಳಕ್ಕೆ ಸೇರಿಕೊಂಡು ಕೋಚ್‌ಗಳಾಗಿ 20 ರಿಂದ 30 ವರ್ಷ ಕೆಲಸ ಮಾಡಿದ್ದಾರೆ. ನಿಜಕ್ಕೂ ನಾನು ಅನೇಕ ಸಂದರ್ಭಗಳಲ್ಲಿ ಅವರ ಜೊತೆ ಚರ್ಚೆ ಮಾಡಿದ್ದೇನೆ. ನಾನು Karnataka Athletics Association ನ ಅಧ್ಯಕ್ಷನಾಗಿ Athletics Federation of India ಸಂಸ್ಥೆಯ ಉಪಾಧ್ಯಕ್ಷನಾಗಿ ಈಗಲೂ ಇದ್ದೇನೆ. ನನಗೆ ಈ ಕೋಚ್‌ಗಳ ಸಮಸ್ಯೆಗಳು ರಾಷ್ಟ್ರಮಟ್ಟದಲ್ಲಿ ಕೂಡ ಅರ್ಥವಾಗುತ್ತದೆ. ಇತ್ತೀಚೆಗೆ ಒಲಂಪಿಕ್‌ನಲ್ಲಿ ಚಿನ್ನದ ಪದಕವನ್ನು ತರಬೇಕೆಂದು ವಿದೇಶಿ ತರಬೇತುದಾರರನ್ನು ಕೂಡ ಫೆಡರೇಷನ್‌ನಲ್ಲಿ ನೇಮಕ ಮಾಡಿಕೊಳ್ಳುತ್ತೇವೆ. ಅವರಿಗೆ ಸುಮಾರು 50 ಲಕ್ಷ, ಒಂದು ಕೋಟಿ ರೂಪಾಯಿಗಳಷ್ಟು ಹಣ ಕೊಟ್ಟು ಕರೆದುಕೊಂಡು ಬಂದು ಅಥ್ಲೀಟ್ಸ್‌ಗೆ ತರಬೇತಿ ಕೊಡಿಸುತ್ತೇವೆ. ಆದರೆ ಇಲ್ಲಿರುವ ಕೋಚ್‌ಗಳೆಲ್ಲಾ ಎಂ.ಪಿ.ಎಡ್., ಬಿ.ಪಿ.ಎಡ್., ಮಾಡಿದ್ದಾರೆ ಅವರಿಗೆ ಕೊಡುವುದಕ್ಕೆ ಏಕಿಷ್ಟು ತೊಂದರೆಯಾಯಿತು ಎಂಬುದು ನನಗೆ ಗೊತ್ತಿಲ್ಲ. ಆದರೆ ಮಾನ್ಯ ಸದಸ್ಯರುಗಳಿಗೆ ಒಂದು ಆಶ್ವಾಸನೆಯನ್ನು ಕೊಡಬಯಸುತ್ತೇನೆ, ಆದಷ್ಟು ಶೀಘ್ರವಾಗಿ ಸಿ & ಆರ್ ರೂಲ್ಸ್ ಅನ್ನು ಅಮೆಂಡ್ ಮಾಡಿ ಇವರಿಗೆ ಒಂದು ಕಾಯಕಲ್ಪವನ್ನು ಕಲ್ಪಿಸಿಕೊಡುತ್ತೇವೆ ಎಂಬ ಮಾತನ್ನು ಹೇಳಬಯಸುತ್ತೇನೆ. ಏಕೆಂದರೆ, ಈಗ ಕೂಡ ಅವರಿಗೆ ಸಂಬಳವನ್ನು ಹೆಚ್ಚು ಮಾಡಿದ್ದು, ಸೀನಿಯರ್ ಕೋಚ್‌ಗಳ ವೇತನವನ್ನು 70,000 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

**ಶ್ರೀ ಹೆಚ್.ಎಂ.ರೇವಣ್ಣ:-** ಈಗ ಸೇರಿದವರಿಗೆ 70,000 ರೂಪಾಯಿ ಸಂಬಳ ಇದೆ. Discrimination is there. ಇಷ್ಟು ವರ್ಷಗಳಿಂದ ದುಡಿದವರಿಗೆ ಇಲ್ಲ. ಇದರಲ್ಲಿ ತಾರತಮ್ಯ ಇದೆ.

**ಡಾ॥ ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಜೂನಿಯರ್ ಕೋಚ್‌ಗಳಿಗೆ Certificate Course ಆಗಿದ್ದರೆ ಅವರಿಗೆ 26,000 ರೂಪಾಯಿಗಳು. ತರಬೇತುದಾರರು ಪದವೀಧರರಾಗಿದ್ದು, ಕ್ರೀಡೆಯಲ್ಲಿ ಡಿಪ್ಲೊಮೋ ಮಾಡಿದ್ದರೆ ಅವರಿಗೆ 31,000 ರೂಪಾಯಿ, ತರಬೇತುದಾರರು ಪದವೀಧರರಾಗಿದ್ದು, ಕ್ರೀಡಾ ತರಬೇತಿಯಲ್ಲಿ ಡಿಪ್ಲೊಮೋ ಮಾಡಿದ್ದರೆ ಅವರ ಅನುಭವದ ಆಧಾರದ ಮೇಲೆ 39,960 ರೂಪಾಯಿ ಮತ್ತು ಹಿರಿಯ ತರಬೇತುದಾರರಿಗೆ 70,000 ರೂಪಾಯಿಗಳ ವೇತನವನ್ನು ನೀಡಲಾಗುತ್ತದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಅರುಣ ಶಹಾಪೂರ:–** ಮಾನ್ಯ ಸಭಾಪತಿಯವರೆ, ಅದರ ವರದಿಯನ್ನು ಒದಗಿಸಿಕೊಡಿ.

**ಡಾ॥ ಜಿ.ಪರಮೇಶ್ವರ್:–** ಇದರಲ್ಲಿ ಏನಾದರೂ ಸಣ್ಣ ಪುಟ್ಟ ವ್ಯತ್ಯಾಸಗಳಿದ್ದರೆ ಪರಿಶೀಲನೆ ಮಾಡುತ್ತೇವೆ. ಒಟ್ಟಾರೆ ಸಿ & ಆರ್ ರೂಲ್ಸ್ ಅನ್ನು ಅಮೆಂಡ್ ಮಾಡಿ ...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, N.I.S., (National Institute of Sports) ನಲ್ಲಿ certificate course ಆದವರು they are the real Coach. ಬಿ.ಪಿ.ಎಡ್., ಎಂ.ಪಿ.ಎಡ್., ಆದವರು ಬೇರೆ. ಪ್ರೌಢಶಾಲೆ ಮತ್ತು ಕಾಲೇಜುಗಳಿಗೆ ಅವರನ್ನು ಕರೆಸುತ್ತಾರೆ. ಆದರೆ N.I.S., ಆದವರು ಮಾತ್ರ real Coach ಆಗಿರುತ್ತಾರೆ. ಅವರಿಗೆ ಏನಿದೆ? Individual coaching ಕೊಡಬೇಕಾದರೆ N.I.S., ಕಡ್ಡಾಯವಾಗಿ ಆದವರಿಗೆ ಮಾತ್ರ ಕೋಚ್ ಆಗುತ್ತಾರೆ. ಎಂ.ಪಿ.ಎಡ್., ಮಾಡಿರುವವರು ಕೋಚ್ ಆಗುವುದಿಲ್ಲ.

**ಡಾ॥ ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೆ, ಸುಮಾರು 20–25 ವರ್ಷಗಳ ಹಿಂದೆ ಸೇರಿಕೊಂಡಿರುವ ಬಹಳಷ್ಟು ಜನರಿಗೆ ಎನ್.ಐ.ಎಸ್., ಆಗಿಲ್ಲ. ಅವರೆಲ್ಲಾ ಡಿಪ್ಲೋಮೋ ಸರ್ಟಿಫಿಕೇಟ್ ತೆಗೆದುಕೊಂಡು ಸಿ.ಪಿ.ಎಡ್., ಮತ್ತು ಬಿ.ಪಿ.ಎಡ್., ಮಾಡಿ ಕೆಲವರು ಮಾತ್ರ ಎಂ.ಪಿ.ಎಡ್ ಮಾಡಿದ್ದಾರೆ. ಆದ್ದರಿಂದ ಸಿ & ಆರ್ ರೂಲ್ಸ್ ಅನ್ನು ಅಮೆಂಡ್ ಮಾಡಿ regularise ಮಾಡುವುದಕ್ಕೆ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಅರುಣ ಶಹಾಪೂರ:–** ಮಾನ್ಯ ಸಭಾಪತಿಯವರೆ, ಯುವಜನ ಸೇವಾ ಸಚಿವಾಲಯ ಕ್ರೀಡಾ ಪ್ರಾಧಿಕಾರ ನಡೆಸುತ್ತಿರುವುದರಿಂದ ಸಿ & ಆರ್ ಮಾಡುತ್ತಿಲ್ಲ. ಸರ್ಕಾರ ಸಿ & ಆರ್ ರೂಲ್ ರಚನೆ ಮಾಡಲು ಯಾವಾಗ ಆದೇಶಿಸಲಾಗಿದೆ ಎನ್ನುವುದನ್ನು ಪರಿಶೀಲಿಸಿ. ಮೊದಲನೆಯದಾಗಿ ಇಲ್ಲಿ ಯುವಜನ ಸೇವಾ ಸಚಿವಾಲಯದ ಸಿಬ್ಬಂದಿಯ ಲಾಬಿ ಇದೆ. ಎರಡನೆಯದಾಗಿ ಅನುದಾನ ಪಡೆಯುವವರ ಲಾಬಿ ಇದೆ. ಇವೆರಡರ ಬಗ್ಗೆ ಎಚ್ಚರಿಕೆ ವಹಿಸಿ ಆದಷ್ಟು ಬೇಗ ಸಿ & ಆರ್ ರೂಲ್ ಮಾಡಿ ಸಕ್ರಮಾತಿ ಮಾಡಿ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಚುಕ್ಕೆ ಪ್ರಶ್ನೆ ಸಂಖ್ಯೆ: 723**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಎಂ.ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) (ಶ್ರೀ ಕೆ.ಗೋವಿಂದರಾಜ್ ಪರವಾಗಿ):–** ಮಾನ್ಯ ಸಭಾಪತಿಯವರೆ, ಪ್ರಶ್ನೆಗಳ ಪುಸ್ತಕದಲ್ಲಿ ‘ಉಪ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ’ ಎಂದಿದೆ, ಆದರೆ ಉತ್ತರ

ಕಳುಹಿಸಿರುವುದರಲ್ಲಿ ‘ಅರಣ್ಯ ಸಚಿವರು ಉತ್ತರ ಕೊಡುತ್ತಾರೆ’ ಎಂದಿದೆ, ಹೀಗಿರುವಾಗ ನಾನೀಗ ಯಾರನ್ನು ಉಪಪ್ರಶ್ನೆ ಕೇಳಬೇಕೆಂದು ಗೊತ್ತಾಗುತ್ತಿಲ್ಲ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೆ, ಈ ಪ್ರಶ್ನೆ ಅರಣ್ಯ ಇಲಾಖೆಗೆ ವರ್ಗವಾಗಿದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ರಾಜಕಾಲುವೆಯ ನೀರನ್ನು ನೇರವಾಗಿ ಮಡಿವಾಳ ಕೆರೆಗೆ ಹರಿಸಿದ ಪರಿಣಾಮವಾಗಿ ಕೆರೆಯ ದಡದಲ್ಲಿ ಶಂಕದ ಹುಳು, ಕಪ್ಪೆಚಿಪ್ಪು, ಸತ್ತ ಮೀನುಗಳ ರಾಶಿ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ ಅದಕ್ಕೆ ಸರ್ಕಾರವು ಹೌದು ಎಂದು ಒಪ್ಪಿಕೊಂಡಿದೆ. ಮತ್ತೊಂದು ಉಪಪ್ರಶ್ನೆಯೆಂದರೆ ಮಡಿವಾಳ ಕೆರೆಯ ದುರ್ವಾಸನೆಯಿಂದ ಸಾರ್ವಜನಿಕರು ಗಾಬರಿಗೊಂಡಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ ಎಂದು ಕೇಳಿದ್ದೇನೆ ಅದಕ್ಕೂ ಸಹ ಸರ್ಕಾರ ‘ಹೌದು’ ಎಂದು ಹೇಳಿದೆ. ನಮ್ಮ ಕಾಳಜಿಯೇನೆಂದರೆ, ಮಡಿವಾಳ ಕೆರೆ ಒಂದು ಕಾಲದಲ್ಲಿ ಬಹಳ ಪ್ರತಿಷ್ಠೆಯಾದಂತಹ ಕೆರೆಯಾಗಿತ್ತು. ಇತ್ತೀಚಿನ ದಿನಗಳಲ್ಲಿ ಕಲುಷಿತ ನೀರು ನೇರವಾಗಿ ಕೆರೆಗೆ ಸೇರುತ್ತಿದೆ. ಸಂಸ್ಕರಣ ಘಟಕವನ್ನು 1998ರಲ್ಲಿ ಸುಮಾರು 02 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಶುದ್ಧೀಕರಣ ಘಟಕವನ್ನು ಪ್ರಾರಂಭ ಮಾಡಿದ್ದೇವೆಂದು ಹೇಳಿದರು. ತದನಂತರ ಸದರಿ ಘಟಕವನ್ನು ಕರ್ನಾಟಕ ಕೆರೆ ಸಂರಕ್ಷಣೆ ಹಾಗೂ ಅಭಿವೃದ್ಧಿ ಪ್ರಾಧಿಕಾರದವರಿಗೆ 2017ನೇ ಸಾಲಿನಲ್ಲಿ ಹಸ್ತಾಂತರಿಸಲಾಗಿರುತ್ತದೆ. ಅದರಂತೆ ಪ್ರಾಧಿಕಾರದ ವತಿಯಿಂದ 24.72 ಕೋಟಿ ರೂಪಾಯಿ ವೆಚ್ಚದಲ್ಲಿ ಮಡಿವಾಳ ಕೆರೆ ಹಾಗೂ ನೀರು ಶುದ್ಧೀಕರಣ ಘಟಕವನ್ನು ಆಧುನಿಕವಾಗಿ ಅಭಿವೃದ್ಧಿಗೊಳಿಸಲು ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಸದರಿ ಯೋಜನೆಯನ್ನು ಸುಮಾರು 13.17 ಕೋಟಿ ರೂಪಾಯಿ ನಿಗದಿಪಡಿಸಿ ಅದರ ಮೇಲ್ವಿಚಾರಣೆ ಮಾಡುವುದಕ್ಕೆ . . .

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸದಸ್ಯರೆ, ಅದೆಲ್ಲವನ್ನೂ ಲಿಖಿತವಾಗಿ ಕೊಟ್ಟಿದ್ದೇವೆ. ಅದರ ಪ್ರತಿ ನಮ್ಮ ಬಳಿ ಹಾಗೂ ಎಲ್ಲರ ಬಳಿಯೂ ಇದೆ. ತಾವು ಏನನ್ನು ಕೇಳಬಯಸುತ್ತೀರಿ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಇಷ್ಟನ್ನು ಮಾಡಿದ್ದರೂ ಕೂಡ ರಾಜಕಾಲುವೆಗೆ ಶುದ್ಧೀಕರಣ ಮಾಡಿರುವ ನೀರು ಬರುತ್ತಿಲ್ಲ. ಅಕ್ಕಪಕ್ಕದಲ್ಲಿ ಅಭಿವೃದ್ಧಿಯಾಗಿರುವ ಲೇಔಟ್ ಗಳಾಗಿರಬಹುದು ಅಥವಾ ಅಪಾರ್ಟ್‌ಮೆಂಟ್‌ಗಳಾಗಿರಬಹುದು ನೇರವಾಗಿ ಕಲುಷಿತ ನೀರನ್ನು ಅಲ್ಲಿಗೆ ಬಿಡುತ್ತಿದ್ದಾರೆ. ಆ ನೀರು ಬಂದಿರುವುದರಿಂದ ಕೆರೆಯ ಸುತ್ತ ಮುತ್ತ ಕೂಡ ವಾಸನೆ ಜಾಸ್ತಿಯಾಗಿದ್ದು, ಜನ ಓಡಾಡುವುದಕ್ಕೆ ಆಗುತ್ತಿಲ್ಲ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಆ ಕೆರೆಯ ಸುತ್ತ ಮುತ್ತ beatification ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿದೆ. ಆದರೆ ಅದೆಲ್ಲವೂ ವ್ಯರ್ಥವಾಗುತ್ತಿದೆ. ದಯಮಾಡಿ ಶುದ್ಧೀಕರಣ ಘಟಕ ಸರಿಯಾದ ರೀತಿಯಲ್ಲಿ



ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾರ್ಯ ನಿರ್ವಹಿಸುವಂತೆ ಮಾಡಬೇಕು ಮತ್ತು ಕಲುಷಿತ ನೀರು ಬರುತ್ತಿರುವುದನ್ನು ಶುದ್ಧೀಕರಿಸಿ ಕೆರೆಗೆ ಬಿಡಬೇಕೆಂದು ಕೇಳಿಕೊಳ್ಳುತ್ತೇನೆ. ಕರ್ನಾಟಕ ಸರ್ಕಾರಕ್ಕೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವು (ಎನ್.ಜಿ.ಟಿ) ಬೆಂಗಳೂರಿನ ಕೆರೆಗಳನ್ನು ಶುದ್ಧೀಕರಣ ಮಾಡುವುದಕ್ಕೆ ಸುಮಾರು 500 ಕೋಟಿ ರೂಪಾಯಿಗಳನ್ನು ಇಡಬೇಕೆಂದು ಸರ್ಕಾರದ ಮೇಲೆ ಛಾಟಿ ಬೀಸಿದೆ. ಬಿ.ಬಿ.ಎಂ.ಪಿ ಕೂಡ 25 ಕೋಟಿ ರೂಪಾಯಿಗಳನ್ನು ಇಡಬೇಕೆಂದು ಹೇಳಿದೆ. ದಯಮಾಡಿ ಬೆಂಗಳೂರಿನಲ್ಲಿರುವ ಬಹಳಷ್ಟು ಕೆರೆಗಳು ಹಾಳಾಗುತ್ತಿವೆ ಇದರ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೆ, ಪುಡಿವಾಳ ಕೆರೆಗೆ ತ್ಯಾಜ್ಯ ನೀರು ನೇರವಾಗಿ ಒಳಗೆ ಹರಿಯುತ್ತಿರುವುದು ನಿಜ. ಮಾನ್ಯ ಸದಸ್ಯರು ಎತ್ತಿರುವ ವಿಚಾರವನ್ನು ಮತ್ತು ಕಾಳಜಿಯನ್ನು ನಾವು ಗೌರವಿಸುತ್ತೇವೆ. ತ್ಯಾಜ್ಯ ನೀರು ನೇರವಾಗಿ ಪ್ರವೇಶ ಮಾಡುತ್ತಿರುವುದರಿಂದ ಪರಿಸರವೂ ಹಾಳಾಗುತ್ತಿದೆ ಹಾಗೂ ಕೆರೆಗಳೂ ಕೆಡುತ್ತಿರುವುದು ನಿಜ. ನಾವು ಯಾವುದನ್ನೂ ಅಲ್ಲಗಳೆಯುತ್ತಿಲ್ಲ. ಅಲ್ಲಿ 1998ರಲ್ಲಿ ಒಂದು ತ್ಯಾಜ್ಯ ನೀರಿನ ಶುದ್ಧೀಕರಣ ಘಟಕವನ್ನು ಹಾಕಿದ್ದೆವು, ಅದು ಕೆಟ್ಟು ಹೋಗಿದೆ. ಇತ್ತೀಚೆಗೆ ಮಳೆಯೂ ಹೆಚ್ಚಾಗಿ ಒಳಹರಿವೂ ಜಾಸ್ತಿಯಾಗಿದೆ. ಆಗ ಸಣ್ಣ ಪ್ರಮಾಣದ ಶುದ್ಧೀಕರಣ ಘಟಕವನ್ನು ಹಾಕಿದ್ದೆವು.

(ಮುಂದುವರೆದಿದೆ...)

(461) 14–12–2018/12–20/ಕೆಹೆಚ್–ಜಿಆರ್

**ಶ್ರೀ ಕೃಷ್ಣಭೈರೇಗೌಡ (ಮುಂದುವರೆದುದು...)**

ತ್ಯಾಜ್ಯ ನೀರು ಬಹಳ ದೊಡ್ಡ ಪ್ರಮಾಣದಲ್ಲಿ ಬರುತ್ತಿದೆ. ಹಾಗಾಗಿ ತ್ಯಾಜ್ಯ ಘಟಕವನ್ನು ಮೇಲ್ದರ್ಜೆಗೇರಿಸುವುದಕ್ಕೆ upgradation of STP ರೂ.13.17 ಕೋಟಿಗಳನ್ನು ಸೇರಿಸಿ, ಒಟ್ಟಾರೆ ಕೆರೆಯ ಸುಧಾರೀಕರಣಕ್ಕೆ ರೂ.24.72 ಕೋಟಿಗಳ ಯೋಜನೆಯನ್ನು ಮಂಜೂರು ಮಾಡಿ, upgradation of STP work ಸಹ ಪ್ರಾರಂಭವಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ತ್ಯಾಜ್ಯ ನೀರು ನೇರವಾಗಿ ಕೆರೆಗೆ ಶುದ್ಧಿಕರಣವಾಗದೇ ಪ್ರವೇಶ ಮಾಡುವುದನ್ನು ತಡೆಗಟ್ಟಬೇಕೆನ್ನುವ ದೃಷ್ಟಿಯಿಂದ ನಾವು ಘಟಕದ ಉನ್ನತೀಕರಣವನ್ನು ಕೈಗೆತ್ತಿಕೊಂಡಿದ್ದೇವೆ. ಸದರಿ ಕೆಲಸವು ಪ್ರಾರಂಭವಾಗಿದೆ. ಇದಕ್ಕಾಗಿ ರೂ.24.72 ಕೋಟಿಗಳನ್ನು ಮಂಜೂರು ಮಾಡಿದ್ದೇವೆ. ಈ ಕೆಲಸವಾಗಬೇಕಾದರೆ ಇನ್ನೂ ಒಂದು ವರ್ಷಗಳ ಅವಧಿಯನ್ನು ತೆಗೆದುಕೊಳ್ಳುತ್ತದೆ. ಅಷ್ಟರೊಳಗೆ ಆ ಘಟಕವನ್ನು ಕಾರ್ಯಾರಂಭ ಮಾಡುವಂತೆ ಮಾಡಿ ತ್ಯಾಜ್ಯ ನೀರನ್ನು ಘಟಕಕ್ಕೆ ಬಿಟ್ಟು, ಅಲ್ಲಿ ಶುದ್ಧಿಕರಣ ಮಾಡಿ, ಶುದ್ಧಿಕರಿಸಿದ ನೀರನ್ನು ಕೆರೆಗೆ ತರುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆ. ಆ ಕೆಲಸವನ್ನು ಮಾಡಿ ಮತ್ತೆ ಕೆರೆಯನ್ನು ಒಳ್ಳೆಯ ಪ್ರಾಶಸ್ತ್ಯಕ್ಕೆ ಮರು ಸ್ಥಾಪನೆ ಮಾಡುವಂತಹ ಕೆಲಸ ಸರ್ಕಾರ ಮಾಡುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 689**
**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಬಹಳ ವಿವರವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ರೈತರ ಪಡೆದಂತಹ ಅಲ್ಪಾವಧಿ ಸಾಲವನ್ನು ರೂ.1.00 ಲಕ್ಷದವರೆಗೆ ಮನ್ನಾ ಮಾಡುವುದರ ಬಗ್ಗೆ ಸಹಕಾರ ಸಂಘದಲ್ಲಿ ಬಹಳ ವಿವರವಾದ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಭಾರತ ದೇಶದಲ್ಲಿಯೇ ಪ್ರಥಮ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ರೈತರಿಗೆ ಇಷ್ಟೊಂದು ದೊಡ್ಡ ಮೊತ್ತದ ಕೊಡುಗೆಯನ್ನು ಈ ಸಮ್ಮಿಶ್ರ ಸರ್ಕಾರ ಕೊಟ್ಟಿದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಯವರನ್ನು, ಮಾನ್ಯ ಉಪ ಮುಖ್ಯಮಂತ್ರಿಯವರನ್ನು ಹಾಗೂ ಸಹಕಾರ ಸಚಿವರನ್ನು ರೈತರ ಪರವಾಗಿ ನಾನು ತುಂಬು ಹೃದಯದಿಂದ ಅಭಿನಂದಿಸುತ್ತೇನೆ. ಆದರೆ ನನ್ನ ಒಂದು ಪ್ರಶ್ನೆಯೇನೆಂದರೆ, *PICARD Banks* ಗಳಲ್ಲೂ ಕೂಡ ಅಲ್ಪಾವಧಿ ಬೆಳೆ ಸಾಲವನ್ನು ಮನ್ನಾ ಮಾಡಿದ್ದೇವೆ ಎಂದು ಉತ್ತರದಲ್ಲಿ ಮಾನ್ಯ ಸಚಿವರು ನೀಡಿದ್ದಾರೆ. ಆದರೆ *PICARD Banks* ಗಳಲ್ಲಿ ಬಹುಪಾಲು ದೀರ್ಘಾವಧಿ ಸಾಲವನ್ನು ಕೊಡುವಂತಹದ್ದು, ಈ ರಾಜ್ಯದಲ್ಲಿ ವಾಡಿಕೆ ಇರುವಂತಹದ್ದು, ಇವತ್ತಿನ ದಿವಸ ಬೋರ್‌ವೆಲ್ ಹಾಕುವುದಕ್ಕೆ, ಟ್ಯಾಂಕರ್ ತೆಗೆದುಕೊಳ್ಳುವುದಕ್ಕೆ, ಪಶು ಸಾಲ ಕೊಡುವುದಕ್ಕೆ, ಭೂಮಿಯನ್ನು ಮಟ್ಟ ಮಾಡುವುದಕ್ಕೆ, ಪೈಪ್‌ಲೈನ್ ಹಾಕುವುದಕ್ಕೆ, ತೆಂಗಿನ ಸಸಿಗಳನ್ನು ನೆಡುವುದಕ್ಕೆ ಮತ್ತು ದ್ರಾಕ್ಷಿಯನ್ನು ಬೆಳೆಯುವುದಕ್ಕೆ ಈ ಎಲ್ಲದಕ್ಕೂ *PICARD Banks* ಗಳಿಂದ ದೀರ್ಘಾವಧಿ ಸಾಲವನ್ನು ಕೊಡುತ್ತಾರೆ. ಆದರೆ, ಆ ದೀರ್ಘಾವಧಿ ಸಾಲವನ್ನು ಮನ್ನಾ ಮಾಡುವಂತಹ ಪ್ರಯತ್ನವನ್ನು ಮಾನ್ಯ ಸಚಿವರು ಕೈಗೊಂಡಿಲ್ಲ. ಇದ್ದರಿಂದ ಏನಾಗಿದೆಯೆಂದ್ದರೆ, ಸಾಲ ಮನ್ನಾ ಮಾಡುತ್ತೇವೆ ಎನ್ನುವಂತಹ ಒಂದು ಹೇಳಿಕೆ ಮತ್ತು ಪ್ರಣಾಳಿಕೆ ಸರ್ಕಾರದಿಂದ ಹೊರಟಾಗ ಇದುವರೆಗೂ ಕೂಡ ಯಾವುದೇ ರೈತರು *PICARD Banks* ಗಳಿಂದ ಪಡೆದಿರುವಂತಹ ದೀರ್ಘಾವಧಿ ಸಾಲವನ್ನು ಯಾರು ಕೂಡ ಕಟ್ಟುವುದಕ್ಕೆ ಮುಂದೆ ಬಂದಿಲ್ಲ? ನಮ್ಮದು ಕೂಡ ಸಾಲ ಮನ್ನಾ ಆಗುತ್ತದೆ ಎನ್ನುವ ದೃಷ್ಟಿಯಿಂದ *PICARD Banks* ಗಳಿಂದ ಪಡೆದಿರುವಂತಹ ದೀರ್ಘಾವಧಿ ಸಾಲವನ್ನು ಕಟ್ಟಿರುವುದಿಲ್ಲ. ಇವತ್ತಿನ ದಿವಸ ಯಾವುದೇ *KSCARD Banks* ಗಳಲ್ಲಿ ಇದುವರೆಗೂ ಕೂಡ ಒಂದು ರೂಪಾಯಿಯ ಹೊಸ ಲೋನ್‌ನ್ನು ಈ ವರ್ಷದಲ್ಲಿ ಕೊಡುವುದಕ್ಕೆ ಆಗಲಿಲ್ಲ. ಇವತ್ತಿನ ದಿವಸ ಎಲ್ಲಾ *PICARD Banks* ಗಳನ್ನು ಮುಚ್ಚುವಂತಹ ಪರಿಸ್ಥಿತಿ ಬಂದಿದೆ. ಯಾವುದೇ ರೀತಿಯ ಸಾಲದ ವಸೂಲಿ ಇಲ್ಲ. ಆದ್ದರಿಂದ ದಯಮಾಡಿ, ಇವತ್ತಿನ ದಿವಸ ಇಡೀ ರಾಜ್ಯದ *PICARD Banks* ಗಳಲ್ಲಿ ಸುಮಾರು 2,500 ಕೋಟಿ ರೂಪಾಯಿಗಳಷ್ಟು ಸಾಲ ಕೊಟ್ಟಿರುವಂತಹದ್ದು. ಇವತ್ತಿನ ದಿವಸ ವಾಣಿಜ್ಯ ಬ್ಯಾಂಕುಗಳಲ್ಲಿ ಇರುವಂತಹ 45,000 ಕೋಟಿ ರೂಪಾಯಿಗಳ ಸಾಲದಲ್ಲಿ ಪ್ರತಿಯೊಬ್ಬ ರೈತರ ಬೆಳೆ ಸಾಲದ ಗರಿಷ್ಠ ಎರಡು ಲಕ್ಷ ರೂಪಾಯಿಗಳವರೆಗಿನ ಸಾಲವನ್ನು ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಿದ್ದೀರಿ. ಇವತ್ತಿನ ದಿವಸ ಭಾರಿ ಪ್ರಮಾಣದಲ್ಲಿ ವಾಣಿಜ್ಯ ಬ್ಯಾಂಕುಗಳಲ್ಲಿ ಸಾಲ ಪಡೆಯುವಂತಹವರು ಎಲ್ಲರೂ ಕೂಡ ಬಹಳ ಶ್ರೀಮಂತರು ಎಂದು ನಾವು ಭಾವಿಸಿಕೊಂಡಿದ್ದೇವೆ. *PICARD*

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*Banks* ಗಳಲ್ಲಿ ಸಾಲ ಪಡೆದಿರುವಂತಹ ರೈತರು ಅತ್ಯಂತ ಕಡು ಬಡವರು ಮತ್ತು ಆ ಹಣವನ್ನು ಯಾವುದೇ ದುರುಪಯೋಗಪಡಿಸಿಕೊಳ್ಳದೆ ಭೂಮಿ ಅಭಿವೃದ್ಧಿಗೋಸ್ಕರ ಬಳಸುವಂತಹ ಯೋಜನೆಯಾಗಿದೆ. ಸಾಲ ಕೊಡುವಂತಹ ಯೋಜನೆ ಯಾವುದಾದರೂ ಇದೆಯೆಂದರೆ, ಅದು *PICARD Banks* ಗಳಿಂದ ಸಾಲ ಪಡೆಯುವಂತಹದ್ದು. ಅದಕ್ಕೆ ಕಂತುಗಳ ರೂಪದಲ್ಲಿ ಚೆಕ್‌ಗಳನ್ನು ಕೊಡುತ್ತಾರೆ. ಭೂಮಿಯನ್ನು ಹದ ಮಾಡಿದ ಮೇಲಾಗಲಿ, ಪಂಪ್‌ಸೆಟ್ ಹಾಕುವುದಾಗಲಿ, ಟ್ಯಾಂಕರ್ ತೆಗೆದುಕೊಳ್ಳುವುದಕ್ಕೆ ಆಗಲಿ, ಎಲ್ಲೂ ದುರುಪಯೋಗವಾಗದೆ ಇರುವಂತಹ ಹಾಗೆ ಸಾಲವನ್ನು ಕೊಡುವಂತಹದ್ದು *PICARD Banks* ಗಳ ಜವಾಬ್ದಾರಿಯಾಗಿದೆ. ಅದರಿಂದ ತಮ್ಮಲ್ಲಿ ದಯಮಾಡಿ ಕೇಳುತ್ತೇನೆ. *PICARD Banks* ಗಳಿಂದ ರೈತರು ಪಡೆದಿರುವಂತಹ ದೀರ್ಘಾವಧಿ ಸಾಲವನ್ನು ತಾವು ಮನ್ನಾ ಮಾಡಬೇಕು. ಅದರ ಬಗ್ಗೆ ಸರ್ಕಾರದ ನಿಲುವೇನು ಎನ್ನುವಂತಹದ್ದನ್ನು ಸ್ಪಷ್ಟವಾಗಿ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತೇನೆ. ತಮ್ಮ ಅವಧಿಯಲ್ಲಿ ದೊಡ್ಡ ದೊಡ್ಡ ಸಾಧನೆಯನ್ನು ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಉಪಮುಖ್ಯಮಂತ್ರಿಯವರು ತಾವೆಲ್ಲಾ ಮಾಡಿದ್ದೀರಿ. ರೈತರಿಗೆ ಒಂದು ದೊಡ್ಡ ಕೊಡುಗೆಯನ್ನು ಕೊಟ್ಟಿದ್ದೀರಿ. ಆದರೆ ನೈಜವಾಗಿ ಸಾಲ ಪಡೆದಿರುವಂತಹ *PICARD Banks* ಗಳಲ್ಲಿ ದೀರ್ಘಾವಧಿ ಸಾಲವನ್ನು ಮನ್ನಾ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ಎಂದು ಹೇಳಿ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಂಡೆಪ್ಪ ಖಾಶೆಂಪೂರ:–** ಮಾನ್ಯ ಸಭಾಪತಿಯವರೆ, ಗೌರವಾನ್ವಿತ ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಸಮ್ಮಿಶ್ರ ಸರ್ಕಾರ ಬಂದ ಮೇಲೆ ರೈತರು ಸಂಕಷ್ಟದಲ್ಲಿದ್ದಾರೆ. ಅವರಿಗೆ ನೆರವಾಗಬೇಕೆಂಬ ನಿಟ್ಟಿನಲ್ಲಿ ಪ್ರಯತ್ನ ಮಾಡಿದೆವು. ಕಳೆದ ವರ್ಷ ಮಾನ್ಯ ಮುಖ್ಯಮಂತ್ರಿಯವರಾದ ಸಿದ್ಧರಾಮಯ್ಯನವರು 8,165 ಕೋಟಿ ರೂಪಾಯಿಗಳ ರೈತರ ಬೆಳೆ ಸಾಲ ಮನ್ನಾ ಮಾಡಿದರು. ಪ್ರತಿಯೊಬ್ಬರಿಗೆ 50,000 ರೂಪಾಯಿಗಳ ಹಾಗೆ ಸಾಲ ಮನ್ನಾ ಮಾಡಲಾಯಿತು. ಮತ್ತೆ ಅದರ ಜೊತೆ ಜೊತೆಯಲ್ಲಿ ಈ ಸರ್ಕಾರ ಬಂದ ತಕ್ಷಣ ಮಾನ್ಯ ಸದಸ್ಯರು ಹೇಳಿದ ಹಾಗೆ ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಉಪಮುಖ್ಯಮಂತ್ರಿಯವರು, ಎಲ್ಲರೂ ಸೇರಿ ಸಹಕಾರ ಸಂಘಗಳಲ್ಲಿನ ರೂ.1.00 ಲಕ್ಷದವರೆಗೆ ಸುಮಾರು 20.38 ಲಕ್ಷ ರೈತರಿಗೆ ರೂ.9448.61 ಕೋಟಿಗಳ ಸಾಲ ಮನ್ನಾ ಮಾಡಲಾಗಿದೆ. ಹೆಚ್ಚು ಕಡಿಮೆ ರೂ.1.00 ಲಕ್ಷದವರೆಗೆ ಅದು ಸುಸ್ತಿ ಮತ್ತು ಚಾಲ್ತಿ ಇರಬಹುದು, ಅದೇ ರೀತಿ ಈಗಾಗಲೇ ಡಿಸೆಂಬರ್ ತಿಂಗಳ 12ನೇ ತಾರೀಖಿನವರೆಗೆ ಹದಿನೇಳು ಲಕ್ಷದ ಎಂಭತ್ತೈದು ಸಾವಿರ ಆರು ನೂರ ಮೂವತ್ತೆಂಟು ರೈತರು ಕಲಂ 52 ಮಾಹಿತಿಯಡಿ ಸುಮಾರು 14 ಲಕ್ಷ ರೈತರು ಕೊಟ್ಟಿದ್ದಾರೆ. ಇದು ಮೊಟ್ಟ ಮೊದಲನೆ ಬಾರಿಗೆ ಈ ದೇಶದಲ್ಲಿ ಕರ್ನಾಟಕ ಮಾದರಿಯ ಸಾಲ ಮನ್ನಾ ಬೇರೆ ಬೇರೆ ರಾಜ್ಯಗಳಲ್ಲಿ ಯಾವ ರೀತಿ ಮಾಡಬೇಕೆನ್ನುವ ನಿಟ್ಟಿನಲ್ಲಿ ಚರ್ಚೆಯಾಗುತ್ತಿದೆ. ಹಾಗಾಗಿ ಮಾನ್ಯ ಸದಸ್ಯರದ್ದು ಒಂದು ಕಾಳಜಿ ಇದೆ. ಏನೆಂದರೆ *PICARD Banks* ಗಳನ್ನು ನಾವು ಹಿಂದೆ PLD Bank ಗಳೆಂದು ಹೇಳುತ್ತಿದ್ದೆವು. ಭೂ ಅಭಿವೃದ್ಧಿ ಬ್ಯಾಂಕುಗಳಾಗಿ ಬದಲಾವಣೆಯಾಗಿದೆ. ರಾಷ್ಟ್ರೀಕೃತ ಮತ್ತು ಕೋ–

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಪರೇಟಿವ್ ಬ್ಯಾಂಕುಗಳಲ್ಲಿ ಈ ಸಾಲ ಮನ್ನಾ ಯೋಜನೆ ಕೇವಲ ಬೆಳೆ ಸಾಲಕ್ಕೆ ಎಂದು ನಾವು ಘೋಷಣೆ ಮಾಡಿದ್ದೇವೆ. ಆದರೆ *PICARD Banks* ಗಳಲ್ಲಿ medium and long term loan ಇದೆ. ಬೆಳೆ ಸಾಲ ಮೊದಲು ಕೊಡುತ್ತಿದ್ದರು. ಇತ್ತೀಚೆಗೆ ಬೆಳೆ ಸಾಲ ಎಲ್ಲೂ ಕೊಡುತ್ತಿಲ್ಲ. ಏಕೆಂದರೆ ಸಾಲ ಮನ್ನಾ ಎಂದಾಗ ಎಲ್ಲಾ ರೈತರು ಬ್ಯಾಂಕುಗಳಿಗೆ ದುಡ್ಡನ್ನು ಕಟ್ಟುವುದಕ್ಕೆ ಮುಂದೆ ಬರುತ್ತಿಲ್ಲ. ಇದಕ್ಕೆ ಏನಾದರೂ ನೆರವನ್ನು ಕೊಡಿ ಎನ್ನುವ ನಿಟ್ಟಿನಲ್ಲಿ ಕೇಳಿಕೊಂಡಿದ್ದಾರೆ. ಆದರೆ ಮಾನ್ಯ ಮುಖ್ಯಮಂತ್ರಿಯವರು ಈಗಾಗಲೇ ಬಡ್ಡಿ ಏನಿದೆ, ಅದಕ್ಕೆ *calculate* ಮಾಡುವುದಕ್ಕೆ ಹೇಳಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಏನಾದರೂ ಒಂದು *relief* ಕೊಡುತ್ತಾರೆ. ಆದರೆ ಇವತ್ತಿನ ದಿವಸ *medium and long term loan* ಗಳನ್ನು ನಾವು *reschedule* ಮಾಡಬೇಕು. ಏಕೆಂದರೆ ಇಡೀ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಏನಿದೆ, ಅವರಿಗೆ ಎಲ್ಲೇ ನೋಟಿಸ್‌ನ್ನು ಕೊಟ್ಟಿದ್ದರೂ, ನಾನೇ ಅವರಿಗೆ ಸ್ವಯಂ ಫೋನ್ ಮಾಡಿ, ಯಾವುದೇ ರೈತರಿಗೆ ನೋಟಿಸ್ ಕೊಡಬೇಡಿ. ಒಂದು *medium and long term loan* ಗೆ ನೋಟಿಸ್ ಹೋಗಬಾರದು ಎನ್ನುವ ಬಗ್ಗೆ ಕಟ್ಟುನಿಟ್ಟಾಗಿ ಅವರಿಗೆ ಆದೇಶವನ್ನು ಕೊಟ್ಟಿದ್ದೇವೆ. ಹಾಗಾಗಿ ಇವತ್ತಿನ ದಿವಸ *principal amount* ಅನ್ನು ಬಿಟ್ಟು, ಬಡ್ಡಿ ಏನಿದೆ, ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಪರಿಶೀಲನೆ ಮಾಡುತ್ತಿದ್ದಾರೆ. ಅವರೆಲ್ಲರೂ ಸೇರಿ ಈಗಾಗಲೇ ನಮಗೆ ಮತ್ತು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದಾರೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ರೂ.9448.61 ಕೋಟಿಗಳ ಸಾಲ ಮನ್ನಾ ಮಾಡಲಾಗಿದೆ ಎಂದು ಹೇಳಿದ್ದಾರೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ಮಾನ್ಯ ಮರಿತಿಬ್ಬೆಗೌಡರವರು ಮಾತನಾಡುವುದನ್ನು ಮುಗಿಸಲಿ.

**(ಮುಂದುವರೆದಿದೆ...)**

**(462) 14-12-2018 (12-30) ಎಸ್‌ಪಿಆರ್-ಎಂಡಿ**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಭಾರತ ದೇಶದಲ್ಲಿಯೇ ಮೆಚ್ಚುವಂತಹ ದೊಡ್ಡ ಕೆಲಸವನ್ನು ಈ ಸಮ್ಮಿಶ್ರ ಸರ್ಕಾರ ಮಾಡಿದೆ. ದೀರ್ಘಾವಧಿ ಅಥವಾ ಮಧ್ಯಮಾವಧಿ ಸಾಲಗಳಾಗಲೀ ಯಾವುದಕ್ಕೂ ಕೂಡ ರೈತರಿಗೆ ನೋಟೀಸನ್ನು ಕೊಡಬಾರದು ಎಂಬುದಾಗಿ ಮಾನ್ಯ ಸಚಿವರು ಹೇಳಿದ್ದರು. ರೈತರಿಗೆ ನೋಟೀಸ್ ಕೊಡದೇ ಇರುವುದರಿಂದ ಇವತ್ತಿನ ದಿಸವ ರೈತರು ಯಾವುದೇ ರೀತಿಯ ಸಾಲಗಳನ್ನೂ ಸಹ ಮನ್ನಾ ಮಾಡುತ್ತದೆ ಎಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿಳಿದುಕೊಂಡು PICARD (Primary Cooperative Agriculture and Rural Development Bank) ನಿಂದ ಪಡೆದುಕೊಂಡ ಸಾಲವನ್ನು ಒಬ್ಬ ರೈತನೂ ಸಹ ಮರುಪಾವತಿ ಮಾಡಿರುವುದಿಲ್ಲ. ಹೀಗಾಗಿ ಅವರುಗಳಿಗೆ ಯಾರಿಗೂ ಸಹ ಹೊಸ ಸಾಲವನ್ನು ನೀಡುತ್ತಿಲ್ಲ. ಆದ್ದರಿಂದ ಈಗ ಸದರಿ PICARD Bank ಗಳಿಂದ ಪಡೆದುಕೊಂಡ ದೀರ್ಘಾವಧಿ ಸಾಲದ ಮೇಲಿನ ಬಡ್ಡಿಯನ್ನಾದರೂ ಸಹ ಮನ್ನಾ ಮಾಡುವ ಬಗ್ಗೆ ರಾಜ್ಯ ಸರ್ಕಾರ ಹಾಗೂ ಮಾನ್ಯ ಮುಖ್ಯಮಂತ್ರಿಗಳು ಚಿಂತನೆ ಮಾಡುತ್ತಿದ್ದಾರೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಈ ವಿಚಾರದಲ್ಲಿ ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, PICARD Bank ಗಳಿಂದ ಕೇವಲ ಭೂಮಿಯನ್ನು ಹದ ಮಾಡುವುದಕ್ಕಾಗಿ, ಬೆಳೆ ಬೆಳೆಯುವುದಕ್ಕೆ ಪೂರಕವಾಗಿ ರೈತರು ದೀರ್ಘಾವಧಿ ಸಾಲವನ್ನು ಪಡೆದುಕೊಂಡಿದ್ದಾರೆ. ಸದರಿ PICARD Bank ಗಳಲ್ಲಿ ಯಾವುದೇ ರೀತಿಯಾದ ನಕಲಿ ಸಾಲಗಳನ್ನು ಪಡೆದುಕೊಂಡಿಲ್ಲ. ಅಲ್ಲಿ ದೀರ್ಘಾವಧಿ ಸಾಲಗಳನ್ನು ಪಡೆದುಕೊಂಡಿದ್ದಾರೆ. ಒಂದು ಅಂದಾಜಿನ ಪ್ರಕಾರ ಸಾಲದ ಅಸಲು ಮತ್ತು ಬಡ್ಡಿಯನ್ನೊಳಗೊಂಡಂತೆ 2,500 ಕೋಟಿ ರೂಪಾಯಿಗಳಷ್ಟು ಹಣವನ್ನು ಸದರಿ ಬ್ಯಾಂಕುಗಳಿಂದ ಪಡೆದುಕೊಳ್ಳಲಾಗಿದೆ. ದಯಮಾಡಿ ಸರ್ಕಾರ ಸದರಿ ಸಾಲದ ಅಸಲನ್ನೂ ಸಹ ಮನ್ನಾ ಮಾಡಿದರೆ ರೈತರಿಗೆ ಬಹಳ ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ದಯಮಾಡಿ ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪುನರ್ ಪರಿಶೀಲನೆ ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, 9,048 ಕೋಟಿ ರೂಪಾಯಿಗಳಿಗೂ ಅಧಿಕ ಮೊತ್ತದ ಸಾಲವನ್ನು ಮೊದಲನೇ ಹಂತದಲ್ಲಿ ಸರ್ಕಾರವು ಮನ್ನಾ ಮಾಡಿದೆ ಹಾಗೂ ಇದರಿಂದ 20,30,000 ಫಲಾನುಭವಿಗಳಿಗೆ ಅನುಕೂಲವಾಗಿದೆ ಎಂಬುದಾಗಿಯೂ ಸಹ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ 9,048 ಕೋಟಿ ರೂಪಾಯಿಗಳ ಪೈಕಿ ಕೇವಲ 50 ಕೋಟಿ ರೂಪಾಯಿಗಳಿಗೆ ಮಾತ್ರವೇ ಋಣ ಪರಿಹಾರ ಪತ್ರವನ್ನು ನೀಡಲಾಗಿದೆ. ಇನ್ನುಳಿದ ಸಾಲದ ಮೊತ್ತವನ್ನು ಯಾವಾಗ ಮನ್ನಾ ಮಾಡುತ್ತೀರಿ ಹಾಗೂ ಋಣ ಪರಿಹಾರ ಪತ್ರವನ್ನು ಯಾವಾಗ ನೀಡುತ್ತೀರಿ?

**ಶ್ರೀ ಬಂಡೆಪ್ಪ ಖಾಶೆಂಪೂರ:-** ಮಾನ್ಯ ಸಭಾಪತಿಯವರೇ, ಮೊದಲಿಗೆ ಮಾನ್ಯ ಸದಸ್ಯರಿಗೆ ಉತ್ತರ ನೀಡುತ್ತೇನೆ. ಪಿಕಾರ್ಡ್ ಬ್ಯಾಂಕ್‌ಗಳಲ್ಲಿ ಪಡೆದ ರೈತರ ಸಾಲ ಮನ್ನಾ ಆಗದಿರುವ ಬಗ್ಗೆ ಮಾನ್ಯ ಸದಸ್ಯರಿಗೆ ಕಾಳಜಿ ಇದೆ. ಇಡೀ ರಾಜ್ಯದಲ್ಲಿ ನೀಡಲಾದ ದೀರ್ಘಾವಧಿ ಮತ್ತು ಮಧ್ಯಮಾವಧಿ ಸಾಲಗಳ ಅಂಕಿ-ಅಂಶಗಳನ್ನು ತೆಗೆದುಕೊಂಡರೆ, ಎಲ್ಲಾ DCC (District Central Co-operative) Bank, ರಾಷ್ಟ್ರೀಕೃತ ಹಾಗೂ PICARD Bank ಗಳಲ್ಲಿ ಮಧ್ಯಮಾವಧಿ ಸಾಲಗಳನ್ನು ನೀಡಲಾಗಿದೆ. ಆದರೆ, PICARD Bank ಗಳಲ್ಲಿ ನೀಡಿರುವ ಸಾಲಗಳ ಬಗ್ಗೆ ಸ್ವಲ್ಪ ತೊಂದರೆಯಾಗುತ್ತಿದೆ. ಸಾಲ ಮನ್ನಾ ವಿಚಾರವು ಎಲ್ಲಾ ರೈತರಿಗೂ ಸಹ ಅನ್ವಯವಾಗುತ್ತದೆ. ಸದರಿ ಬ್ಯಾಂಕುಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧ್ಯಕ್ಷರು, ನಿರ್ದೇಶಕರುಗಳನ್ನು ಕರೆಸಿ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಮಾತನಾಡಿದ್ದಾರೆ. ಸದರಿ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡ ರೈತರುಗಳಿಗೆ interest relief ನೀಡಿದರೆ, ಅದರಿಂದ ರೈತರಿಗೆ ಸಮಯಾವಕಾಶ ದೊರೆತು ಅನುಕೂಲವಾಗುತ್ತದೆ ಹಾಗೂ ಬಡ್ಡಿಯ ಹೊರೆಯೂ ಸಹ ಅವರ ಮೇಲೆ ಬೀಳುವುದಿಲ್ಲ. ಬರಗಾಲದ ಪರಿಸ್ಥಿತಿ ಸ್ವಲ್ಪ ಸುಧಾರಣೆಯಾದ ಮೇಲೆ ಸದರಿ ವ್ಯವಸ್ಥೆಯನ್ನು ಪುನಃ ಪ್ರಾರಂಭಿಸುವ ನಂಬಿಕೆ ನಮಗೆ ಇದೆ. ಇದನ್ನು ಶೀಘ್ರದಲ್ಲಿಯೇ ಮಾಡಲಾಗುವುದು. ವಿಧಾನಸಭೆಯಲ್ಲಿ ನಿಯಮ 69 ರಡಿ ಇದೇ ವಿಷಯವಾಗಿ ಚರ್ಚೆ ಮಾಡಲಾಗಿದೆ. ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿನ ಬೆಳಕನ್ನು ಚೆಲ್ಲುತ್ತಾರೆ.

ಮಾನ್ಯ ವಿರೋಧ ಪಕ್ಷದ ನಾಯಕರು ಕೇವಲ 50 ಕೋಟಿ ರೂಪಾಯಿಗಳಿಗೆ ಮಾತ್ರವೇ ಋಣ ಪರಿಹಾರ ಪತ್ರವನ್ನು ನೀಡಲಾಗಿದೆ ಎಂಬುದಾಗಿ ಹೇಳಿದ್ದಾರೆ. ಹಿಂದಿನ ಸರ್ಕಾರದ ಆಡಳಿತಾಧಿಯಲ್ಲಿ ಸಹಕಾರಿ ಬ್ಯಾಂಕುಗಳಿಗೆ 5,000 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರ ಆಡಳಿತಕ್ಕೆ ಬಂದ ನಂತರ 3,000 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಈಗ ನವೆಂಬರ್ ತಿಂಗಳವರೆಗೆ 1,322 ಕೋಟಿ ರೂಪಾಯಿಗಳಷ್ಟು ಮೊತ್ತದ ಬಿಲ್ಲನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ. ಆ ಪೈಕಿ 800 ಕೋಟಿ ರೂಪಾಯಿಗಳಷ್ಟು ಹಣ ಈಗಾಗಲೇ ಬಿಡುಗಡೆಗೊಂಡು ಅಪೆಕ್ಸ್ ಬ್ಯಾಂಕ್‌ಗೆ ಬಂದಿದೆ. ಮಾನ್ಯ ಸದಸ್ಯರು ಹೇಳಿದಂತೆ ಅದು ಕೇವಲ 50 ಕೋಟಿ ರೂಪಾಯಿಗಳಷ್ಟು ಮೊತ್ತವಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, 50 ಕೋಟಿ ರೂಪಾಯಿಗಳಿಗೆ ಮಾತ್ರವೇ ಋಣ ಪರಿಹಾರ ಪತ್ರಗಳನ್ನು ನೀಡಲಾಗಿದೆ.

**ಶ್ರೀ ಬಂಡೆಪ್ಪ ಖಾಶೆಂಪೂರ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ನಾನು ಹೇಳುವುದನ್ನು ಸ್ವಲ್ಪ ಸಮಾಧಾನವಾಗಿ ಕೇಳಲಿ. ಇಡೀ ದೇಶದಲ್ಲಿ ಕಳೆದ ಎರಡು ದಿನಗಳಿಂದ ಪತ್ರಿಕೆಗಳಲ್ಲಿ ಇದೇ ವಿಷಯದ ಬಗ್ಗೆ ವರದಿಯಾಗುತ್ತಿದೆ. ನಮ್ಮ ರಾಜ್ಯದಲ್ಲಿ ತೆಗೆದಕೊಂಡ ಕ್ರಮಗಳು ಇಡೀ ದೇಶಕ್ಕೆ ಮಾದರಿಯಾಗಿದೆ. ನಾವು ರೈತರ ಸಾಲ ಮನ್ನಾ ವಿಚಾರದಲ್ಲಿ ತೆಗೆದುಕೊಂಡ ಕ್ರಮಗಳನ್ನು ಕೇಂದ್ರ ಸರ್ಕಾರವು ಏಕೆ ತೆಗೆದುಕೊಳ್ಳಬಾರದು ಎಂಬುದರ ಬಗ್ಗೆ ಚರ್ಚೆಯಾಗುತ್ತಿದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ಬಗ್ಗೆ ಮಾನ್ಯ ಮಂತ್ರಿಗಳು ನಂತರದಲ್ಲಿ ಮಾತನಾಡಲಿ. 9,048 ಕೋಟಿ ರೂಪಾಯಿಗಳಷ್ಟು ಸಾಲವನ್ನು ರಾಜ್ಯ ಸರ್ಕಾರವು ಮನ್ನಾ ಮಾಡುತ್ತದೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಸ್ವಲ್ಪ ತಾಳ್ಮೆಯಿಂದ ಕೇಳಲಿ. ಅವರು ತಾಳ್ಮೆಯನ್ನು ಕಳೆದುಕೊಂಡರೆ ಹೇಗೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆದರೆ ಕೇವಲ 50 ಕೋಟಿ ರೂಪಾಯಿಗಳಿಗೆ ಋಣ ಪರಿಹಾರ ಪತ್ರಗಳನ್ನು ನೀಡಲಾಗಿದೆ.

**(ಗೊಂದಲ)**

**ಶ್ರೀ ಎಂ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ. ಪಕ್ಷವು ಅಧಿಕಾರದಲ್ಲಿರುವ ಯಾವ ರಾಜ್ಯಗಳಲ್ಲಿ ರೈತರ ಸಾಲ ಮನ್ನಾ ಮಾಡಿದ್ದಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಕೇವಲ ಅಂಕಿ–ಅಂಶಗಳ ಮಾಹಿತಿಯನ್ನು ಕೇಳಿದ್ದೇನೆ. ಆದರೆ ಮಾನ್ಯ ಮಂತ್ರಿಗಳು ಇಡೀ ದೇಶದ ಮಾಹಿತಿಯನ್ನು ನೀಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಬಂಡೆಪ್ಪ ಖಾಶೆಂಪೂರ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ನಾವು ಹೇಳಿರುವ ವಿಚಾರವನ್ನು ಸ್ವಾಗತಿಸಲಿ.

**(ಗೊಂದಲ)**

**ಶ್ರೀ ಎಂ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ದೇಶದ ಎಷ್ಟು ರಾಜ್ಯದಲ್ಲಿ ಬಿ.ಜೆ.ಪಿ. ಪಕ್ಷವು ಅಧಿಕಾರದಲ್ಲಿದೆ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಶ್ನೆಯನ್ನು ಕೇಳಿದ್ದಾರೆ; ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರೇ ಸ್ವಲ್ಪ ತಾಳ್ಮೆಯಿಂದ ಮಂತ್ರಿಗಳು ನೀಡುವ ಉತ್ತರವನ್ನು ಕೇಳಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಬಿ.ಜೆ.ಪಿ. ಪಕ್ಷದಿಂದ ಆಯ್ಕೆಗೊಂಡ ಸಂಸದರುಗಳಿಂದ ಕೇಂದ್ರ ಸರ್ಕಾರದಿಂದ ಕೇವಲ ಐದು ರೂಪಾಯಿಗಳಷ್ಟು ಸಾಲ ಮನ್ನಾ ಮಾಡಿಸುವುದಕ್ಕಾಗಲಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಮಗೆ ಯಾವುದೇ ರೀತಿಯಾದ ಗೊಂದಲಗಳಿಲ್ಲ.

**(ಗೊಂದಲ)**

**ಶ್ರೀ ಎಂ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ. ಪಕ್ಷದಿಂದ ಆಯ್ಕೆಯಾದ 17 ಸಂಸದರುಗಳು ಕೇವಲ ಒಂದು ರೂಪಾಯಿಗಳಷ್ಟು ಸಾಲ ಮನ್ನಾ ಮಾಡಿಸುವುದಕ್ಕಾಗಲಿಲ್ಲ. ನಮ್ಮ ಪಕ್ಷದ ಸರ್ಕಾರವು ಅಷ್ಟು ಕೆಲಸವನ್ನಾದರೂ ಸರಿ ಮಾಡಿದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಿಮ್ಮ ಸರ್ಕಾರದ ಬಗ್ಗೆ ನಾವು ಯಾವುದೇ ಟೀಕೆ–ಟಿಪ್ಪಣಿಗಳನ್ನು ಮಾಡಿಲ್ಲ. ತಾಳ್ಮೆಯಿಂದ ಹಾಗೂ ಬಹಳ ಪ್ರೀತಿಯಿಂದ ಮಾನ್ಯ ಮಂತ್ರಿಗಳು ನೀಡುತ್ತಿರುವ ಉತ್ತರವನ್ನು ನಾವು ಕೇಳುತ್ತಿದ್ದೇವೆ. ಕೇವಲ 50 ಕೋಟಿ ರೂಪಾಯಿಗಳಿಗೆ ಮಾತ್ರವೇ ಋಣ ಪರಿಹಾರ ಪತ್ರವನ್ನು ನೀಡಿದ್ದೀರಿ. ಈ ಬಗ್ಗೆ ಮಾತ್ರ ನಾವು ಕೇಳುತ್ತಿದ್ದೇವೆ. ಆದರೆ 9,048 ಕೋಟಿ ರೂಪಾಯಿಗಳಿಗೆ ಋಣ ಪರಿಹಾರ ಪತ್ರಗಳನ್ನು ಯಾವಾಗ ನೀಡುತ್ತೀರಿ ಎಂಬುದಷ್ಟೇ ನಮ್ಮ ಪ್ರಶ್ನೆ.

**ಶ್ರೀ ಬಂಡೆಪ್ಪ ಖಾಶೆಂಪೂರ:–** ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ನಾನು ಹೇಳಲಿಚ್ಛಿಸುವುದೇನೆಂದರೆ, ನಮ್ಮ ಸಹಕಾರ ಇಲಾಖೆಯಲ್ಲಿ ರಾಜ್ಯದ 20,38,000 ರೈತರು ಸಾಲ ಮನ್ನಾಗೆ ಅರ್ಹರಿದ್ದಾರೆ ಎಂಬ ಪಟ್ಟಿ ಇದೆ. ಇದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ತೆಗೆದುಕೊಂಡು ಅದನ್ನು upload ಮಾಡುವಂತಹ ಕೆಲಸವನ್ನು ನಾವು ಈಗ ಮಾಡುತ್ತಿದ್ದೇವೆ. ಅರ್ಹರಿರುವ ಎಲ್ಲಾ ರೈತರಿಗೆ ಈ ವರ್ಷ ಜುಲೈ ಮಾಹೆಯವರೆಗೆ ಹಂತ ಹಂತವಾಗಿ ಅಂದರೆ ಮಾಸಿಕವಾಗಿ 9,448 ಕೋಟಿ ರೂಪಾಯಿಗಳಷ್ಟು ಸಾಲ ಮನ್ನಾ ಮಾಡಲಾಗಿದೆ. ನವೆಂಬರ್–2018 ರ ವರೆಗೆ 1,322 ಕೋಟಿ ರೂಪಾಯಿಗಳ ಪೈಕಿ 800 ಕೋಟಿ ರೂಪಾಯಿಗಳಷ್ಟು ಹಣವು ಆರ್ಥಿಕ ಇಲಾಖೆಯಿಂದ ನಮ್ಮ ಬ್ಯಾಂಕುಗಳಿಗೆ ಬಂದಿದೆ. ಇದರಲ್ಲಿ ಯಾವುದೇ ಆತಂಕ ಬೇಡ. ನಮ್ಮ ರಾಜ್ಯದ ಸಹಕಾರಿ ಬ್ಯಾಂಕ್‌ಗಳಲ್ಲಿ ಸಾಲ ಪಡೆದ 20,38,000 ರೈತರುಗಳಿಗೆ ಋಣ ಪರಿಹಾರ ಪತ್ರಗಳನ್ನು ನೀಡಲಾಗುವುದು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಋಣ ಪರಿಹಾರ ಪತ್ರಗಳನ್ನು ಯಾವಾಗ ನೀಡುತ್ತೀರಿ? **(ಗೊಂದಲ)** ಈ ವಿಚಾರದಲ್ಲಿ ನಮಗೆ ಯಾವುದೇ ರೀತಿಯಾದ ಗೊಂದಲಗಳಿಲ್ಲ. ಆದರೆ ಯಾವಾಗ ಕೊಡುತ್ತೀರಿ ಎಂಬುದನ್ನು ಸರ್ಕಾರವು ಹೇಳಲಿ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ. ಪಕ್ಷವು ಈ ಹಿಂದೆ ರಾಜ್ಯದಲ್ಲಿ ಅಧಿಕಾರದಲ್ಲಿದ್ದಾಗ, ರೈತರ ಸಾಲ ಮನ್ನಾ ಮಾಡಿ ಎಂದು ನಾವು ಕೇಳಿದಾಗ, ಅಂದಿನ ಮಾನ್ಯ ಮುಖ್ಯಮಂತ್ರಿಗಳು ತಮ್ಮಲ್ಲಿ ನೋಟುಗಳನ್ನು ಮುದ್ರಣ ಮಾಡುವ ಯಂತ್ರ ಇಲ್ಲ ಹಾಗೂ ರೈತರ ಸಾಲ ಮನ್ನಾ ಮಾಡುವುದಕ್ಕೆ ಬರುವುದಿಲ್ಲ ಎಂಬುದಾಗಿ ಹೇಳಿದ್ದರು. ಆದರೆ ಈಗ ವಿರೋಧ ಪಕ್ಷದ ಸದಸ್ಯರುಗಳು ಇಷ್ಟೊಂದು ಕೂಗಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಸದಸ್ಯರುಗಳಿಗೆ ಸರ್ಕಾರವು ನೀಡುವ ಉತ್ತರವನ್ನು ಕೇಳುವಷ್ಟು ತಾಳ್ಮೆ ಇಲ್ಲ ಎಂದಾದರೆ ಹೇಗೆ?

**(ಗೊಂದಲ)**

**ಶ್ರೀ ಬಂಡೆಪ್ಪ ಖಾಶೆಂಪೂರ:–** ಮಾನ್ಯ ಸಭಾಪತಿಯವರೇ, ಋಣ ಪರಿಹಾರ ಪತ್ರಗಳನ್ನು ಸರ್ಕಾರ ಯಾವಾಗ ಕೊಡುತ್ತದೆ ಎಂಬುದಾಗಿ ವಿರೋಧ ಪಕ್ಷದ ನಾಯಕರು ಕೇಳುತ್ತಿದ್ದಾರೆ. ಅದಕ್ಕೆ ನಾನು ಉತ್ತರವನ್ನು ನೀಡುತ್ತೇನೆ. ಇದನ್ನು ಮಾಸಿಕವಾಗಿ ಹಂತ ಹಂತವಾಗಿ ನೀಡಲಾಗುವುದು.

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಸದಸ್ಯರು ಋಣ ಪರಿಹಾರ ಪತ್ರಗಳನ್ನು ಸರ್ಕಾರ ಯಾವಾಗ ಕೊಡುತ್ತದೆ ಎಂದು ಕೇವಲ ನಮ್ಮನ್ನು ಮಾತ್ರವೇ ಕೇಳುತ್ತಿದ್ದಾರೆ. ಆದರೆ ನಿಜವಾಗಿಯೂ ಸಹ ಅವರಿಗೆ ರೈತರ ಬಗ್ಗೆ ಬಹಳ ಕಾಳಜಿ ಇದ್ದರೆ, ಕಳೆದ ನಾಲ್ಕೂವರೆ ವರ್ಷಗಳಿಂದ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಇವರ ಪಕ್ಷವು ರೈತರ ಸಾಲ ಮನ್ನಾ ವಿಚಾರದಲ್ಲಿ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಲಿ. **(ಗೊಂದಲ)** ಕೇವಲ ಇಲ್ಲಿ ಮಾತ್ರವೇ ಮಾತನಾಡುತ್ತಾರೆ ಹೊರತು ಅವರ ಪಕ್ಷವು ಕೇಂದ್ರದಲ್ಲಿ ಅಧಿಕಾರದಲ್ಲಿದ್ದು ಕೇವಲ ಒಂದು ರೂಪಾಯಿಯಷ್ಟೂ ಸಹ ಸಾಲ ಮನ್ನಾ ಮಾಡಿಲ್ಲ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**(ಗೊಂದಲ)**

**ಶ್ರೀ ವೆಂಕಟರಮಣಪ್ಪ(ಕಾರ್ಮಿಕ ಸಚಿವರು):–** ಮಾನ್ಯ ಮಂತ್ರಿಗಳಿಗೆ ಉತ್ತರ ಕೊಡಲು ಅವಕಾಶವನ್ನು ನೀಡಿ.

**(ಗೊಂದಲ)**

**ಶ್ರೀ ಬಂಡೆಪ್ಪ ಖಾಶೆಂಪೂರ:–** ಮಾನ್ಯ ಸಭಾಪತಿಯವರೇ, ಉತ್ತರ ನೀಡಲು ನನಗೆ ಅವಕಾಶ ನೀಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಚರ್ಚೆಯನ್ನು ಮಾಡೋಣ.

**(ಗೊಂದಲ)**

**ಶ್ರೀ ಬಂಡೆಪ್ಪ ಖಾಶೆಂಪೂರ:–** ಮಾನ್ಯ ಸಭಾಪತಿಯವರೇ, ನಾನು ವಿರೋಧ ಪಕ್ಷದ ನಾಯಕರಿಗೆ ಹೇಳ ಬಯಸುವುದೇನೆಂದರೆ, ಇದೇ ರೀತಿಯ ಪರಿಸ್ಥಿತಿ ಇದ್ದಾಗ, ಈ ಹಿಂದೆ ಅಧಿಕಾರದಲ್ಲಿದ್ದ ಶ್ರೀ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರವು 8,165 ಕೋಟಿ ರೂಪಾಯಿಗಳಷ್ಟು ರೈತರ ಸಾಲ ಮನ್ನಾ ಮಾಡಿದೆ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಆ ಸಂದರ್ಭದಲ್ಲಿ ಯಾವುದೇ ರೀತಿಯಾದ ಷರತ್ತುಗಳಿರಲಿಲ್ಲ.

**(ಗೊಂದಲ)**

**ಶ್ರೀ ಬಂಡೆಪ್ಪ ಖಾಶೆಂಪೂರ:–** ಮಾನ್ಯ ಸಭಾಪತಿಯವರೆ, ನಾನು ಹೇಳುವ ಮಾತನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಕೇಳಬೇಕು.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡರು:–** ಮಾನ್ಯ ಸಭಾಪತಿಯವರೆ, ರೈತರ ಸಾಲ ಮನ್ನಾ ಮಾಡಲು ಒಂದು ರೀತಿ–ನೀತಿ ಇದೆ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಯಾವುದೇ ರೀತಿಯಾದ ಷರತ್ತನ್ನು ವಿಧಿಸಿರಲಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಆಡಳಿತ ಪಕ್ಷದ ಸದಸ್ಯರುಗಳು ಏಕೆ ಗಲಾಟೆ ಮಾಡುತ್ತಿದ್ದಾರೆ? **(ಗೊಂದಲ)** ಮಂತ್ರಿಗಳು ಉತ್ತರ ನೀಡುವಷ್ಟು ಸಮರ್ಥರಿದ್ದಾರೆ ಹಾಗೂ ಅವರ ಮೇಲೆ ನಮಗೆ ವಿಶ್ವಾಸವಿದೆ. ಹೀಗಾಗಿ ಅವರು ನಮಗೆ ಉತ್ತರವನ್ನು ಕೊಡುತ್ತಾರೆ. ಮಂತ್ರಿಗಳು ತಮ್ಮ ಪಕ್ಷದ ಸದಸ್ಯರುಗಳಿಗೆ ಸ್ವಲ್ಪ ತಿಳಿ ಹೇಳಲಿ. ಮಂತ್ರಿಗಳ ಸಾಮರ್ಥ್ಯದ ಬಗ್ಗೆ ಅವರ ಪಕ್ಷದ ಸದಸ್ಯರುಗಳಿಗೆ ಅಪನಂಬಿಕೆ ಇದೆ. ಮಂತ್ರಿಗಳ ಸಮರ್ಥತೆಯ ಬಗ್ಗೆ ಆಡಳಿತ ಪಕ್ಷದ ಸದಸ್ಯರುಗಳಿಗೆ ಗೊಂದಲವಿದೆ. ನಮಗೆ ಯಾವುದೇ ಗೊಂದಲವಿಲ್ಲ. ನಾವು ಅತ್ಯಂತ ಕಾಳಜಿಯಿಂದ ಸರಿಯಾದ ಪ್ರಶ್ನೆಯನ್ನು ಕೇಳಿದ್ದೇವೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ನೀಡುತ್ತಿದ್ದಾರೆ. ಆದರೆ ಆಡಳಿತ ಪಕ್ಷದ ಸದಸ್ಯರುಗಳು ಏಕೆ ಗಲಾಟೆ ಮಾಡುತ್ತಿದ್ದಾರೆ ನನಗೆ ಗೊತ್ತಾಗುತ್ತಿಲ್ಲ. **(ಗೊಂದಲ)** ಪ್ರಶ್ನೆ ಕೇಳುವುದು ನಮ್ಮ ಹಕ್ಕು ಹೀಗಾಗಿ ನಾವು ಪ್ರಶ್ನೆಯನ್ನು ಕೇಳುತ್ತಿದ್ದೇವೆ. ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆಂಬ ವಿಶ್ವಾಸ ನಮಗೆ ಇದೆ. ಆಡಳಿತ ಪಕ್ಷದ ಸದಸ್ಯರುಗಳಿಗೆ ಅಪನಂಬಿಕೆ ಇದ್ದರೆ ಗಲಾಟೆಯನ್ನು ಮಾಡಲಿ. ನಮಗೆ ಯಾವುದೇ ರೀತಿಯಾದ ಗೊಂದಲವಿಲ್ಲ.

**(ಮುಂದುವರೆದಿದೆ...)**

(463) 14-12-2018 (12-40) ಎಲ್‌ಎಂ/ಎಂಡಿ

**ಶ್ರೀ ಬಂಡೆಪ್ಪ ಖಾಶೆಂಪೂರ:-** ಮಾನ್ಯ ಸಭಾಪತಿಗಳೇ, ಕಳೆದ ಬಾರಿ ಸಾಲ ಮನ್ನಾ ಮಾಡಿದಾಗ Commercial Bank ಗಳಿಂದ ಪಡೆದ ರೈತರ ಸಾಲ ಮನ್ನಾ ಆಗಿರಲಿಲ್ಲ. ಕೇವಲ ಸಹಕಾರಿ ಬ್ಯಾಂಕ್‌ಗಳಿಂದ ಪಡೆದ ರೈತರ ಸಾಲ ಮನ್ನಾ ಮಾತ್ರ ಆಗಿತ್ತು. ಸಾಲ ಮನ್ನಾ ಯೋಜನೆ ಎಲ್ಲ ರೈತರಿಗೂ ಮುಟ್ಟಬೇಕು ಎಂದು ಮಾನ್ಯ ವಿರೋಧ ಪಕ್ಷದ ನಾಯಕರಿಂದ ಹಿಡಿದು ಎಲ್ಲ ಸದಸ್ಯರು ಹೇಳುತ್ತಿದ್ದಾರೆ. ಈ ಸರ್ಕಾರದ ಕಾಳಜಿ ಕೂಡಾ ಅದೇ ಆಗಿದೆ. ಯಾವುದೆ condition ಇಲ್ಲ, ಮಾಹಿತಿಗಾಗಿ ತಮಗೆ ಹೇಳುತ್ತೇನೆ. ಇಷ್ಟೆ ವಿನ: ದೊಡ್ಡ condition ಹಾಕಿ ಯಾವುದೆ ದಾಖಲೆಗಳನ್ನು ಕೊಡುವುದಿಲ್ಲ ಎನ್ನುವ ರೀತಿಯಲ್ಲಿ ಹೇಳಿರುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಯಾವಾಗ ಕೊಡುತ್ತೀರಿ ಎಂದು ಕೇಳಿದ್ದಾರೆ. ಪ್ರತಿ ತಿಂಗಳ ಸಂಪೂರ್ಣ ಮಾಹಿತಿ ನಮ್ಮ ಹತ್ತಿರ ಇದೆ. 9448 ಕೋಟಿ ರೂಪಾಯಿಗಳ ಸಾಲ ಮನ್ನಾವನ್ನು ಸಂಪೂರ್ಣವಾಗಿ ಮಾಡುತ್ತೇವೆ. ಋಣಮುಕ್ತ ಪತ್ರವನ್ನು ಇನ್ನು ಒಂದು ತಿಂಗಳಲ್ಲಿ ಕೊಡುತ್ತೇವೆ. 20,38.000 ರೂಪಾಯಿಗಳನ್ನು ಸರ್ಕಾರ ಕೊಡುತ್ತದೆ. 22 ಲಕ್ಷ ರೂ.ಗಳನ್ನು ವಾಣಿಜ್ಯ ಬ್ಯಾಂಕ್‌ಗಳು ನೀಡುತ್ತವೆ. ಅದಕ್ಕಾಗಿ ಮಾನ್ಯ ಸದಸ್ಯರು ಯಾವುದೇ ಕಾಳಜಿ ಮಾಡಬಾರದು.

**ಸಭಾಪತಿಯವರು:-** ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಕ್ತಾಯವಾಯಿತು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಡಾ: ಜಯಮಾಲ (ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ದಿನಾಂಕ:14–12–2018ರ ಸಮೂಹ–Vರ ಲಿಖಿತ ಮೂಲಕ ಉತ್ತರಿಸುವ ಒಟ್ಟು 130 ಪ್ರಶ್ನೆಗಳ ಪೈಕಿ 89 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**ಡಾ: ವೈ.ಎ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಗಳೆ, ನಾಲ್ಕು ದಿನಗಳಿಂದ ಒಟ್ಟು 509 ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಸರ್ಕಾರ ಉತ್ತರ ಕೊಡಬೇಕಾಗಿತ್ತು. ಆದರೆ ಆ ಪೈಕಿ 300 ಪ್ರಶ್ನೆಗಳಿಗೆ ಮಾತ್ರ ಉತ್ತರ ಕೊಟ್ಟಿದ್ದಾರೆ. ಉಳಿದ 200 ಪ್ರಶ್ನೆಗಳನ್ನು ನಾವು ಏಕೆ ಹಾಕಿದ್ದೇವೆ. ಉತ್ತರ ಕೊಡಲು ಸರ್ಕಾರಕ್ಕೆ ಏನು ತೊಂದರೆ? ನಿನ್ನೆ ನಾನು ಹಾಕಿರುವ 4 ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಮಾತ್ರ ಉತ್ತರವನ್ನು ಕೊಟ್ಟಿದ್ದಾರೆ. ನಮಗೆ ಬೇರೆ ಏನು ಕೆಲಸ ಇಲ್ಲದೆ ಪ್ರಶ್ನೆಗಳನ್ನು ಹಾಕುತ್ತಿದ್ದೇವೆಯೇ? 509 ಪ್ರಶ್ನೆಗಳ ಪೈಕಿ 300 ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟರೆ ನಾವು ಏಕೆ ಪ್ರಶ್ನೆ ಹಾಕಬೇಕು? ನಾವು ಪ್ರಶ್ನೆಗಳನ್ನು ಹಾಕಬೇಕೆ ಬೇಡವೆ?

**ಸಭಾಪತಿಯವರು:–** ಸಭಾನಾಯಕರೆ ಉತ್ತರವನ್ನು ಹೇಳಿ.

**ಡಾ: ಜಯಮಾಲ (ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಉತ್ತರಗಳನ್ನು ಒದಗಿಸಿ ಕೊಡುತ್ತೇವೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಗಳೆ, ಚುಕ್ಕೆ ಗುರುತಿನ ಪ್ರಶ್ನೆಗಳನ್ನು ಹಾಕುವುದು ನಮ್ಮ ಹಕ್ಕು. ನಮ್ಮ ಚುಕ್ಕೆ ಗುರುತಿನ ಪ್ರಶ್ನೆಗಳು ಬರುತ್ತಲೇ ಇಲ್ಲ ಎಂದರೆ ಏನು ಅರ್ಥ?

**ಸಭಾಪತಿಯವರು:–** ಪ್ರಶ್ನೆಗಳು ಬರುವುದು ballot ಮೂಲಕ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಗಳೆ, ಮಂಗಳವಾರ ಸಣ್ಣ ನೀರಾವರಿ ಇಲಾಖೆ ಬಗ್ಗೆ ಪ್ರಶ್ನೆ ಇತ್ತು, ಅದನ್ನು ಶುಕ್ರವಾರ ಕೊಡುತ್ತೇವೆ ಎಂದು ನಿಮ್ಮ ಕಾರ್ಯದರ್ಶಿಗಳು ಹೇಳಿದ್ದರು. ಆದರೆ ಇವತ್ತು ಬಂದಿಲ್ಲ. ದಯಮಾಡಿ ಇದರ ಬಗ್ಗೆ ಹೇಳಿ. ವರ್ಗಾವಣೆಯಾಗಿರುವ ಪ್ರಶ್ನೆ ಅದು ಇದು ಕೊಡುತ್ತೇವೆ ಎಂದು ಹೇಳಿದರು.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:-** ವರ್ಗಾವಣೆಯಾಗಿರುವ ಪ್ರಶ್ನೆಯಾಗಿರುವುದರಿಂದ ಸಂಬಂಧಪಟ್ಟ ಇಲಾಖೆಯಿಂದ ಉತ್ತರ ಬಂದ ತಕ್ಷಣ ಕೊಡಲಾಗುತ್ತದೆ.

**ಶ್ರೀ ಪಿ.ಆರ್.ರಮೇಶ್:-** ಯಾವಾಗ ಬರುತ್ತದೆ, ಕಳೆದ ಬಾರಿಯ ಅಧಿವೇಶನದಲ್ಲಿಯು ನನ್ನ 7 ಪ್ರಶ್ನೆಗಳಿಗೆ ಉತ್ತರ ಬರಲಿಲ್ಲ. ನೀವು ಅವಕಾಶ ಕೊಡುತ್ತೀರಿ ಎನ್ನುವ ಆಶ್ವಾಸನೆಯಿಂದ ನಾವು ಸುಮ್ಮನೆ ಇರುತ್ತೇವೆ.

**ಸಭಾಪತಿಯವರು:-** ಆ ಸಮೂಹದ ಪ್ರಶ್ನೆಗಳು ಬಂದಾಗ ಉತ್ತರ ಕೊಡಲಾಗುತ್ತದೆ. ಯಾವಾಗ ಬರುತ್ತದೆ ಎನ್ನುವುದನ್ನು ಈಗಲೇ ಈ ಸದನದಲ್ಲಿ ಹೇಳಲು ಆಗುವುದಿಲ್ಲ. ನೀವು ಕಛೇರಿಗೆ ಹೋಗಿ ಏನು ಆಗಿದೆ, ಎಲ್ಲಿಗೆ ವರ್ಗಾವಣೆಯಾಗಿದೆ ಎನ್ನುವುದನ್ನು ನೋಡಬೇಕು.

**ಶ್ರೀ ಪಿ.ಆರ್.ರಮೇಶ್:-** ಯಾವಾಗ ನನ್ನ ಪ್ರಶ್ನೆ ಬರುತ್ತದೆ, ಅದನ್ನು ಹೇಳಿ.

**ಸಭಾಪತಿಯವರು:-** ನೀವು bulletin ನೋಡಿ.

**<u>3. ಸಭಾಪತಿಗಳ ಅನುಮತಿಯ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು</u>**

**ಅ) ವಿಷಯ: ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ನಡೆದ ಹಗರಣಗಳ ಕುರಿತು.**

\- - - -

**ಶ್ರೀ ರವಿಕುಮಾರ್ ಎನ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ರಾಜ್ಯದ ವಿಶ್ವವಿದ್ಯಾನಿಲಯಗಳು ಜ್ಞಾನಾರ್ಜನೆಯ ಕೇಂದ್ರಗಳಾಗುತ್ತಿರುವುದರ ಬದಲು ಹಗರಣಗಳ ಕೇಂದ್ರಗಳಾಗುತ್ತಿರುವುದು ವಿಷಾದನೀಯ. ವಿಶ್ವವಿದ್ಯಾನಿಲಯಗಳಲ್ಲಿ ನಡೆದಿರಬಹುದಾದ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಅವ್ಯವಹಾರದ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸಲು ಹಲವಾರು ಸಮಿತಿಗಳನ್ನು ರಚಿಸಿ ಈ ಕುರಿತ ವರದಿಯನ್ನು ಪಡೆದ ಬಳಿಕ ಸಂಬಂಧಿತ ಆರೋಪಿ ಕುಲಪತಿಗಳ ಮೇಲೆ ಯಾವುದೇ ಶಿಸ್ತು ಕ್ರಮ, ಕಾನೂನು ಕ್ರಮಗಳು ಜಾರಿಗೆ ಬರುತ್ತಿಲ್ಲ. ಇದು ತದನಂತರದ ದಿನಗಳಲ್ಲಿ ಕುಲಪತಿಗಳಾಗಿ ನೇಮಕ ಹೊಂದಿದವರಿಗೆ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಅವ್ಯವಹಾರಗಳನ್ನು ನಡೆಸಲು ಪ್ರೋತ್ಸಾಹ ನೀಡದಂತಾಗಿದೆ. ಕುಲಪತಿಗಳ ಮೇಲಿನ ಆರೋಪ ಸಾಬೀತಾಗುವಂತಹ ವರದಿಗಳಿದ್ದಲ್ಲಿ ಅಂತಹ ಕುಲಪತಿಗಳ ಮೇಲೆ ಪ್ರಕರಣ ದಾಖಲಿಸಿ ಕಾನೂನು ಕ್ರಮ ತೆಗೆದುಕೊಳ್ಳುವುದು ಅಗತ್ಯ.

1) ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇಲ್ಲಿ ಡಾ: ಸಯೀದಾ ಅಖ್ತರ್ ಇವರು ಕುಲಪತಿಗಳಾಗಿದ್ದಾಗ ನಡೆದ ನೇಮಕಾತಿ ಮತ್ತು ಕಳಪೆ ಕಾಮಗಾರಿಗಳ ಕುರಿತ ವರದಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2) ತೋಟಗಾರಿಕೆ ವಿಶ್ವವಿದ್ಯಾನಿಲಯ, ಬಾಗಲಕೋಟೆ ಇಲ್ಲಿ ಪ್ರೊ. ಡಿ.ಎಲ್.ಮಹೇಶ್ವರ್ ಇವರು ಕುಲಪತಿಗಳಾಗಿದ್ದಾಗ ಅಕ್ರಮ ನೇಮಕಾತಿ ಆರೋಪ ಕುರಿತ ತನಿಖಾ ವರದಿ.

3) ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿ ಡಾ:ಡಿ.ಪಿ.ಬಿರಾದರ ಕುಲಪತಿಯಾಗಿದ್ದಾಗ ಅಕ್ರಮ ನೇಮಕಾತಿ ಆರೋಪ ಕುರಿತ ತನಿಖಾ ವರದಿ.

4) ಕರ್ನಾಟಕ ವಿಶ್ವವಿದ್ಯಾಲಯ, ಇಲ್ಲಿ ಪ್ರೊ:ಡಾ:ಎಚ್.ವಿ.ವಾಲಿಕಾರ ಇವರು ಕುಲಪತಿಗಳಾಗಿದ್ದಾಗ ನಡೆದ ನೇಮಕಾತಿ, ಗುತ್ತಿಗೆ, ಖರೀದಿ ಹಗರಣ ಕುರಿತ ತನಿಖಾ ವರದಿ.

5) ವಿಶ್ವೇಶ್ವರಯ್ಯ ತಾಂತ್ರಿಕ, ವಿಶ್ವವಿದ್ಯಾನಿಲಯ ಬೆಳಗಾವಿ ಡಾ:ಎಚ್.ಮಹೇಶ್ವರಪ್ಪ ಇವರು ಕುಲಪತಿಗಳಾಗಿದ್ದಾಗ ನಡೆದ ನೇಮಕಾತಿ, ಗುತ್ತಿಗೆ, ಖರೀದಿ ಹಗರಣ ಕುರಿತ ತನಿಖಾ ವರದಿ.

6) ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ಇಲ್ಲಿ ಪ್ರೊ: ಮಲ್ಲಿಕಾ ಎಸ್.ಘಂಟಿ ಇವರು ಕುಲಪತಿಗಳಾಗಿದ್ದಾಗ ನಡೆದ ಕಳಪೆ ಕಾಮಗಾರಿಗಳ ಕುರಿತ ವರದಿ.

7) ಕುವೆಂಪು ವಿಶ್ವವಿದ್ಯಾನಿಲಯ ಶಿವಮೊಗ್ಗ, ಡಾ: ಎಸ್.ಎ.ಬಾರಿ ಇವರು ಕುಲಪತಿಗಳಾಗಿದ್ದಾಗ ನಡೆದ ನಕಲಿ ಅಂಕಪಟ್ಟಿ ಕುರಿತ ತನಿಖಾ ವರದಿ.

8) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು, ಪ್ರೊ: ಕೆ.ಎಸ್.ರಂಗಪ್ಪ ಮತ್ತು ಪ್ರೊ:ಎಂ.ಜಿ.ಕೃಷ್ಣನ್ ರವರು ಕುಲಪತಿಗಳಾಗಿದ್ದಾಗ ನಡೆದ ನೇಮಕಾತಿ, ಗುತ್ತಿಗೆ, ಖರೀದಿ, ಕಟ್ಟಡ ಕಾಮಗಾರಿ ಕುರಿತ ಹಗರಣಗಳ ತನಿಖಾ ವರದಿ.

9) ತುಮಕೂರು ವಿಶ್ವವಿದ್ಯಾನಿಲಯ ಡಾ:ಎ.ಎಚ್.ರಾಜಾಸಾಬ್ ಕುಲಪತಿಗಳಾಗಿದ್ದಗ ನಡೆದ 44 ಲಕ್ಷ ರೂಪಾಯಿಗಳ ದುರುಪಯೋಗ ಕುರಿತ ತನಿಖಾ ವರದಿ.

10) ಮೈಸೂರು ವಿಶ್ವವಿದ್ಯಾನಿಲಯ, ಪ್ರೊ: ಕೆ.ಎಸ್.ರಂಗಪ್ಪ ಕುಲಪತಿಗಳಾಗಿದ್ದಾಗ ನಡೆದ ನೇಮಕಾತಿ ಹಗರಣ ಕುರಿತ ತನಿಖಾ ವರದಿ.

11) ಮಂಗಳೂರು ವಿಶ್ವವಿದ್ಯಾನಿಲಯ, ಪ್ರೊ:ಟಿ.ಸಿ.ಶಿವಶಂಕರಮೂರ್ತಿ ಇವರು ಕುಲಪತಿಗಳಾಗಿದ್ದಾಗ ನಡೆದ ನೇಮಕಾತಿ ಹಗರಣ ಮತ್ತು ಪ್ರೊ:ಕೆ ಭೈರಪ್ಪ ಇವರು ಕುಲಪತಿಗಳಾಗಿದ್ದಾಗ ನಡೆದ ಸೋಲಾರ್ ದೀಪ ಖರೀದಿ, ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ನೀಡಬೇಕಾದ ಲ್ಯಾಪ್ ಟಾಪ್ ಖರೀದಿ ಹಗರಣ ಕುರಿತ ತನಿಖಾ ವರದಿ.

12) ಕೃಷಿ ವಿಶ್ವವಿದ್ಯಾನಿಲಯ, ರಾಯಚೂರು. ಇಲ್ಲಿ ಡಾ:ಬಿ.ವಿ.ಪಾಟೀಲ ಕುಲಪತಿಗಳಾಗಿದ್ದಾಗ ತಮ್ಮ ಪುತ್ರ ಹಾಗೂ ಇತರ ನಾಲ್ಕು ವಿದ್ಯಾರ್ಥಿಗಳಿಗೆ ಕೃಷಿಕರ ಕೋಟಾದಡಿ ಅಕ್ರಮವಾಗಿ ಬಿ ಎಸ್ಸಿ(ಅಗ್ರಿ) ಪ್ರವೇಶ ನೀಡಿದ ಹಗರಣ.

ಈ ಎಲ್ಲಾ ಪ್ರಕರಣಗಳಲ್ಲಿ ಸರಕಾರಕ್ಕೆ ವರದಿಗಳು ಸಲ್ಲಿಕೆಯಾಗಿದ್ದು, ಅಕ್ರಮಗಳನ್ನು ಮಾಡಿರುವ ಕುಲಪತಿಗಳ ಮೇಲೆ ಅಗತ್ಯ ಕಾನೂನು ಕ್ರಮ ಕೈಗೊಳ್ಳುವಂತೆ ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ. ಈ ವಿಷಯ ತುಂಬಾ ಮಹತ್ವದ್ದಾಗಿರುವುದರಿಂದ ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**SRI IVAN D'SOUZA:-** Mr. Chairman Sir, I have a Point of Order.

**ಸಭಾಪತಿಯವರು:-** ಮಾನ್ಯ ಗೌರವಾನ್ವಿತ ಸದಸ್ಯರೆ, ತಾವು ಇನ್ನು ಮುಂದೆ ಇಂತಹ ವಿಷಯಗಳನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಬಾರದು. ಇದನ್ನು ಬೇರೆ ರೂಪದಲ್ಲಿ ಕೇಳಲು ಅವಕಾಶವಿದೆ. ತಾವು ತಂದಿರುವ ಇಂದಿನ ವಿಷಯ ನಿನ್ನೆ ನಡೆದ ಘಟನೆಯಲ್ಲ. ಇದು ಅನೇಕ ವರ್ಷಗಳ ಹಿಂದೆ ನಡೆದಿರುವ ವಿಚಾರ. ಇದನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದು ಅಥವಾ ಅದಕ್ಕೆ ಉತ್ತರ ಕೊಡುವುದು ಸಮಂಜಸವಲ್ಲ. ಇದೇ ಹವ್ಯಾಸವಾದರೆ ಎಲ್ಲರೂ ಇದೇ ರೀತಿಯ ವಿಷಯಗಳನ್ನು  ಕೇಳುತ್ತಾರೆ.  ಆದ್ದರಿಂದ ಇದನ್ನು ಇವತ್ತು ಕೊನೆಯದಾಗಿ ಸ್ವೀಕರಿಸುತ್ತೇವೆ. ಇನ್ನು ಮುಂದೆ ಇದಕ್ಕೆ ಅವಕಾಶವಿಲ್ಲ.

**ಡಾ: ವೈ.ಎ.ನಾರಾಯಣಸ್ವಾಮಿ:-** ತಾವು ಹೇಳುವುದು ಸರಿ ಇದೆ. ಇದು ಅತ್ಯಂತ ಮಹತ್ವದ ವಿಚಾರವಾಗಿರುವುದರಿಂದ ಇದನ್ನು ಬೇರೆ ರೂಪದಲ್ಲಿ ಕನ್‌ವರ್ಟ್ ಮಾಡಿ ಕೊಡಿ.

**ಸಭಾಪತಿಯವರು:** ಇದನ್ನು ನೀವೆ ಎಲ್ಲರೂ ಒಪ್ಪಿಕೊಂಡು ಮಾಡಿರುವ ನಿಯಮ. ಆದ್ದರಿಂದ ಇದನ್ನು ಈ ಬಾರಿ ಮಾತ್ರ ಸ್ವೀಕರಿಸಲಾಗುತ್ತದೆ. ಇದನ್ನು ಬೇರೆ ಯಾವುದಾದರೂ ರೂಪದಲ್ಲಿ ತನ್ನಿ, ಅದಕ್ಕೆ ನಮ್ಮ ಆಕ್ಷೇಪ ಇಲ್ಲ. ಇನ್ನು ಮುಂದೆ ಇಂತಹ ವಿಚಾರಗಳನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲು ಯಾರಿಗೂ ಅವಕಾಶವಿಲ್ಲ. ಕೇವಲ 24 ಗಂಟೆಗಳ ಮಧ್ಯೆದಲ್ಲಿ ಕೇವಲ ಮಾಧ್ಯಮಗಳಲ್ಲಿ ಬಂದಿರುವ ವರದಿಗಳನ್ನು ಆಧರಿಸಿ ಶೂನ್ಯವೇಳೆಯಲ್ಲಿ ಅಂತಹ ವಿಷಯಗಳನ್ನು ತರಬೇಕೆ ಹೊರತು ಯಾವುದೆ ದಾಖಲೆ ಇಲ್ಲದಿರುವುದನ್ನು ಸದನ ಒಪ್ಪುವುದಿಲ್ಲ.

**ಡಾ: ಜಯಮಾಲ (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರ ಕೊಡಿಸಲಾಗುತ್ತದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೆ, ನನ್ನ Point of Order ಇದೆ.

**ಸಭಾಪತಿಯವರು:-** ನೀವು ಹೇಳಬೇಕಾಗಿರುವುದನ್ನು ನಾನು ಹೇಳಿ ಆಗಿದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೆ, ಇಲ್ಲಿ ಇನ್ನೊಂದು ಅಂಶವಿದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 58 ಬಿ ಪ್ರಕಾರ ಶೂನ್ಯವೇಳೆಯ ಸೂಚನಾ ಪತ್ರವು 150 ಪದಗಳಿಗೆ ಮೀರತಕ್ಕದಲ್ಲ. ಮತ್ತು ಯಾವ ದಿನದಂದು ಪ್ರಸ್ತಾಪಿಸಲು ಉದ್ದೇಶಿಸಲಾಗಿದೆಯೋ ಆ ದಿನದ ಉಪವೇಶನವು



ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಾರಂಭವಾಗುವುದಕ್ಕಿಂತ ಒಂದು ಗಂಟೆ ಮುಂಚೆ... the Hon'ble member is asking for all these report. That is what, I want to bring to the notice of this House.

**ಶ್ರೀ ಆಯನೂರ ಮಂಜುನಾಥ್:-** ಮಾನ್ಯ ಸಭಾಪತಿಗಳೆ, ತಾವು ಹೇಳುವುದನ್ನು ಅಕ್ಷರಶ: ಪಾಲಿಸುತ್ತೇವೆ. ಇವತ್ತು ತಾವು ಇದಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ. ಆದರೆ ಇದು ಶಿಕ್ಷಣಕ್ಕೆ ಸಂಬಂಧಪಟ್ಟ ಬಹಳ ಗಂಭೀರವಾದ ವಿಚಾರ; ಮುಂದಿನ ಪೀಳಿಗೆಯ ಭವಿಷ್ಯದ ಪ್ರಶ್ನೆ. ಹಾಗಾಗಿ ನಿಯಮ 68ರಲ್ಲಿ ಅರ್ಧಗಂಟೆ ಚರ್ಚೆಗೆ ಇದನ್ನು ಬದಲಾವಣೆ ಮಾಡಿಕೊಟ್ಟರೆ ತುಂಬಾ ಒಳ್ಳೆಯದಾಗುತ್ತದೆ. ಇದನ್ನು ನಾನು ಸಭಾಪತಿಗಳ ವಿವೇಚನೆಗೆ ಬಿಡುತ್ತೇನೆ. ಬದಲಾಯಿಸಿ ಕೊಟ್ಟರೆ ಒಳ್ಳೆಯದು.

**(ಮುಂದುವರೆದಿದೆ...)**

(464)14-12-2018(12-50)ಬಿಎಸ್‌ಡಿ-ಎಕೆ

**ಅ) ವಿಷಯ: ರಾಜ್ಯದಲ್ಲಿ ಅಗತ್ಯ ಇರುವಷ್ಟು ಆಹಾರ ಪರೀಕ್ಷಾ ಪ್ರಯೋಗಾಲಯಗಳು ಇಲ್ಲದಿರುವ ಕುರಿತು**

**- - -**

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, "ರಾಜ್ಯದಲ್ಲಿ ಆಹಾರ ಪರೀಕ್ಷೆಗೆ ಅಗತ್ಯಕ್ಕೆ ತಕ್ಕಷ್ಟೂ ಪ್ರಯೋಗಾಲಯಗಳು ಇಲ್ಲದ ಪರಿಣಾಮ ತಯಾರಿಸಿಟ್ಟ ಊಟ-ತಿಂಡಿ ಹಾಗೂ ಹಣ್ಣುಗಳ ಪರೀಕ್ಷೆಗೆ ತೊಡಕಾಗಿದೆ. ಅಸುರಕ್ಷಿತ ಆಹಾರ ಪದಾರ್ಥ ಹಾಗೂ ಕಲಬೆರೆಕೆಗೆ ಕಡಿವಾಣ ಹಾಕುವುದು ಅಸಾಧ್ಯವಾಗಿದೆ ಹಾಗೂ ಹೊಟೇಲ್, ಬೀದಿ ಬಳಿಯ ತಿಂಡಿ-ತಿನಿಸು, ಊಟ, ಇತರೆ ವಸ್ತುಗಳ ಪರೀಕ್ಷೆ ಮಾಡಲು ಪ್ರಯೋಗಾಲಯಗಳ ಮತ್ತು ಸಿಬ್ಬಂದಿಗಳ ಕೊರತೆಯು ಇರುತ್ತದೆ. ಆಹಾರಗಳನ್ನು ಪ್ರಯೋಗಾಲಯಕ್ಕೆ ತರಲು ವಾಹನದ ವ್ಯವಸ್ಥೆ ಇರುವುದಿಲ್ಲ.

ಹಣ್ಣುಗಳಲ್ಲಿರುವ ಕೀಟನಾಶಕದ ಪ್ರಮಾಣವನ್ನು ರಾಜ್ಯದ ಪ್ರಯೋಗಾಲಯಗಳು ಪತ್ತೆ ಮಾಡುತ್ತಿಲ್ಲ, ಹಣ್ಣುಗಳಲ್ಲಿ ಕೀಟನಾಶಕದ ಅಂಶ ಕಂಡು ಬಂದಿದೆ ಎಂಬ ದೂರುಗಳು ಆಹಾರ ಸುರಕ್ಷತಾ ಅಧಿಕಾರಿಗಳಿಗೆ ಬರುತ್ತಿವೆ. ಆದರೆ ಇದನ್ನು ಪರೀಕ್ಷಿಸಿ ವಿಶ್ಲೇಷಣೆ ಮಾಡುವುದು ಕಷ್ಟವಾಗುತ್ತಿದೆ.

ಆದಕಾರಣ, ಈ ಎಲ್ಲಾ ಅಂಶಗಳ ಕುರಿತು ರಾಜ್ಯದಲ್ಲಿ ಆಹಾರ ಪರೀಕ್ಷೆಗೆ ಉತ್ತಮ ಗುಣಮಟ್ಟದ ಪ್ರಯೋಗಾಲಯವನ್ನು ಸ್ಥಾಪಿಸುವ ವಿಚಾರವಾಗಿ ಮಾನ್ಯ ಆರೋಗ್ಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ".

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ: ಜಯಮಾಲಾ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

**ಇ) ವಿಷಯ: ಕೊಡಗು ಜಿಲ್ಲೆಯಲ್ಲಿನ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ.**

\- - - -

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, “ಕೊಡಗು ಜಿಲ್ಲೆಯು ರಾಜ್ಯದ ಪ್ರಸಿದ್ಧ ಪ್ರವಾಸಿ ತಾಣವಾಗಿತ್ತು. ಆದರೆ ಕಳೆದ ಜೂನ್-ಜುಲೈ ತಿಂಗಳಲ್ಲಿ ಸುರಿದ ಮಳೆಗೆ ಜಿಲ್ಲೆಯ ಹಲವು ಪ್ರದೇಶಗಳು ಜಲಾವೃತವಾಗಿರುವುದು ತಿಳಿದ ವಿಷಯ. ಇದಾದ ನಂತರ ಜಿಲ್ಲೆಯ ಜೀವನಾಡಿಯಾಗಿದ್ದ ಪ್ರವಾಸೋದ್ಯಮವು ಸೊರಗಿದ್ದು, ಜಿಲ್ಲೆಯು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ. ಈ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಪ್ರಕೃತಿದತ್ತವಾಗಿರುವ ಅನೇಕ ತಾಣಗಳೊಂದಿಗೆ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ವಿಪುಲ ಅವಕಾಶವಿದ್ದು, ಈ ದಿಸೆಯಲ್ಲಿ ಸರ್ಕಾರದ ಸ್ಪಂದನೆ ಅವಶ್ಯಕವಾಗಿರುತ್ತದೆ. ಅಂತಹ ತಾಣಗಳನ್ನು ಗುರುತಿಸಿ ಅಭಿವೃದ್ಧಿಗೊಳಿಸಿದರೆ ಸರ್ಕಾರದ ಬೊಕ್ಕಸಕ್ಕೂ ಆದಾಯ ಕ್ರೋಢೀಕರಿಸಲು ಅವಕಾಶವಿದ್ದು ಹಾಗೂ ಜಿಲ್ಲೆಯಲ್ಲಿ ಹೆಚ್ಚಿರುವ ನಿರುದ್ಯೋಗ್ಯ ಸಮಸ್ಯೆ ಕೂಡ ಕಡಿಮೆಯಾಗುತ್ತದೆ.

ಈ ನಿಟ್ಟಿನಲ್ಲಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯು ಕಾರ್ಯ ಪ್ರವೃತ್ತವಾಗಬೇಕಿದೆ. ಇಲಾಖೆಯು ಕೆಲವು ಪ್ರವಾಸಿ ತಾಣಗಳನ್ನು ಮಾತ್ರ ಜಿಲ್ಲೆಯಲ್ಲಿ ಗುರುತಿಸಿದ್ದು, ಇನ್ನೂ ಹಲವು ಪ್ರವಾಸಿ ತಾಣಗಳನ್ನು ಗುರುತಿಸುವ ಕೆಲಸವಾಗಬೇಕಿದೆ. ಅವುಗಳಲ್ಲಿ ಪ್ರಮುಖವಾಗಿ ಮಡಿಕೇರಿ ಅರಮನೆ, ಸೋಮವಾರ ಪೇಟೆ ತಾಲ್ಲೂಕಿನ ಮಲ್ಲಳ್ಳಿ ಜಲಪಾತ, ಗರ್ವಾಲೆ ಬಳಿಯ ಶಿವಗಂಗಾ ಜಲಪಾತ, ಮೇದುರ ಹೊಳೆ ಜಲಪಾತ ಅಂತೆಯೇ ವಿರಾಜಪೇಟೆ ತಾಲ್ಲೂಕಿನ ಚೇಲಾವರ ಜಲಪಾತ, ಮುಕ್ಕೋಡ್ಲು ಕೋಟೆ, ಅಲ್ಲದೇ ಚಿಕ್ಲಿಹೊಳೆ ಜಲಾಶಯ ಮುಂತಾದವು ಇನ್ನೂ ಪ್ರವಾಸಿಗರಿಗೆ ಆನಂದ ಉಂಟು ಮಾಡುವಂತಹ ಅನೇಕ ಸ್ಥಳಗಳಿವೆ. ಆದರೆ ಇವುಗಳಲ್ಲಿ ಅನೇಕ ಸ್ಥಳಗಳು ಬೆಳಕಿಗೆ ಬಂದಿಲ್ಲ. ಇವುಗಳನ್ನು ಪ್ರವಾಸಿಗರಿಗೆ ಮುಟ್ಟಿಸುವ ನಿಟ್ಟಿನಲ್ಲಿ ಇಲಾಖೆಯು ಕೆಲಸ ಮಾಡಬೇಕಿದೆ.

ಈ ದಿಸೆಯಲ್ಲಿ ರಾಜ್ಯ ಸರ್ಕಾರವು ತ್ವರಿತವಾಗಿ ಜಿಲ್ಲೆಯಲ್ಲಿ ಮಾಡಬೇಕಾದ ಅಂಶಗಳ ಬಗ್ಗೆ ಹೇಳಬೇಕಾಗಿದೆ. ಅವುಗಳಲ್ಲಿ ಕೆಲವುಗಳನ್ನು ಇಲ್ಲಿ ಹೆಸರಿಸುತ್ತೇನೆ.

1. ಮಡಿಕೇರಿಯ ಪ್ರವಾಸೋದ್ಯಮ ಕಛೇರಿಯಲ್ಲಿ ಮಾಹಿತಿ ಕೇಂದ್ರ ಸ್ಥಾಪಿಸಿ ಜಿಲ್ಲೆಯ ಪ್ರವಾಸಿ ಕೇಂದ್ರಗಳ ಮಾಹಿತಿ ನೀಡಬೇಕು. ಇಲ್ಲಿ ಕೊಡಗಿನ ಸಾಂಪ್ರದಾಯಿಕ ಬದುಕನ್ನು ಪ್ರತಿಬಿಂಬಿಸುವ ಹಾಡು, ನೃತ್ಯ ಪ್ರಕಾರಗಳನ್ನು ಪ್ರವಾಸಿಗಳಿಗೆ ತೋರಿಸುವಂತಹ ಅವಕಾಶ ಮಾಡಿಕೊಡಬೇಕು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

2. ಇಲಾಖೆಯ ವತಿಯಿಂದ ಜಿಲ್ಲೆಯ ಕೇಂದ್ರ ಸ್ಥಳದಿಂದ ಹೊರಟು ಜಿಲ್ಲೆಯ ಪ್ರವಾಸಿ ಸ್ಥಳಗಳನ್ನು ತೋರಿಸುವ ಪ್ಯಾಕೇಜ್ ಟೂರ್‌ಗಳನ್ನು ಆರಂಭಿಸಬೇಕು.

3. ಮಡಿಕೇರಿಯ ರಾಜಾಸೀಟು ವಿಸ್ತೀರ್ಣಕ್ಕೆ ಮೀಸಲಿಟ್ಟ ಜಾಗವನ್ನು ಬಳಕೆ ಮಾಡಿಕೊಂಡು ಅಭಿವೃದ್ಧಿಪಡಿಸಬೇಕು.

4. ಸರ್ಕಾರಿ ಕಛೇರಿಗಳಿಂದ ಖಾಲಿಯಾದ ಕೋಟೆಯನ್ನು ಅಭಿವೃದ್ಧಿಪಡಿಸಿ ಮೈಸೂರಿನ ಅರಮನೆಯಂತೆ ಪ್ರವಾಸಿಗರಿಗೆ ತೋರಿಸುವ ಕೆಲಸವಾಗಬೇಕು.

5. ಕೃಷಿ ಮೇಳದಂತೆ ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳಿಗೆ ಸೇರಿದ ಜಾಗಗಳಲ್ಲಿ ಕಾಫಿ, ಏಲಕ್ಕಿ, ಕರಿಮೆಣಸು, ಜೇನು ಕೃಷಿಗಳನ್ನು ಅಭಿವೃದ್ಧಿಪಡಿಸಿ ಪ್ರವಾಸಿಗಳಿಗೆ ಪರಿಚಯಿಸುವ ಪ್ರಯತ್ನವಾಗಬೇಕು.

6. ಸೋಮವಾರ ಪೇಟೆ ತಾಲ್ಲೂಕಿನ ಹರಗ ಚಪ್ಪೇಶ್ವರ ಮಕ್ಕಳ ಬೆಟ್ಟ, ನಂಜರಾಯ ಬಸದಿ, ಚೆಟ್ಟಳ್ಳಿ ತೋಟಗಾರಿಕಾ ಕೇಂದ್ರಗಳನ್ನು ಗುರುತಿಸಿ, ಇವುಗಳನ್ನು ಪ್ರವಾಸಿ ತಾಣಗಳಾಗಿ ಅಭಿವೃದ್ಧಿಪಡಿಸಿದಲ್ಲಿ ಜಿಲ್ಲೆಯು ಪ್ರವಾಸೋದ್ಯಮ ಕ್ಷೇತ್ರದಲ್ಲಿ ಗುರುತಿಸಿಕೊಂಡು ಸರ್ಕಾರಕ್ಕೆ ಹಾಗೂ ಜಿಲ್ಲೆಯ ಆರ್ಥಿಕತೆಯನ್ನು ಹೆಚ್ಚಿಸಬಹುದಾಗಿರುತ್ತದೆ.

ಈ ನಿಟ್ಟಿನಲ್ಲಿ ಸರ್ಕಾರವು ತುರ್ತಾಗಿ ಕ್ರಮವನ್ನು ಕೈಗೊಳ್ಳುವಂತೆ ಈ ಮೂಲಕ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ".

**ಡಾ: ಜಯಮಾಲಾ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

**ಈ) ವಿಷಯ: ರಾಜ್ಯದ ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಅರ್ಚಕರು ವಿವಿಧ ಬೇಡಿಕೆ ಕುರಿತು ಧರಣಿ ನಡೆಸುತ್ತಿರುವ ಬಗ್ಗೆ**

- - - -

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ರಾಜ್ಯದ ಪ್ರತಿಷ್ಠಿತ ದೇವಾಲಯ ಎಂದೆನಿಸಿರುವ ಚಾಮುಂಡಿ ಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಾಲಯ ಅರ್ಚಕರು ಸೇರಿದಂತೆ ಖಾಯಂ ಮತ್ತು ತಾತ್ಕಾಲಿಕ ನೌಕರರು ವೇತನ ಪರಿಷ್ಕರಣೆ, ಬೋನಸ್ ಪಾವತಿ, ತಾತ್ಕಾಲಿಕ ನೌಕರರ ಖಾಯಮಾತಿ, ಮೃತಪಟ್ಟ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ನೌಕರಿ, ದೇವಾಲಯದ ನೌಕರರಿಗೆ ವೈದ್ಯಕೀಯ ಸೌಲಭ್ಯ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಡಿಸೆಂಬರ್ 14ರಿಂದ ಅಂದರೆ ಇಂದಿನಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ನಿರ್ಧರಿಸಿದ್ದಾರೆ.

ಮುಜರಾಯಿ ದೇವಸ್ಥಾನದ ನೌಕರರ ವಿವಿಧ ಬೇಡಿಕೆ, ಆಡಳಿತಾತ್ಮಕ ವಿಷಯಗಳ ಕುರಿತು ಪರಿಹಾರ ಕಂಡುಕೊಳ್ಳಲು ಈ ಹಿಂದೆಯೇ ಮಾನ್ಯ ಮುಜರಾಯಿ ಸಚಿವರು ಆಸಕ್ತ ಶಾಸಕರು ವಿರೋಧ ಪಕ್ಷದ ನಾಯಕರು ಸೇರಿದಂತೆ ಇಲಾಖೆಯ ಅಧಿಕಾರಿಗಳೊಂದಿಗೆ ಮುಜರಾಯಿ ಇಲಾಖೆಯ ಉನ್ನತ ಅಧಿಕಾರಿಗಳ ಸಭೆ ನಡೆಸುವಂತೆ ಇದೇ ಸದನದಲ್ಲಿ ಭರವಸೆ ನೀಡಿದ್ದರೂ ಇದುವರೆಗೆ ಯಾವುದೇ ಸಭೆ ನಡೆದಿಲ್ಲ.

ಮುಜರಾಯಿ ಸಚಿವರು ಕೂಡಲೇ ಮಧ್ಯೆ ಪ್ರವೇಶಿಸಿ ಧರಣಿ ನಿರತರಿಗೆ ಭರವಸೆ ನೀಡಬೇಕು ಹಾಗೂ ಮುಜರಾಯಿ ದೇವಸ್ಥಾನಗಳಲ್ಲಿ ಅರ್ಚಕರು ಮತ್ತು ಸಿಬ್ಬಂದಿಗಳ ಬೇಡಿಕೆ ಈಡೇರಿಕೆ ಮತ್ತು ತಾತ್ಕಾಲಿಕ ನೌಕರರನ್ನು ಖಾಯಂಗೊಳಿಸುವ ಕುರಿತು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಆಗ್ರಹಿಸುತ್ತೇನೆ".

ಮಾನ್ಯ ಸಭಾಪತಿಯವರೇ, ಈಗಾಗಲೇ ದೇವಸ್ಥಾನದಲ್ಲಿ ಮುಷ್ಕರ ಪ್ರಾರಂಭವಾಗಿದ್ದು, ಅಲ್ಲಿಗೆ ಬರುವ ಭಕ್ತರಿಗೆ ಎಲ್ಲಾ ರೀತಿಯಿಂದ ಗೊಂದಲ ಉಂಟಾಗುತ್ತಿದೆ.

**ಸಭಾಪತಿಯವರು:-** ಸಂಬಂಧಪಟ್ಟ ಸಚಿವರ ಬಳಿ ಮಾತನಾಡಬಹುದು, ಶೂನ್ಯವೇಳೆಯಲ್ಲಿ ಚರ್ಚೆಗೆ ಅವಕಾಶವಿಲ್ಲ.

**ಶ್ರೀ ಕೆ.ಪಿ. ನಂಜುಂಡಿ ವಿಶ್ವಕರ್ಮ:-** ಇದು ದೇವಸ್ಥಾನಕ್ಕೆ ಸಂಬಂಧಪಟ್ಟ ವಿಚಾರವಾಗಿದೆ.

**ಸಭಾಪತಿಯವರು:-** ಮಾನ್ಯ ಸಚಿವರ ಬಳಿ ಮಾತನಾಡಿ.

**ಡಾ: ಜಯಮಾಲಾ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ನಂತರ ಉತ್ತರವನ್ನು ಒದಗಿಸಲಾಗುತ್ತದೆ.

**ಉ) ವಿಷಯ: ಇಂದಿರಾ ಕ್ಯಾಂಟೀನ್‌ಗೆ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ**

**- - -**

**ಡಾ॥ ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, "ಸರ್ಕಾರವು 'ಇಂದಿರಾ ಕ್ಯಾಂಟೀನ್' ಯೋಜನೆಯನ್ನು ಜಾರಿಗೆ ತಂದಿದ್ದು, ಮೊದಲಿಗೆ ಬೆಂಗಳೂರಿನಲ್ಲಿ ಯೋಜನೆ ಜಾರಿಗೊಳಿಸಿದ್ದ ಸರ್ಕಾರ, ನಂತರ ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ವಿಸ್ತರಿಸಲು ತೀರ್ಮಾನಿಸಲಾಗಿತ್ತು. ಆದರೆ, ಸರ್ಕಾರ ಪ್ರಥಮ ಹಂತದಲ್ಲಿಯೇ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಾಲಿಕೆಗಳಿಗೆ ಕೋರಿದ ಅನುದಾನ ಬಿಡುಗಡೆ ಮಾಡದೆ ಪಾಲಿಕೆಗಳ ಸ್ವಂತ ಆದಾಯದಿಂದ ಬಿಲ್ ಪಾವತಿಸಬೇಕೆಂದು ಆದೇಶ ಹೊರಡಿಸಿತ್ತು. ಅದರಂತೆ ಪಾಲಿಕೆಗಳು ಆದೇಶ ಪಾಲಿಸಿದ್ದರೂ ಪ್ರಸ್ತುತ ಪಾಲಿಕೆಯಿಂದ ಗುತ್ತಿಗೆದಾರರಿಗೆ ಹಣ ಪಾವತಿಸುವಲ್ಲಿ ಕಠಿಣತೆ ಮತ್ತು ವೈಫಲ್ಯತೆಯಿಂದ ಕಷ್ಟವಾಗುತ್ತಿರುತ್ತದೆ. ಆದುದರಿಂದ ರಾಜ್ಯ ಸರ್ಕಾರವು ಈ ಯೋಜನೆಗೆ ಶೀಘ್ರವಾಗಿ ಅನುದಾನ ಬಿಡುಗಡೆ ಮಾಡಬೇಕೆಂಬ ವಿಷಯದ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ".

ಅದೇ ರೀತಿ ಸರ್ಕಾರವು ಇಂದಿರಾ ಕ್ಯಾಂಟೀನ್‌ನಲ್ಲಿ ಆಹಾರದ ಗುಣಮಟ್ಟ ಮತ್ತು ಪ್ರಮಾಣ ಖಾತ್ರಿಯನ್ನು ಸದಾಕಾಲ ಸದೃಢಗೊಳಿಸಬೇಕೆಂದು ಆಗ್ರಹಿಸುತ್ತೇನೆ.

**ಡಾ॥ ಜಿ. ಪರಮೇಶ್ವರ್ (ಉಪ ಮುಖ್ಯಮಂತ್ರಿಯವರು ಹಾಗೂ ಒಳಾಡಳಿತ, ಬೆಂಗಳೂರು ನಗರ ಅಭಿವೃದ್ಧಿ ಯುವಜನ ಸೇವೆ ಮತ್ತು ಕ್ರೀಡಾ ಸಚಿವರು):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿಕೊಡಲಾಗುವುದು.

**ಊ) ರೈತರಿಗೆ ಕಂದಾಯ ದಾಖಲೆಗಳನ್ನು ನೀಡುವ ಕುರಿತು.**

- - - -

**ಶ್ರೀ ಎಸ್. ರುದ್ರೇಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, "ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಭೂ ದಾಖಲೆಗಳನ್ನು ಆನ್‌ಲೈನ್ ವಿಧಾನದ ಮೂಲಕ ಪಡೆಯುವ ಆರ್.ಟಿ.ಸಿ ಯೋಜನೆಯು ಗ್ರಾಮ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸುವ ಮೂಲಕ ಗ್ರಾಮೀಣ ಭಾಗದವರಿಗೆ ತ್ವರಿತವಾಗಿ ಸೌಲಭ್ಯ ಕಲ್ಪಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹತ್ತು ಹಲವು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿವೆ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿವೆ. ಆನ್ ಲೈನ್ ಆಧಾರಿತ ಸೇವೆಯನ್ನು ಕಾರ್ಯಗತಗೊಳಿಸುತ್ತಿವೆ. ಆದರೆ ಹಲವು ಗ್ರಾಮ ಪಂಚಾಯಿತಿಗಳಲ್ಲಿ ಆನ್‌ಲೈನ್ ಸೇವೆಯೇ ಹೊರೆಯಾಗಿ ಪರಿಣಮಿಸಿದೆ.

ಆರ್.ಟಿ.ಸಿ. ಪಡೆಯಲು ನಾಡ ಕಛೇರಿ ಮತ್ತು ತಾಲ್ಲೂಕು ಕಛೇರಿ ಇವು ಸರ್ಕಾರದಿಂದ ಸೂಚಿತ ಕೇಂದ್ರಗಳಾಗಿವೆ. ಇಡೀ ರಾಜ್ಯದಲ್ಲಿ ಅಂತರ್ಜಾಲ ಸುಧಾರಣೆ ಸಾಕಷ್ಟು ಆಗಿದ್ದರೂ ಸಹ ಹಲವಾರು ತಾಲ್ಲೂಕಿನ ಕೇಂದ್ರಗಳಲ್ಲಿ ಸರ್ವರ್‌ಗಳ ಕುರಿತಾದ ತಾಂತ್ರಿಕ ಸಮಸ್ಯೆ ಇದೆ. ಒಬ್ಬ ರೈತ ಒಂದು ಆರ್.ಟಿ.ಸಿ ಪಡೆಯಲು ತಾಲ್ಲೂಕು ಕೇಂದ್ರಕ್ಕೆ ತಲುಪುವ ವೆಚ್ಚ ಹೊರತುಪಡಿಸಿ, ಇಡೀ ದಿನ ಕಾಯಬೇಕಾಗುತ್ತದೆ. ಅಂತಿಮವಾಗಿ ಆರ್.ಟಿ.ಸಿ. ದೊರೆಯದೇ ಇರುವ ಸಂದರ್ಭಗಳೇ ಹೆಚ್ಚು. ಇದು ಸರ್ಕಾರದ ಗಮನದಲ್ಲಿದೆಯೇ? ಅಥವಾ ಇದರ ಕುರಿತು ಪರ್ಯಾಯ ವ್ಯವಸ್ಥೆಗೆ ಚಿಂತನೆ ಇದೆಯೇ? ರೈತರು ಸಾರ್ವಜನಿಕವಾಗಿ ಆಕ್ರೋಶ ವ್ಯಕ್ತಪಡಿಸಿ ಮಾಧ್ಯಮಗಳಲ್ಲಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದರೂ ಸರ್ಕಾರದ ಗಮನಕ್ಕೆ ಬಾರದಿರುವುದು ವಿಷಾದಕರ ಸಂಗತಿಯಾಗಿದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗ್ರಾಮೀಣ ಪ್ರದೇಶಗಳ ರೈತರ ಅನುಕೂಲಕ್ಕೆ ಲಭ್ಯವಿರುವ ಸಹಕಾರಿ ಸಂಘಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಈ ರೀತಿಯ ಸರ್ಕಾರಿ ಸಂಸ್ಥೆಗಳಿಗೆ ಆರ್.ಟಿ.ಸಿ ಕೊಡುವ ಸೌಕರ್ಯವನ್ನು ಕಲ್ಪಿಸಿಕೊಡುವುದರ ಮೂಲಕ ರೈತರಿಗೆ ಸಹಾಯ ಮಾಡುವಂತೆ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಆಗ್ರಹಿಸುತ್ತೇನೆ”.

**ಡಾ॥ ಜಿ.ಪರಮೇಶ್ವರ್ (ಉಪ ಮುಖ್ಯಮಂತ್ರಿಯವರು ಹಾಗೂ ಒಳಾಡಳಿತ, ಬೆಂಗಳೂರು ನಗರ ಅಭಿವೃದ್ಧಿ ಯುವಜನ ಸೇವೆ ಮತ್ತು ಕ್ರೀಡಾ ಸಚಿವರು):–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿಕೊಡಲಾಗುವುದು.

(ಮುಂದುವರೆದಿದೆ ...)

(465)14–12–2018(1–00)ಹೆಚ್‌ವಿ–ಎಕೆ

**ಖ)ವಿಷಯ: ಮಹಾತ್ಮಗಾಂಧಿ ಉದ್ಯೋಗ ಖಾತ್ರಿ(ನರೇಗಾ) ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿಗಳ ಅಕ್ರಮ ನಡೆದಿರುವ ಬಗ್ಗೆ.**

– – –

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ ಸಭಾಪತಿಯವರೆ, ದಿನಾಂಕಃ13.12.2018ರಂದು ಪ್ರಜಾವಾಣಿ ದಿನಪತ್ರಿಕೆಯಲ್ಲಿ **“ನರೇಗಾ: ಸಾಮಾಜಿಕ ಪರಿಶೀಲನೆ ನಿರ್ದೇಶನಾಲಯದಿಂದ ಪತ್ತೆ, ರೂ.410 ಕೋಟಿ ಅಕ್ರಮ”** ಎಂಬ ಶೀರ್ಷಿಕೆಯಡಿ ಪ್ರಕಟವಾದಂತೆ ರಾಜ್ಯದಲ್ಲಿ ಪ್ರಸಕ್ತ ಸಾಲಿನ (2018–19) ಸೆಪ್ಟೆಂಬರ್‌ವರೆಗೆ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ(ನರೇಗಾ) ಯೋಜನೆಯಲ್ಲಿ ಸುಮಾರು ರೂ.410 ಕೋಟಿಯ ಅಕ್ರಮ ನಡೆದಿರುವುದು ಬಯಲಾಗಿದೆ.

ಕಾಮಗಾರಿ ನಡೆಸದೆ ಹಣ ಬಿಡುಗಡೆ, ಹೆಚ್ಚು ಹಣ ಬಿಡುಗಡೆ, ನಕಲಿ ಉದ್ಯೋಗ ಕಾರ್ಡ್ ಸೃಷ್ಟಿ, ಬಿಲ್‌ಗಿಂತ ಹೆಚ್ಚು ಮೊತ್ತ ಪಾವತಿ ಮತ್ತು ಒಂದೇ ಕಾಮಗಾರಿಗೆ ಎರಡು ಬಾರಿ ಹಣ ಮಂಜೂರಾತಿ ಮುಂತಾದ ಅವ್ಯವಹಾರಗಳು ನಡೆದಿವೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಾಮಾಜಿಕ ಪರಿಶೀಲನೆ ನಿರ್ದೇಶನಾಲಯದ ಪರಿಶೀಲನೆ ವೇಳೆ ಗೊತ್ತಾಗಿದೆ. ಆದ್ದರಿಂದ ತಪ್ಪಿತಸ್ಥರ ವಿರುದ್ಧ ತಕ್ಷಣ ಸೂಕ್ತ ಕ್ರಮವಹಿಸುವಂತೆ ಹಾಗೂ ಅಕ್ರಮವಾಗಿ ವರ್ಗಾವಣೆಗೊಂಡಿರುವ ನೂರಾರು ಕೋಟಿ ಸರ್ಕಾರದ ಹಣವನ್ನು ವಸೂಲು ಮಾಡುವಂತೆ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಡಾಃಜಿ.ಪರಮೇಶ್ವರ್(ಉಪ ಮುಖ್ಯಮಂತ್ರಿಗಳು):–** ಸನ್ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ವ್ಹಿ.ಸಂಕನೂರ:–** ಸನ್ಮಾನ್ಯ ಸಭಾಪತಿಯವರೆ, 11ನೇ ತಾರೀಖಿಗೆ ಶೂನ್ಯವೇಳೆಯಲ್ಲಿ ನಾನು ಪ್ರಸ್ತಾಪ ಮಾಡಿದಂತಹ ವಿಷಯಕ್ಕೆ ಇಲ್ಲಿಯವರೆಗೆ ಸರ್ಕಾರದಿಂದ ಉತ್ತರ ಬಂದಿಲ್ಲ. ಬಹಳಷ್ಟು ಗಂಭೀರವಾಗಿರುವ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ ಸಭಾಪತಿಯವರೆ, ಅಧಿವೇಶನ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಕೇವಲ ಎರಡು ಪ್ರಶ್ನೆಗಳಿಗೆ ಮಾತ್ರ ಉತ್ತರ ಬಂದಿದೆ. ಉಳಿದ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನಹರಿಸಬೇಕಾಗಿದೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಸನ್ಮಾನ್ಯ ಸಭಾಪತಿಯವರೆ, ಇಷ್ಟೊಂದು ಪ್ರಶ್ನೆಗಳಿಗೆ ಉತ್ತರ ಕೊಡದೇ ಇರುವುದಕ್ಕೆ ಸರ್ಕಾರಕ್ಕಿರುವ ತೊಂದರೆಯೇನು?

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಸನ್ಮಾನ್ಯ ಸಭಾಪತಿಯವರೆ, ಚುಕ್ಕೆ ರಹಿತ ಪ್ರಶ್ನೆಗಳಿಗೂ ಉತ್ತರ ಬಂದಿಲ್ಲ, ಶೂನ್ಯವೇಳೆ ಪ್ರಶ್ನೆಗಳಿಗೂ ಸರ್ಕಾರದಿಂದ ಉತ್ತರ ಬರುತ್ತಿಲ್ಲ. ದಯವಿಟ್ಟು ತಾವು ಈ ಬಗ್ಗೆ ಗಮನಹರಿಸಬೇಕೆನ್ನುವುದು ನನ್ನ ವಿನಂತಿಯಾಗಿದೆ.

**ಡಾ:ಜಿ.ಪರಮೇಶ್ವರ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಎಲ್ಲ ಪ್ರಶ್ನೆಗಳಿಗೂ ಸರ್ಕಾರದಿಂದ ಉತ್ತರವನ್ನು ಕಳುಹಿಸಿಕೊಡಲಾಗುತ್ತದೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ ವಿಷಯಗಳಿಗೂ ಉತ್ತರ ಬಂದಿಲ್ಲ.

**ಡಾ:ಜಿ.ಪರಮೇಶ್ವರ್:–** ಸನ್ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಗಳಿಗೂ ಈ ಸದನ ಮುಗಿಯುವುದರೊಳಗಾಗಿ ಸರ್ಕಾರದಿಂದ ಉತ್ತರವನ್ನು ಒದಗಿಸಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 4. ಸಭೆಯ ಮುಂದಿಡಲಾದ ಕಾಗದ ಪತ್ರ

**ಕಾರ್ಯದರ್ಶಿ(ಕ.ವಿ.ಪ.):–** ಕರ್ನಾಟಕ ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ರೈ ತಾಂತ್ರಿಕ ವಿಶ್ವವಿದ್ಯಾಲಯ ಬೆಂಗಳೂರು(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

## 5. ವಿತ್ತೀಯ ಕಾರ್ಯಕಲಾಪ

**ಡಾಃಜಿ.ಪರಮೇಶ್ವರ್(ಉಪ ಮುಖ್ಯಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ ಪರವಾಗಿ):–** ಸನ್ಮಾನ್ಯ ಸಭಾಪತಿಯವರೇ,

1. 2018–19ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯ ವಾರ್ಷಿಕ ಪರಿಶೀಲನಾ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.
2. ಭಾರತ ಸಂವಿಧಾನ 205(1)(ಎ)ರ ಅನುಚ್ಛೇದದ ಮೇರೆಗೆ 2018–19ನೇ ಸಾಲಿನ ಪೂರಕ ಅಂದಾಜುಗಳನ್ನು(ಮೊದಲನೆಯ ಕಂತನ್ನು) ಸದನಕ್ಕೆ ಒಪ್ಪಿಸುತ್ತಿದ್ದೇನೆ.

## 6. ಸಭಾಪತಿಯವರ ಅನುಮತಿಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಕ್ಕೆ ಸಂಬಂಧಿಸಿದಂತೆ ಸಚಿವರ ಹೇಳಿಕೆ

**ವಿಷಯ:–** **ವಿಜಯಪುರ ನಗರದ ಹೊರ ವಲಯದಲ್ಲಿ ಬುರಾಣಪುರದಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮಾಡುವ ಬಗ್ಗೆ.**

– – –

**ಡಾ: ಜಿ.ಪರಮೇಶ್ವರ್(ಉಪ ಮುಖ್ಯಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ ಪರವಾಗಿ):–** ಸನ್ಮಾನ್ಯ ಸಭಾಪತಿಯವರೆ, ದಿನಾಂಕ:13.12.2018ರಂದು ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪುರ್‌ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಲಿಖಿತ ರೂಪದ ಉತ್ತರವನ್ನು ಸಭೆಯ ಮುಂದೆ ಮುಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 7. ಖಾಸಗಿ ಸದಸ್ಯರುಗಳ ಕಾರ್ಯಕಲಾಪಗಳು

### ವಿಧೇಯಕದ ಮಂಡನೆ

### ಕರ್ನಾಟಕ ಅಸಲು ಹಣಕ್ಕಿಂತ ಹೆಚ್ಚು ಬಡ್ಡಿ ವಿಧಿಸುವಿಕೆ ನಿಷೇಧ ವಿಧೇಯಕ, 2018

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೆ, ನಾನು ತಮ್ಮ ಅನುಮತಿ ಕೋರಿ ಕರ್ನಾಟಕ ಅಸಲು ಹಣಕ್ಕಿಂತ ಹೆಚ್ಚು ಬಡ್ಡಿ ವಿಧಿಸುವಿಕೆ ನಿಷೇಧ ವಿಧೇಯಕ, 2018ನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**"ಕರ್ನಾಟಕ ಅಸಲು ಹಣಕ್ಕಿಂತ ಹೆಚ್ಚು ಬಡ್ಡಿ ವಿಧಿಸುವಿಕೆ ನಿಷೇಧ ವಿಧೇಯಕ, 2018ರ ಸದಸ್ಯರ ಖಾಸಗಿ ವಿಧೇಯಕವನ್ನು ಮಂಡಿಸಲಾಗಿದೆ."**

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೆ, ಈಗಾಗಲೇ ಜಾರಿಯಲ್ಲಿರುವ 2004ರ ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಅಧಿನಿಯಮದ ಸೆಕ್ಷನ್ 4ರಲ್ಲಿ ಏನು ಉಲ್ಲೇಖಿಸಲಾಗಿದೆ ಎನ್ನುವುದು ತಮ್ಮೆಲ್ಲರಿಗೂ ತಿಳಿದ ವಿಚಾರವಾಗಿದೆ. ಆದರೆ, ಸೆಕ್ಷನ್ 2 ಮತ್ತು 3 ಅನ್ನು ತಿದ್ದುಪಡಿಗೊಳಪಡಿಸುವುದಕ್ಕಾಗಿ ಈ ವಿಧೇಯಕವನ್ನು ಮಂಡಿಸಲಾಗುತ್ತಿದೆ. ಈ ವಿಧೇಯಕವನ್ನು ಮಂಡಿಸುತ್ತಿರುವ ಉದ್ದೇಶ ಮತ್ತು ಕಾರಣಗಳನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಈಗಾಗಲೇ ಸಾಲ ಮತ್ತು ಬಡ್ಡಿ ವಿಚಾರಕ್ಕೆ ಸಂಬಂಧಪಟ್ಟಂತೆ ಹಲವಾರು ವಿಧೇಯಕಗಳು ಜಾರಿಗೆ ಬಂದಿರುತ್ತವೆ. ಆದರೆ, ನಿರ್ದಿಷ್ಟವಾಗಿ ಈ ದೇಶದ ಬೆನ್ನೆಲುಬಾಗಿರುವ ಕೃಷಿಕರನ್ನು ಮತ್ತು ರೈತರನ್ನು ಉದ್ದೇಶಿಸಿ ಇಲ್ಲಿಯವರೆಗೆ ಯಾವ ವಿಧೇಯಕಗಳು ಜಾರಿಗೆ ಬಂದಿರುವುದಿಲ್ಲ. ಕೃಷಿಕರು ತಮ್ಮ ಅತ್ಯಾವಶ್ಯಕ ಅಗತ್ಯತೆಗಳಿಗೆ ಮಾತ್ರ ಸಾಲವನ್ನು ಮಾಡಲು ಬಯಸುತ್ತಾರೆ. ಸಾಲ ಮಾಡಬೇಕಾದ ಸಂದರ್ಭದಲ್ಲಿ ಶ್ರೀಮಂತ ಮತ್ತು ಪ್ರಭಾವಿ ವ್ಯಕ್ತಿಗಳಿಂದ ಸಾಲವನ್ನು ಪಡೆಯುತ್ತಾರೆ. ಶ್ರೀಮಂತರು ಅಸಹಾಯಕ ರೈತರಿಗೆ ತಾವು ಸಹಾಯ ಮಾಡುವ ನೆಪದಲ್ಲಿ ಅವರ ರಕ್ತವನ್ನು ಹೀರಿ ಅಂತಃಸತ್ವವನ್ನು ಹುಡುಗಿಸುತ್ತಾರೆ. ಸಾಲ ನೀಡುವುದು ಇಡೀ ರಾಜ್ಯದ ಕಲ್ಯಾಣಕ್ಕೆ ನ್ಯಾಯಯುತ ಮತ್ತು ಸಾಧಕವಾಗಿದೆಯೆಂದು ತೋರಿದರು ಸಹ ಅದೇ ಸಂದರ್ಭದಲ್ಲಿ ಅದು ಸಾಲ ಪಡೆದವನ ದುರಾದೃಷ್ಟವೂ ಆಗಿರುತ್ತದೆ. ಅಸಲಿಗಿಂತ ಹೆಚ್ಚು ಬಡ್ಡಿ ವಿಧಿಸುವುದರಿಂದ ಸಾಲಗಾರನ ಕನಸುಗಳೆಲ್ಲವೂ ನುಚ್ಚು ನೂರಾಗುತ್ತದೆ. ಅಲ್ಲದೇ, ಆತ ತನ್ನ ಇಡೀ ಆಸ್ತಿಯನ್ನೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಳೆದುಕೊಳ್ಳುವಂತಹ ಸಂದರ್ಭಗಳು ಒದಗುತ್ತದೆ. ಅಸಲಿಗಿಂತ ಹೆಚ್ಚು ಬಡ್ಡಿಯನ್ನು ವಿಧಿಸುವುದನ್ನು ನಿಷೇಧಿಸುವ ಉದ್ದೇಶದಿಂದ ತರಲಾಗಿದೆ. ಈ ವಿಧೇಯಕವು ಈ ಕೆಳಕಂಡ ವಿಶೇಷವಾದ ಅಂಶಗಳಿಂದ ಕೂಡಿರುತ್ತದೆ;

1. ದುಬಾರಿ ಬಡ್ಡಿ ವಿಧಿಸಿ ಸಾಲ ನೀಡುವುದನ್ನು ಮತ್ತು ಬಾಕಿ ಹಣದ ಮೇಲಿನ ಬಡ್ಡಿಯ ನೆಪದಲ್ಲಿ ಹಣವನ್ನು ವಸೂಲಿ ಮಾಡುವ ಇತರ ವಿಧಾನಗಳನ್ನು ನಿರ್ಬಂಧಿಸುವುದು.

2. ಹಾಲಿ ಇರುವ ಕಾನೂನಿನಲ್ಲಿನ ಕೆಲವು ನ್ಯೂನತೆಗಳನ್ನು ಸರಿಪಡಿಸಿ ಅಂಥ ಅನಿಷ್ಠ ವ್ಯವಸ್ಥೆಯನ್ನು ತೊಡೆದು ಹಾಕುವುದು.
3. ಕೃಷಿಕರನ್ನು ಸಾಲದ ಹೊರೆಗಳಿಂದ ಮುಕ್ತರನ್ನಾಗಿಸುವುದು.
4. ಬಡ ರೈತರು ತಾವು ಪಡೆದ ಸಾಲವನ್ನು ಮರುಪಾವತಿಸಲು ಸಾಧ್ಯವಾಗದೇ ಅಸಹಾಯಕತೆಯಿಂದ ತಾವು ಬೆಳೆದ ಬೆಲೆಗೆ ಪಾವತಿ ಮಾಡಬೇಕಾದ ಸಾಲವನ್ನು ಸಂದಾಯ ಮಾಡಲು ವಿಫಲರಾಗಿ ಹೆಚ್ಚು ಹೆಚ್ಚು ಆತ್ಮಹತ್ಯೆಗೆ ಶರಣಾಗುತ್ತಿರುವುದನ್ನು ತಪ್ಪಿಸುವುದು.

5. ಬಡ ಮತ್ತು ಅನಕ್ಷರಸ್ಥ ಕೃಷಿಕರು ಸುನಿಶ್ಚಿತತೆಯಿಂದ ಮತ್ತು ಯಾವುದೇ ಒತ್ತಡ ಅಥವಾ ಆತಂಕಗಳಿಲ್ಲದೆ ತಮ್ಮ ಕಾನೂನುಬದ್ಧ ಬಾಕಿಗಳನ್ನು ಸಂದಾಯ ಮಾಡಲು ಸಾಧ್ಯವಾಗುವ ಹಾಗೆ ಅತ್ಯಂತ ಹೆಚ್ಚಿನ, ದುಬಾರಿಯಾದ, ದಂಡನೀಯ ರೂಪದ ಮತ್ತು ಹೆಚ್ಚಿನ ಬಡ್ಡಿ ದರಗಳನ್ನು ಪಾವತಿ ಮಾಡುವ ಮತ್ತು ಭರಿಸುವ ಭಾರದಿಂದ ಅವರನ್ನು ಮುಕ್ತಗೊಳಿಸುವುದು.

ಈ ಮೇಲ್ಕಂಡ ಉದ್ದೇಶಗಳಿಂದ ಈ ಖಾಸಗಿ ವಿಧೇಯಕವನ್ನು ನಾನು ಮಂಡಿಸುತ್ತಿದ್ದೇನೆ. ರೈತರ ಮೇಲೆ ಸಾಕಷ್ಟು ದೌರ್ಜನ್ಯಗಳು ನಡೆಯುತ್ತಿವೆ. ರೈತರು ವಿಶೇಷವಾಗಿ ಕೃಷಿಕ ಭೂಮಿಯ ಮೇಲೆ ಪಡೆದಿರುವ ಸಾಲವನ್ನು ಕೊಡುವುದಕ್ಕೆ ಸಾಧ್ಯವಾಗದೇ ಆತ ಆತ್ಮಹತ್ಯೆಗೆ ಶರಣಾಗುವುದು ನಮ್ಮೆಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ಇದನ್ನು ತಪ್ಪಿಸುವುದಕ್ಕಾಗಿ ಈ ವಿಧೇಯಕದ ಅವಶ್ಯಕತೆ ಇದೆ. ಈಗಾಗಲೇ ಜಾರಿಯಲ್ಲಿರುವ ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಅಧಿನಿಯಮ 2004ರ ಸೆಕ್ಷನ್ 4ರಲ್ಲಿ 3 ವರ್ಷ ಮತ್ತು 30 ಸಾವಿರ ರೂಪಾಯಿಗಳ ದಂಡವನ್ನು ವಿಧಿಸುವಂತಹ ಪ್ರಾವಿಷನ್ ಸಹ ಇದೆ. ಅದನ್ನೇ ಆಧರಿಸಿ ಈ ವಿಧೇಯಕವನ್ನು ತರಲಾಗಿದೆ. ವಿಶೇಷವಾಗಿ ಸೆಕ್ಷನ್ 3ಕ್ಕೆ ತಿದ್ದುಪಡಿಯನ್ನು ತರುವಂತಹ ಅವಶ್ಯಕತೆ ಇದೆ. ಆದ್ದರಿಂದ ಈ ವಿಧೇಯಕ್ಕೆ ಗೌರವಾನ್ವಿತ ಸದಸ್ಯರೆಲ್ಲರೂ ತಮ್ಮ ಬೆಂಬಲವನ್ನು ನೀಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಂಡೆಪ್ಪ ಖಾಶೆಂಪೂರ(ಸಹಕಾರ ಸಚಿವರು):–** ಸನ್ಮಾನ್ಯ ಸಭಾಪತಿಯವರೆ, ಈಗಾಗಲೇ ಜಾರಿಯಲ್ಲಿರುವ The Karnataka Money Lenders Act ನಲ್ಲಿ ಅವರು ಹೇಳಿರುವಂತಹ ಅಂಶಗಳು ಇವೆ ಎನ್ನುವ ಮಾತನ್ನಷ್ಟೇ ಹೇಳಬೇಕಾಗಿದೆ. ಬೇರೇನೂ ಇಲ್ಲ. ಈ ಕಾಯಿದೆಯಲ್ಲಿ ಅಸಲಿಗಿಂತ ಹೆಚ್ಚಿನ ಪ್ರಮಾಣದ ಬಡ್ಡಿಯನ್ನು ಹಾಕುವಂತಿಲ್ಲ ಎನ್ನುವುದು ಇದೆ. ಒಂದು ವೇಳೆ ಇಂತಹ ಪ್ರಕರಣಗಳು ಕಂಡುಬಂದರೆ ನ್ಯಾಯಾಲಯಗಳು ಸಹ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಧ್ಯಪ್ರವೇಶಿಸುವಂತಿಲ್ಲ ಎಂದು ಈ ಕಾಯಿದೆಯಲ್ಲಿದೆ. ಆದ್ದರಿಂದ ಈ ಬಗ್ಗೆ ಮತ್ತೊಂದು ವಿಧೇಯಕವನ್ನು ತರುವಂತಹ ಅವಶ್ಯಕತೆ ಇಲ್ಲ ಎನ್ನುವುದು ನನ್ನ ಭಾವನೆಯಾಗಿದೆ.

**Sri SHARANAPPA MATTUR:-** I have also come from a judicial background having good knowledge about The Karnataka Money Lenders Act, 1961. Section 26 of that Act says about the same issues.

(Contd.)

(466) 14.12.2018 : 1.10 ಪಿಕೆ:ಆರ್‌ಎನ್.

ಶ್ರೀ ಶರಣಪ್ಪ ಮಟ್ಟೂರ(ಮುಂದುವರೆದುದು...)

At the same time the Debt Relief Act is also there and Section 4 is also defines about the same. Still in which Sec.2 defines about the "ಸಾಲಗಾರ", "ಕೃಷಿಕ" ಮತ್ತು "ಕೃಷಿ ಭೂಮಿ" ಈ ವಿಶೇಷ ಶಬ್ದಗಳ ಸಂಬಂಧ ಸೆಕ್ಷನ್ 26 ಇದ್ದರೂ ಕೂಡ today I would like to bring in to the notice of all the honourable members of this House. "***Power of Court to limit interest recoverable in certain cases.—*** *Notwithstanding anything contained in any agreement or any law for the time being in force, no Court shall in respect of any loan whether advanced before or after the date on which this Act comes into force, decree, on account of interest, a sum greater than the principal of the loan due on the date of the decree.*" ಎಂದು 1961ರ The Karnataka Money Lenders Act ಹೇಳುತ್ತದೆ. ಆದರೆ, ಇದು ಕೃಷಿಕ, ಕೃಷಿ ಭೂಮಿಗೆ ಸಂಬಂಧಪಟ್ಟಂತೆ ತೆಗೆದುಕೊಂಡಂಥ ಸಾಲದ ಬಗ್ಗೆ ಇದೆ. ಮಾನ್ಯ ಸಚಿವರು ಹೇಳಿದ್ದನ್ನು ನಾನು ಗಮನಿಸಿದೆ. ಅವರೂ ಕೂಡ ಬಹಳ fair ಆಗಿ ಹೇಳಿದ್ದಾರೆ. ಆದರೆ ಅಲ್ಲಿ "ಸಾಲಗಾರ" ಎನ್ನುವ ಶಬ್ದ ಮಾತ್ರ ಇದೆ. ಇಲ್ಲಿ, ಕೃಷಿಕ ಕೃಷಿಕನಾಗಿದ್ದು, ಕೃಷಿ ಭೂಮಿಯ ಮೇಲೆ ಸಾಲವನ್ನು ಪಡೆದುಕೊಂಡಿರುವವನ ಮೇಲೆ ಹೆಚ್ಚು ಒತ್ತಡ ಇದ್ದಾಗ ಅವನಿಗೆ molestation ಆದರೆ, ದೌರ್ಜನ್ಯಕ್ಕೆ ಒಳಪಡಿಸಿದರೆ, ಬೇರೆ ದಾರಿ ಇಲ್ಲದೇ ಇದ್ದರೆ exhorbitant interest ಎಂಬ ಶಬ್ದವನ್ನು ಉಪಯೋಗ ಮಾಡಿದ್ದಾರೆ. The intention of the Legislature to bring amendment in to this Act reason with the help of the Law Commission. ಇಲ್ಲೇನಾಗುತ್ತದೆ ಎಂದರೆ, ಅವನ ಮೇಲೆ ಯಾವುದೇ ರೀತಿಯ ಒತ್ತಡ



ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರಬಾರದು ಎಂದು The Karnataka Money Lenders Act, 1961 and as well as The Karnataka Debt Reliefs Act,1976. ಈ ಎರಡನ್ನು ನಾನು ಗಮನದಲ್ಲಿಟ್ಟು, ಈ ವಿಧೇಯಕದ ಅವಶ್ಯಕತೆ ಇದೆ ಎಂದು ಹೇಳುತ್ತಾ ತಾವೆಲ್ಲರೂ ಬೆಂಬಲ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ರೈತರ ಪರವಾಗಿರತಕ್ಕಂಥ ಈ ವಿಧೇಯಕವನ್ನು ಸ್ವಾಗತಿಸುತ್ತೇನೆ. ಆದರೆ, ಸಮ್ಮಿಶ್ರ ಸರ್ಕಾರದಲ್ಲೇ controversy ಇದೆ. ಸಂಬಂಧಪಟ್ಟ ಸಚಿವರು, ಈಗಾಗಲೇ ನಮ್ಮಲ್ಲಿ ಕಾಯಿದೆ ಇದೆ; ಆ ಕಾಯಿದೆ ಅಡಿಯಲ್ಲೇ ನಿಯಂತ್ರಣ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಈಗಾಗಲೇ ಇರುವ ಕಾಯಿದೆ ಏನಿದೆ ಅದರ ಪ್ರತಿಯನ್ನು ಕೊಟ್ಟರೆ, ಆ ಪ್ರತಿಯನ್ನು ಮತ್ತು ಈ ವಿಧೇಯಕದಲ್ಲಿರುವ ಅಂಶಗಳನ್ನು ಹೋಲಿಕೆ ಮಾಡಿ ನೋಡಬೇಕಾಗುತ್ತದೆ. ಒಟ್ಟಿನಲ್ಲಿ ರೈತರಿಗೆ ಇದರಿಂದ ಅನುಕೂಲ ಆಗಬೇಕು. ಅಸಲು ಮೊತ್ತಕ್ಕಿಂತ ಬಡ್ಡಿಯೇ ಜಾಸ್ತಿಯಾಗಬಾರದು ಎನ್ನುವ ಹಿನ್ನೆಲೆಯಲ್ಲಿ ಈ ವಿಧೇಯಕ ತಂದಿದ್ದಾರೆ. ಈಗಾಗಲೇ ಈ ಕುರಿತ ಕಾಯಿದೆ ಇದೆ ಎನ್ನುವುದಾದರೆ ಮಾನ್ಯ ಸಚಿವರು ಅದರ ಪ್ರತಿಯನ್ನು ನಮಗೆ ಒದಗಿಸಲಿ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಂಕನೂರರವರೆ, ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**ಶ್ರೀ ಎಸ್.ವ್ಹಿ.ಸಂಕನೂರ:-** ನಿಮ್ಮದು ತಪ್ಪು ಎಂದು ನಾವು ಹೇಳುತ್ತಿಲ್ಲ. ಈ ವಿಧೇಯಕವನ್ನು ನಾವು ಸ್ವಾಗತಿಸುತ್ತೇವೆ. ಈಗಾಗಲೇ ಸಹಕಾರ ಸಂಘಗಳ ಕಾಯಿದೆಯೊಳಗೆ ಈ ನಿಯಮಗಳು ಇವೆ ಎಂದು ಹೇಳಿ, ಈ ವಿಧೇಯಕದ ಅವಶ್ಯಕತೆ ಇಲ್ಲ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಅದರ ಕಾಪಿ ಕೊಟ್ಟರೆ ನಾವು ಹೋಲಿಕೆ ಮಾಡಿನೋಡಬಹುದು.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಂಕನೂರರವರು ಮಾನ್ಯ ಸಚಿವರು ಹೇಳಿದ್ದನ್ನು ಅರ್ಥ ಮಾಡಿಕೊಂಡಿಲ್ಲ ಎಂದು ನಾನು ಭಾವಿಸುತ್ತೇನೆ. ಕೋ-ಆಪರೇಟಿವ್ ಆಕ್ಟ್‌ನಲ್ಲಿ ಈಗಾಗಲೇ ಕಾಯಿದೆ ಇದೆ ಎಂದು ಹೇಳಿಲ್ಲ. The Karnataka Money Lenders Act. 1961 ನಲ್ಲಿ there is a provision ಎಂದು ಅವರು ಹೇಳಿದರು, ಮಾನ್ಯ ಮಾನ್ಯ ಸದಸ್ಯರು ಅದನ್ನು ಫಾಲೋ ಮಾಡಬೇಕಾಗಿತ್ತು. ತಾವು ರೈತ ಕುಟುಂಬದಿಂದ ಬಂದಿದ್ದರಿಂದ ತಮಗೂ ಕೂಡ ಇದರ ಬಗ್ಗೆ ಅರಿವು ಇದೆ; ಕೃಷಿಕ ಕೃಷಿ ಭೂಮಿ ಮೇಲೆ ಮಾಡಿರುವ ಸಾಲಕ್ಕೆ exhorbitant interest charge ಮಾಡಬಾರದು ಎನ್ನುವ ದೃಷ್ಟಿಯಿಂದ ಸೆಕ್ಷನ್ 3ಕ್ಕೆ ತಿದ್ದುಪಡಿಯನ್ನು ಮಾತ್ರ ಕೇಳಿದ್ದೇವೆ. ವಿಧೇಯಕವನ್ನು ಮೂವ್ ಮಾಡುವ ಉದ್ದೇಶ ಏನೆಂದರೆ what is the

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

reason beyond it for moving the Private Member Bill ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. *The Karnataka Debt Relief Act, 1976* ನಲ್ಲಿ ಒಂದು ಸಾಲು ಇದೆ. ಯಾವುದೇ ಒಬ್ಬ ವ್ಯಕ್ತಿ ಸಾಲವನ್ನು ಪಡೆದಾಗ 1 ಲಕ್ಷ 20 ಸಾವಿರಕ್ಕಿಂತ ಕಡಿಮೆ ಇದ್ದರೆ ಅವನ ಮೇಲೆ stringent should not impose for the recovery of loan exhorbitan than the principal amount ಎಂದಿದೆ. ಎರಡನೆಯದಾಗಿ, ಸೆಕ್ಷನ್ 26ರಲ್ಲಿ, "ಸಾಲಗಾರ" ಎನ್ನುವ ಶಬ್ದವನ್ನಷ್ಟೇ ಉಪಯೋಗ ಮಾಡದೇ, ಅವನು ಪಡೆದಿರುವ ಸಾಲದ ಮೊತ್ತಕ್ಕಿಂತ ಬಡ್ಡಿ ಹೆಚ್ಚಾದಾಗ ಅದನ್ನು ರಿಕವರಿ ಮಾಡಬಾರದು ಎಂದು ಹೇಳಿದೆ. ಈಗ ನಾನು ಮೂವ್ ಮಾಡುತ್ತಿರುವ ವಿಧೇಯಕದ ಉದ್ದೇಶವೇನೆಂದರೆ, ಕೃಷಿಕ ಕೃಷಿಯ ಭೂಮಿ ಮೇಲೆ ಸಾಲವನ್ನು ಪಡೆದಾಗ ಅವನಿಗೆ ಯಾವುದೇ ರೀತಿಯ ಹೆಚ್ಚಿನ ಒತ್ತಡವನ್ನು ಹಾಕಿ, ಅವನ ವಿರುದ್ಧ ಯಾವುದೇ ಕೋರ್ಟ್‌ನಿಂದ ಆದೇಶವನ್ನು ಪಡೆಯಬಾರದು, ಅವನ ವಿರುದ್ಧ ಡಿಕ್ರಿ ಮಾಡಬಾರದು, ಆತನ ಭೂಮಿಯನ್ನು ತೆಗೆದುಕೊಳ್ಳಬಾರದು, ಡೆಪಾಸಿಟ್ ಇರಬಹುದಾದ ಮೊತ್ತವನ್ನು forfeiture ಮಾಡಬಾರದು ಎನ್ನುವ ಉದ್ದೇಶದ ಹಿನ್ನೆಲೆಯಲ್ಲಿ ಈ ವಿಧೇಯಕವನ್ನು ತರಲಾಗಿದೆ.

**ಸಭಾಪತಿಯವರು:-** ಮಾನ್ಯ ಸಂಕನೂರರವರೆ, ನೀವು ವಿಧೇಯಕವನ್ನು ಸ್ವಾಗತ ಮಾಡುತ್ತೀರಾ?

**ಶ್ರೀ ಎಸ್.ವ್ಹಿ.ಸಂಕನೂರ:-** ನಾನು ಸ್ವಾಗತ ಮಾಡುತ್ತೇನೆ. ಅಸಲಿಗಿಂತ ಬಡ್ಡಿ ಜಾಸ್ತಿ ಆಗಬಾರದು ಎಂಬ general principle ಇದೆ. ಇದೇ ಅಂಶವನ್ನು ಪ್ರಸ್ತುತ ವಿಚಾರಕ್ಕೂ ಅಪ್ಲೈ ಮಾಡಬಹುದಲ್ಲವೇ ಎನ್ನುವುದು ನಮ್ಮ ಅಭಿಪ್ರಾಯವಾಗಿದೆ. ಈ ವಿಧೇಯಕವನ್ನು ತರಬಾರದು ಎನ್ನುವುದು ನಮ್ಮ ಉದ್ದೇಶ ಇಲ್ಲ. ಇದು ರೈತರ ಪರವಾಗಿದೆ; ಇದನ್ನು ಸ್ವಾಗತ ಮಾಡುತ್ತೇವೆ.

**ಡಾ:ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಪ್ರಸ್ತುತ ಇರುವ ನಿಯಮಕ್ಕೆ ತಿದ್ದುಪಡಿ ತರುವ ಉದ್ದೇಶ ಸ್ಪಷ್ಟವಾಗಿದೆ. ಕಾಯಿದೆ ಎನ್ನುವ ಶಬ್ದ ಬಂದರೆ ಅದು, ಅಲ್ಲಿ ಯಾವುದೇ ರಿಯಾಯಿತಿಗೆ ಅವಕಾಶ ಇರುವುದಿಲ್ಲ ಎಂಬುದನ್ನು ಸೂಚಿಸುತ್ತದೆ. ಏಕೆಂದರೆ, ಸಾಲವನ್ನು ಕೊಡುವ ಬ್ಯಾಂಕುಗಳು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವ ಜವಾಬ್ದಾರಿ ಕೂಡ ಈ ಸದನಕ್ಕೆ ಇದೆ. ಮಾನ್ಯ ಸಭಾಪತಿಯವರೇ, ಅಸಹಾಯಕರಿಗೆ ಸಾಲವನ್ನು ಒದಗಿಸುತ್ತಾರೆ. ಅವರ ಜೀವನಕ್ಕೆ ಭದ್ರತೆಯನ್ನು ಒದಗಿಸಬೇಕು ಎಂದು ಸಾಲವನ್ನು ಒದಗಿಸಲಾಗುತ್ತದೆ. ಆದರೆ, ಸಾಲದ ವಸೂಲಾತಿಯ ಪ್ರಕ್ರಿಯೆಯನ್ನು ನಾವು ನೋಡಬೇಕಾಗುತ್ತದೆ. ಒಬ್ಬ ಬ್ಯಾಂಕ್ ಅಧಿಕಾರಿಗೆ ಸಾಲವನ್ನು ರಿಕವರಿ ಮಾಡಬೇಕು ಎಂದು ನಮ್ಮ ವ್ಯವಸ್ಥೆಯೇ ಹೇಳುತ್ತದೆ. ಬ್ಯಾಂಕ್‌ನಲ್ಲಿ ತೊಡಗಿಸುವುದು ಸಾರ್ವಜನಿಕರ ಹಣ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆರಿಗೆದಾರರೂ ಕೂಡ ಇವತ್ತು ಇದರ ಬಗ್ಗೆ ಸೂಕ್ಷ್ಮವಾಗಿ ಪ್ರಶ್ನೆ ಮಾಡುತ್ತಾರೆ. ಸಾಲದ ಹಣ ಸದುಪಯೋಗ ಆಗುವ ಹಾಗೆ, ಒಂದು ಕಾಲಮಿತಿಯಲ್ಲಿ ರೈತರ ಸಮಸ್ಯೆಗಳನ್ನು ನೋಡುವ ವ್ಯವಸ್ಥೆ ಉತ್ತಮ ಆಗಬೇಕು. ಯಾವ ಯಾವ ಸನ್ನಿವೇಶದಲ್ಲಿ ಯಾವ ರೀತಿಯ ಸಾಲವನ್ನು ವಸೂಲಿ ಮಾಡಬೇಕು ಎಂದು ಫೀಲ್ಡ್ ಅಧಿಕಾರಿಗಳು ಮಾನದಂಡಗಳ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ವರ್ತಿಸಬೇಕಾಗುತ್ತದೆ. ಆ ರೀತಿ ವರ್ತಿಸುವುದಕ್ಕೆ ಅನುಕೂಲ ಆಗುವ ಹಾಗೆ ಸ್ಪಷ್ಟತೆಯನ್ನು ಮೂಡಿಸುವುದಕ್ಕೆ ನಾವು ತಿದ್ದುಪಡಿಯನ್ನು ತರುತ್ತಿದ್ದೇವೆ. ಒಟ್ಟಾರೆ ಸಂದರ್ಭವನ್ನು ನೋಡಿಕೊಂಡು, ಪಡೆದಂತಹ ಅಸಲಿಗಿಂತ ದುಪ್ಪಟ್ಟು ಬಡ್ಡಿಯನ್ನು ವಸೂಲು ಮಾಡಬಾರದು ಎನ್ನುವುದು ತಾತ್ಪರ್ಯ. ವಿಶೇಷವಾಗಿ ಇದರಲ್ಲಿ ಕೃಷಿಕರನ್ನು ಮನಸ್ಸಿನಲ್ಲಿಟ್ಟುಕೊಂಡು ಈ ತಿದ್ದುಪಡಿಯನ್ನು ತರಲಾಗುತ್ತಿದೆ. ನಾನು ಸರ್ಕಾರಕ್ಕೆ ಒಂದು ವಿನಂತಿ ಮಾಡುತ್ತೇನೆ. ಇತ್ತೀಚಿನ ಸಾಲಮನ್ನಾ ಯೋಜನೆ ಏನಿದೆ ಅದು ಒಳ್ಳೆಯ ಉದ್ದೇಶವಾಗಿದೆ. ಸಾಲಮನ್ನಾ ಯೋಜನೆಯನ್ನು ಜಾರಿಮಾಡುವಾಗ ನಾವು ವಿಧಿಸಿರುವಂತಹ ಷರತ್ತುಗಳ ಪಟ್ಟಿಯನ್ನು ನೋಡಿದರೆ, ನಾವು ಯಾವ ಸ್ಪಿರಿಟ್‌ಯಿಂದ ಈ ತಿದ್ದುಪಡಿ ತರುವುದಕ್ಕೆ ಹೊರಟಿದ್ದೇವೆಯೋ ಅದನ್ನು ಕಾರ್ಯಗತ ಮಾಡುವುದಕ್ಕೆ ಬ್ಯಾಂಕ್ ಅಧಿಕಾರಿಗಳಿಗೆ ಕಷ್ಟವಾಗುತ್ತದೆ. ಆದಕಾರಣ, ಅದಕ್ಕೊಂದು ಸ್ಪಷ್ಟತೆಯನ್ನು ಕೊಡುವುದಕ್ಕೆ ಪ್ರತಿಪಕ್ಷದಲ್ಲಿರುವವರು, ಮಾನವೀಯತೆಯಿಂದ ಕೃಷಿಕರ ಬಗೆಗಿನ ಕಾಳಜಿಯನ್ನು ಗಮನದಲ್ಲಿಟ್ಟುಕೊಂಡು ನಾವು ಸಹಕಾರ ಮಾಡುತ್ತಿದ್ದೇವೆ. ಸಾಲಮನ್ನಾ ಯೋಜನೆಗೆ ಸರ್ಕಾರ ಹಾಕಿರುವ ಷರತ್ತುಗಳು ಅಸಂಬದ್ಧವಾಗಿದೆ. ಒಬ್ಬ ವ್ಯಕ್ತಿಗೆ ರೂ. 20 ಸಾವಿರ ಸಂಬಳ ಬಂದರೆ ಅವರು ಸಾಲಮನ್ನಾ ಯೋಜನೆಗೆ ಅರ್ಹರಲ್ಲ ಎಂದು ಹೇಳುವುದು ಸರಿಯಲ್ಲ. ಹಳ್ಳಿಯಲ್ಲಿ ಜೀವನ ಮಾಡಲು ಕಷ್ಟ ಇರುತ್ತದೆ ಎನ್ನುವ ಕಾರಣಕ್ಕೆ ಆ ಜನ ನಗರ ಪ್ರದೇಶಗಳಿಗೆ ಬರುತ್ತಾರೆ. ರೂ. 20 ಸಾವಿರ ಮೊತ್ತದ ಸಂಬಳ ಬಹಳ ದೊಡ್ಡ ಮೊತ್ತವಲ್ಲ. ಮನೆ ಬಾಡಿಗೆಗೆ ರೂ. 10 ಸಾವಿರ ಹೋಗಿ, ಆತನ ಇತರ ಖರ್ಚುಗಳನ್ನು ಕಳೆದರೆ ರೂ. 5 ಸಾವಿರ ಕೂಡ ಉಳಿಯುವುದಿಲ್ಲ. ಇಂತಹ ತಿದ್ದುಪಡಿ ತಂದರೆ ಆತನಿಗೆ ಸುರಕ್ಷತೆ ಇರುತ್ತದೆ. ಸದನದಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳ ಇದ್ದಾರೆ. ಮಾನ್ಯ ಸಭಾಪತಿಯವರೇ, ಮಂಡ್ಯದಂತಹ ನೀರಾವರಿ ಹೊಂದಿರುವ ಜಿಲ್ಲೆಯಲ್ಲಿ ಹೆಚ್ಚು ರೈತರ ಆತ್ಮಹತ್ಯೆಯ ಪ್ರಕರಣಗಳು ಆಗುತ್ತಿರುವುದು ಏಕೆ? ಸಾಲಗಾರರು ವಸೂಲಿ ಮಾಡುವುದಕ್ಕೆ ರೈತರನ್ನು ಮನೆ ಮುಂದೆ ಬಂದಾಗ, ಆತ ತನ್ನ ಆತ್ಮಗೌರಕ್ಕೆ ಚ್ಯುತಿ ಬಂತು ಎಂದು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಆದ್ದರಿಂದ ಈ ವಿಧೇಯಕದ ಮೂಲಕ ಒಂದು ಸ್ಪಷ್ಟತೆಯನ್ನು ಮೂಡಿಸಿ, ಅಧಿಕಾರಿಗಳೂ ಕೂಡ ಕಾನೂನು ಜಾರಿ ಮಾಡುವುದಕ್ಕೆ ಅನುಕೂಲವಾಗುವ ಹಾಗೆ ಮತ್ತು ಒತ್ತಡಕ್ಕೆ ಒಳಗಾಗದ ಹಾಗೆ ರೈತರಿಗೂ ತಿಳುವಳಿಕೆ ಕೊಡಬೇಕು. ಈ ಸದ್ಭಾವನೆಯನ್ನು ಅರ್ಥ ಮಾಡಿಕೊಂಡು ಸದರಿ ತಿದ್ದುಪಡಿಗೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಮಾನ್ಯ ಮಟ್ಟೂರರವರು ತಂದಿರುವ "ಕರ್ನಾಟಕ ಅಸಲು ಹಣಕ್ಕಿಂತ ಹೆಚ್ಚು ಬಡ್ಡಿ ವಿಧಿಸುವಿಕೆ ನಿಷೇಧ ವಿಧೇಯಕ-2018" ಅನ್ನು ನಾನು ಸ್ವಾಗತ ಮಾಡುತ್ತೇನೆ. ಇದುವರೆಗೂ Karnataka Money Lenders Act ನಲ್ಲಿ, ನಿಯಮಗಳಿದ್ದರೂ ಆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆತರಲು ಆಗುತ್ತಿರಲಿಲ್ಲ. ಏಕೆಂದರೆ ಆ ಕಾನೂನಿನಲ್ಲಿ ಸಾಕಷ್ಟು ನ್ಯೂನತೆಗಳಿವೆ.

(ಮುಂದುವರೆದಿದೆ...)

(467)14–12–2018 ಡಿಎಸ್–ಆರ್‌ಎನ್ 1.20

**ಶ್ರೀ ಐವನ್ ಡಿ'ಸೋಜಾ(ಮುಂದುವರೆದುದು...)**

Money lend ಮಾಡುವವನು ಯಾರಾದರು ಹಣ ಕೊಡಬೇಕಾದರೆ ಅವನ ಭೂಮಿಯನ್ನು ಸಬ್–ರಿಜಿಸ್ಟ್ರಾರ್ ಆಫೀಸ್‌ನಲ್ಲಿ ರಿಜಿಸ್ಟರ್ ಮಾಡಿಕೊಡಬೇಕು ಎಂದು ಇದೆ. ಅದನ್ನು ಅವರು ಮಾಡುವುದಿಲ್ಲ, ತಪ್ಪಿಸಿಕೊಳ್ಳುತ್ತಾರೆ ಮತ್ತು ಚಿನ್ನ ಅಥವಾ ಬೇರೆ ಬೆಲೆ ಬಾಳುವ ವಸ್ತುಗಳನ್ನು ಕೊಟ್ಟುಬಿಟ್ಟರೆ ಯಾವುದೇ ಸರಿಯಾದ ದಾಖಲೆಗಳನ್ನು ಅವರು ಇಟ್ಟುಕೊಂಡಿರುವುದಿಲ್ಲ. ಹಾಗಾಗಿ ಅನೇಕ ನ್ಯೂನತೆಗಳಿರತಕ್ಕಂಥ ಈ ಕಾನೂನಿಗೆ ರೈತನಿಗೆ ಸಾಲ ಕೊಡಬೇಕಾಗಿದ್ದರೆ, ಅವನ ಭೂಮಿಯ ಮೇಲೆ ಸಾಲ ಕೊಡಬೇಕಾಗಿದ್ದರೆ ಅವನು ಆ ಭೂಮಿಯನ್ನು ಸಬ್–ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಅಡ ಇಡಬೇಕು ಎಂದು ಮಾಡಿದರೆ ಮಾತ್ರ ಅಂತಹವರನ್ನು ಈ ಕಾನೂನಿನಿಂದ ಹಿಡಿಯವುದಕ್ಕೆ ಸಾಧ್ಯವಾಗುತ್ತದೆ. ಸಾಲ ಕೇಳುವುದಕ್ಕೆ ಬಂದ ಕೂಡಲೇ ಭೂಮಿಯ ದಾಖಲೆ ತೆಗೆದುಕೊಳ್ಳುತ್ತಾನೆ, ಕಪಾಟಿನಲ್ಲಿಟ್ಟುಕೊಂಡು ಸಾಲ ಕೊಡುತ್ತಾರೆ. ಇನ್ನು ದಾಖಲೆ ಕೊಡಬೇಕಾದರೆ ಅವನು ಹಣ ಕೊಟ್ಟರೆ ಮಾತ್ರ ಕೊಡುತ್ತಾರೆ. ಎಷ್ಟು ಬಡ್ಡಿ ವಿಧಿಸುತ್ತಾರೆಂದರೆ ಎಲ್ಲಿಯೂ ಅವರಿಗೆ ಕಾನೂನಿನಲ್ಲಿ ನಿರ್ಬಂಧ ಇರುವುದಿಲ್ಲ. ಹಾಗಾಗಿ ಈ ವಿಧೇಯಕದಲ್ಲಿ ತಂದಿರುವಂತಹ ವಿಚಾರದಲ್ಲಿ ಪ್ರಮುಖವಾಗಿರುವಂಥದ್ದು ಸೆಕ್ಷನ್ 3 ಕ್ಕೆ ಮಾನ್ಯ ಸದಸ್ಯರೇನು ಕೇಳಿದ್ದಾರೆ, 'ಯಾವುದೇ ನ್ಯಾಯಾಲಯವು ಅಸಲು ಹಣಕ್ಕಿಂತ ಹೆಚ್ಚಿನ ಬಡ್ಡಿಯನ್ನು ಸಂದಾಯ ಮಾಡುವಂತೆ ಯಾವುದೇ ಡಿಕ್ರಿಯನ್ನು ಹೊರಡಿಸತಕ್ಕದ್ದಲ್ಲ ಮತ್ತು ಹರಾಜನ್ನು ನಿಷೇಧಿಸುವುದು' ಅದು ರೈತರಿಗೆ ಎಂದು ಹೇಳುವಂತಹ ಮಾತನ್ನು ಹೇಳಿದ್ದಾರೆ. ಅವರು ಕೃಷಿ ಭೂಮಿಗೆ ಸಂಬಂಧಿಸಿದಂತೆ ಎಂದು ಹೇಳಿದ್ದಾರೆ. ಇದನ್ನು ಮಾನ್ಯ ಸಚಿವರು ಗಮನದಲ್ಲಿಟ್ಟುಕೊಳ್ಳಬೇಕು. ಸೆಕ್ಷನ್ 4 ದಂಡ:– ದಂಡದ ವಿಚಾರವಾಗಿ ನಾವೇನು ಹೇಳಿದ್ದೇವೆಂದರೆ, ಅಂಥವರು ಯಾರಾದರೂ ಸಿಕ್ಕಿಬಿದ್ದರೆ ಲಕ್ಷದಲ್ಲಿ ಯಾರಾದರೂ ಒಬ್ಬರು ಸಿಗಬಹುದು. ಈ ಕಾನೂನಿನ ಅಡಿಯಲ್ಲಿ ಸಿಕ್ಕಿಬಿದ್ದು, Money Lenders Act ನ ಅಡಿಯಲ್ಲಿ ಮಾಲೀಕರಿಗೆ ಶಿಕ್ಷೆಯನ್ನು ವಿಧಿಸಬೇಕಾಗುತ್ತದೆ. ಅವರಿಗೆ ಶಿಕ್ಷೆ ಏನೆಂದರೆ, below three years ಆದರೆ ಅದು bilable offence ಆಗಿಬಿಡುತ್ತದೆ. ಆತನನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ immediate bail ಆಗಿ ಅವರನ್ನು ಬಿಟ್ಟುಬಿಡುತ್ತಾರೆ. ಮಾನ್ಯ ಸಚಿವರಿಗೆ ನನ್ನ ವಿನಂತಿಯೇನೆಂದರೆ, above three years ಎಂದು ಮಾಡಬೇಕು. ತಮಗೆ ಗೊತ್ತಿರುವಂತೆ below three years ಇದ್ದರೆ ನ್ಯಾಯಾಧೀಶರು ಬೇಲ್ ಮೇಲೆ ಬಿಡತಕ್ಕಂಥ ಅವಕಾಶಗಳಿವೆ. ಅವರು ಸಿಕ್ಕಿ ಬೀಳುವುದೇ ಕಷ್ಟ. ಅಂತಹವರಿಗೆ below three years, punishment

"ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಮಾಡಿಬಿಟ್ಟರೆ he is entitled for bail at all times. ಅದನ್ನು ಬಂದೋಬಸ್ತ್ ಮಾಡಲಿಕ್ಕೆ ಈ ಶಿಕ್ಷೆಯನ್ನು ಸಹ three years and above ಎಂದು ಮಾಡಿ. If at all ನಾವು ಅಂಗೀಕರಿಸಿದರೆ ಅದನ್ನು ಬದಲಾವಣೆ ಮಾಡಬೇಕು. ನಾನು ಋಣ ಮುಕ್ತ ಮಾಡುವಂಥ ಕಾಯ್ದೆಯನ್ನು ತರಲಿಕ್ಕೆ ಹೊರಟಿದ್ದೇನೆ. ಈಗಾಗಲೇ ಸುಗ್ರೀವಾಜ್ಞೆಯನ್ನು ಮಾಡಿದ್ದೇವೆ. ಅದು ಇಂಪ್ಲಿಮೆಂಟ್ ಆಗಲಿಲ್ಲವೆಂದು ಕಾಣಿಸುತ್ತೇವೆ. ಅ ಕಾನೂನು ಈ ಸದನದಲ್ಲಿ ತಮ್ಮ ಮುಂದೆ ಬರಬಹುದು ಎಂದು ಹೇಳಿದ್ದೇನೆ. ಋಣ ಮುಕ್ತ ಕಾಯ್ದೆಯನ್ನು ತಂದಾಗ ಬಹಶಃ Money Lenders Act ಗೂ ಇದಕ್ಕೂ ಇರತಕ್ಕಂಥ ಕೆಲವು interconnected ಕಾನೂನುಗಳ ಬಗ್ಗೆ ನಾವು ಆಲೋಚನೆ ಮಾಡಬೇಕಾಗುತ್ತದೆ. ಈಗ Money Lenders Act ಇಲ್ಲ. ಈ ಬಗ್ಗೆ ಮಾನ್ಯ ಸಂಕನೂರುರವರು ಸರಿಯಾಗಿ ಹೇಳಿದ್ದಾರೆ. ಅದರಲ್ಲಿ ಮತ್ತು ಇದರಲ್ಲಿ ಇರತಕ್ಕಂಥ ತಿದ್ದುಪಡಿಗೆ ಅವಶ್ಯಕತೆ ಎಲ್ಲಿದೆ ಎನ್ನುವುದಕ್ಕೆ ನಮ್ಮ ಹತ್ತಿರ ಎಲ್ಲಿಯಾದರೂ ಸ್ವಲ್ಪ ವಿವರಗಳು ಇದಿದ್ದರೆ ನಮಗೆ ಬಹಳ ಸುಲಭವಾಗಿ ಇದನ್ನು ವಿಶ್ಲೇಷಣೆ ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ಅವಸರವಾಗಿ ಇದನ್ನು ತಿದ್ದುಪಡಿ ಮಾಡುವುದಕ್ಕಿಂತ ಇನ್ನೊಮ್ಮೆ ಇದರ ಬಗ್ಗೆ ಆಲೋಚನೆ ಮಾಡಲಿಕ್ಕೆ ಮಾನ್ಯ ಸದಸ್ಯರುಗಳಿಗೆ ಅವಕಾಶವನ್ನು ಮಾಡಿಕೊಡಬೇಕು. ಆಗ ಮಾತ್ರ ಒಳ್ಳೆಯ ಕಾನೂನು ಬರಲಿಕ್ಕೆ ಸಾಧ್ಯವಾಗಬಹುದು ಎನ್ನುವುದು ನನ್ನ ಒಂದು ಸಲಹೆಯಾಗಿದೆ.

**ಶ್ರೀ ಶರಣಪ್ಪ ಮಟ್ಟೂರು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮ್ಮ ವಿರೋಧ ಪಕ್ಷದ ಸದಸ್ಯರಾದ ಸಹೋದರಿ ಡಾ:ತೇಜಸ್ವಿನಿಗೌಡರವರು ಬಹಳ ಒಳ್ಳೆಯ ಸಲಹೆಗಳನ್ನು ನೀಡಿದರು. ಆದರೆ relaxation of condition for the recovery of loan ಬಗ್ಗೆ ಹೇಳಿದರು. 1961ರಲ್ಲಿ ಆ ಕಾಯ್ದೆ ಇತ್ತು, ಅದೇ ರೀತಿ 1976 ರಲ್ಲಿಯೂ ಸಹ ಈ ಒಂದು Karnataka Debt Relief ಕಾಯ್ದೆ ಇತ್ತು. ಹಾಗಾಗಿ ಇಲ್ಲಿ condition relaxation ಪ್ರಶ್ನೆ ಬಂದಿಲ್ಲ. ಮಾನ್ಯ ಐವನ್ ಡಿ'ಸೋಜಾರವರು ಸಹ ಹೆಚ್ಚಿನ ಶಿಕ್ಷೆಯನ್ನು ವಿಧಿಸಲು ಅವಕಾಶ ಮಾಡಬೇಕೆಂದು ಕೆಲವು ಸಲಹೆಗಳನ್ನು ನೀಡಿದರು. ಈಗಾಗಲೇ ಸೆಕ್ಷನ್‌ನಲ್ಲಿಯೇ correct ಆಗಿ impose ಆಗಿದೆ. ಸಾಲ ಕೊಟ್ಟವನು ಅವನಿಗೆ exorbitant interest charge ಮಾಡಿ, harassment ಮಾಡಿ ಅವನ ಆತ್ಮಹತ್ಯೆಗೆ ಕಾರಣವಾದರೆ, ಅವನ ಆಸ್ತಿಯನ್ನು ಮಾರಲಿಕ್ಕೆ ಅಥವಾ ಮುಟ್ಟುಗೋಲು ಹಾಕಲಿಕ್ಕೆ ಕಾರಣರಾದರೆ, ಅಂತಹ ವ್ಯಕ್ತಿಗೆ 3 ವರ್ಷ ಶಿಕ್ಷೆ ಮತ್ತು 30,000 ರೂಪಾಯಿಗಳ ದಂಡ ವಿಧಿಸುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಅದನ್ನು cognizable and non-cognizable as defined in Civil Procedure Code 1973 is need not to look into it ಎನ್ನುವಂತಹ ಉತ್ತರವನ್ನು ಅವರಿಗೆ ಕೊಡುವುದಕ್ಕೆ ನಾನು ಬಯಸುತ್ತಿದ್ದೇನೆ. ಇದು ಸಹ ವಿಧೇಯಕದಲ್ಲಿದೆ. ನಾವು ಈ ವಿಧೇಯಕದಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಂದಿರುವಂಥದ್ದೇನೆಂದರೆ, "ಸಾಲಗಾರ" ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಅಧಿನಿಯಮ, 2004 ರಲ್ಲಿ ಇತ್ತು. ಅದರಲ್ಲಿ Section 2 defines, ಎರಡು ವಿಚಾರಗಳನ್ನು ಹೇಳುತ್ತದೆ. "ಸಾಲಗಾರ" ಎಂದರೆ ಮಿತಿಮೀರಿದ ಬಡ್ಡಿಯ ಮೇಲೆ ಸಾಲ ತೆಗೆದುಕೊಂಡ ಒಬ್ಬ ವ್ಯಕ್ತಿ. ಆದರೆ ನಾವು ಈಗ ತಿದ್ದುಪಡಿ ತಂದಿರುವುದೇನೆಂದರೆ, "ಸಾಲಗಾರ" ಎಂದರೆ, ಕೃಷಿ ಭೂಮಿಯ ಮೇಲೆ ನ್ಯಾಯಾಲಯಗಳ ಮೂಲಕ ಜಪ್ತಿ, ಹರಾಜು, ದಸ್ತಗಿರಿ ಅಥವಾ ಡಿಕ್ರಿಗೆ ಕಾರಣವಾಗಬಹುದಾದ ಯಾವುದೇ ವ್ಯವಹಾರ ಅಥವಾ ವ್ಯವಹರಣೆಯ ಮೇಲೆ ಯಾರೇ ಸಾಲಿಗನಿಗೆ ಭದ್ರತೆಯುಳ್ಳ ಅಥವಾ ಭದ್ರತೆಯಿಲ್ಲದ ಯಾವುದೇ ಸಾಲವನ್ನು ಸಂದಾಯ ಮಾಡುವುದಕ್ಕೆ ಹೊಣೆಗಾರನಾದ ಯಾರೇ ವ್ಯಕ್ತಿ. ಅಂದರೆ ಅದನ್ನು describe ಮಾಡಿ ಹೇಳಿರುವಂಥದ್ದು ಇದೆ. ಸೆಕ್ಷನ್ 2. ಪರಿಭಾಷೆಗಳು:- (ಬಿ) ನಲ್ಲಿ ಏನು ಹೇಳುತ್ತದೆಂದರೆ, "ಸಾಲಿಗ" ಎಂದರೆ, ಕೃಷಿ ಭೂಮಿಗಳ ಜಪ್ತಿಗೆ, ಅಂದರೆ ಇದರಲ್ಲಿ ಕೃಷಿ ಭೂಮಿ ಎಂದು ಬಂದಿದೆ.

ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುವುದೇನೆಂದರೆ, ಯಾವುದೇ ರಾಜ್ಯದಲ್ಲಾಗಲಿ ಅಥವಾ ದೇಶದಲ್ಲಾಗಲಿ, ಸಂಸತ್ತಿನಲ್ಲಾಗಲಿ, ವಿಧಾನಸಭೆಗಳಲ್ಲಾಗಲಿ, ನಾವೆಲ್ಲರೂ ರೈತರ ಬಗ್ಗೆಯೇ ಹೋರಾಟ ಮಾಡುತ್ತೇವೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಅತಿಯಾದ ಕಾಳಜಿ ಇದೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸ ಬಯಸುತ್ತೇನೆ. ಆದರೆ, ನಾವು ಇವತ್ತಿಗೂ ಹೇಳತಕ್ಕಂಥಾದ್ದು ಕೃಷಿಕ ಕೃಷಿ ಭೂಮಿಯ ಮೇಲೆ ಪಡೆದಿರುವ ಸಾಲವನ್ನು ಕಟ್ಟಲಾಗದೆ ನಾನು ಸತ್ತು ಹೋಗುತ್ತಿದ್ದೇನೆ ಅಥವಾ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂದು ನೋಟ್ ಬರೆದಿರುವುದನ್ನು ನಾವು ನೋಡಿದ್ದೇವೆ. ನೋಟ್ ಬರೆಯದೆ ಆತ್ಮಹತ್ಯೆ ಮಾಡಿಕೊಂಡಿರುವುದನ್ನು ನಾವು ನೋಡಿದ್ದೇವೆ. ಅದಕ್ಕೋಸ್ಕರ ಸಾಕಷ್ಟು ಗಲಾಟೆಗಳನ್ನು ನಾವು ಅವರ ಮೇಲೆ, ಅವರು ನಮ್ಮ ಮೇಲೆ ಮಾಡಿರುವಂತಹ ಉದಾಹರಣೆಗಳು ಸಹ ಇವೆ. ರೈತರ ಮೇಲೆ ಕಾಳಜಿ ಇಟ್ಟುಕೊಂಡು ನಾವೆಲ್ಲರೂ ಗಲಾಟೆ ಮಾಡಿರುವಂಥದ್ದು ಇದೆ. ಹಾಗಾಗಿ ಯಾವುದೇ ಒಬ್ಬ ವ್ಯಕ್ತಿ ಕೃಷಿ ಭೂಮಿಯ ಮೇಲೆ ಸಾಲ ಪಡೆಯುವವನು ಅವನೊಬ್ಬ ಕೃಷಿಕನಾಗಿರಬೇಕು, ಕೃಷಿ ಭೂಮಿ ಮೇಲೆ ಸಾಲವನ್ನು ಪಡೆದಿರಬೇಕು. ಆ ಸಾಲಕ್ಕಿಂತ ಹೆಚ್ಚಾದ ಬಡ್ಡಿ, ಅಂದರೆ greater than the principal amount ಆಗಿರಬೇಕು. ಅವನು ಪಡೆದ ಸಾಲ ಒಂದು ಲಕ್ಷ ರೂಪಾಯಿ ಇದ್ದು, ಎರಡು ಲಕ್ಷ ರೂಪಾಯಿ ಬಡ್ಡಿಯಾಗಿದ್ದರೆ ಅಂಥವನ ಮೇಲೆ ಕಿರುಕುಳ ನೀಡಿ ಅವನ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದು, ಅವನ ಆತ್ಮಹತ್ಯೆಗೆ ಕಾರಣರಾಗಿರುವಂಥವರನ್ನು; ಕೃಷಿಕ ಕೃಷಿ ಭೂಮಿಯ ಮೇಲೆ ಸಾಲ ಪಡೆದಿರುವಂತಹ ವ್ಯಕ್ತಿಗೆ ತೊಂದರೆ ಕೊಟ್ಟವನಿಗೆ ಈ ತಿದ್ದುಪಡಿ ಅವಶ್ಯಕತೆ ಇದೆ. ಸೆಕ್ಷನ್ 2 ಮತ್ತು 3 ಕ್ಕೆ ತಿದ್ದುಪಡಿಯನ್ನು ತಂದಿದ್ದೇವೆ. 2004ರ ಹಳೇ ಕಾನೂನಿಗೆ 2018ರ ಖಾಸಗಿ ವಿಧೇಯಕ ಬಹಳ ಸೂಕ್ತವಾಗಿದೆ. ರೈತರ ರಕ್ಷಣೆಗೋಸ್ಕರ ಈ ವಿಧೇಯಕದ ಅವಶ್ಯಕತೆ ಇದೆ. ಅವನು ಆತ್ಮಹತ್ಯೆ ಮಾಡಿಕೊಳ್ಳಬಾರದು, ಅವನು ಆಸ್ತಿಯನ್ನು ಕಳೆದುಕೊಳ್ಳಬಾರದು, ಅವನು ಮಾನಸಿಕವಾಗಿ ಕೃಷಿ ಕೆಲಸದಿಂದ ದೂರ ಹೋಗಬಾರದು, ಇವತ್ತು ಸಾಲದಿಂದ ಊರನ್ನು ಬಿಟ್ಟು ಕೂಲಿಗೆ ಹೋಗುವ ಪ್ರಸಂಗ ಬಂದಿದೆ. ನಾವೆಲ್ಲರೂ ಪ್ರತಿ ದಿನ ವಾದ ಮಾಡುತ್ತಿರುತ್ತೇವೆ. ಈಗ ಮೊನ್ನೆ ತಾನೆ ಗೌರವಾನ್ವಿತ ಮುಖ್ಯಮಂತ್ರಿಗಳು 43,000

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೋಟಿ ಸಾಲ ಮನ್ನಾ ಮಾಡುತ್ತೇವೆಂದು ಪ್ರಕಟ ಮಾಡಿದ ನಂತರ ಕೆಲವು ಬ್ಯಾಂಕ್‌ಗಳು ನೋಟಿಸ್ ಕೊಟ್ಟಿದ್ದಾರೆ, in spite of this ಎಂದು ನಾವು ಅವರು ಮುಖ್ಯಮಂತ್ರಿಗಳ ವಿರುದ್ಧವೆ ಹರಿಹಾಯ್ದಿದ್ದೇವೆ. ಅದಕೋಸ್ಕರ ನಾನು ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ, ಅಲ್ಲಿ ಸಾಲ ಮನ್ನಾ ಮಾಡಬೇಕು, ರೈತರಿಗೆ ಬ್ಯಾಂಕ್‌ಗಳಿಂದ ನೋಟಿಸ್ ಬಂದಿರುವುದಕ್ಕೆ ನಾವು ಇಲ್ಲಿ ಪ್ರಶ್ನೆ ಮಾಡುತ್ತಿದ್ದೇವೆ. ಸಾಲ ಮನ್ನಾ ಮಾಡುತ್ತಿಲ್ಲ, ಬ್ಯಾಂಕ್‌ಗಳು ಸಾಲ ನೋಟಿಸ್ ಕೊಡುತ್ತಿದ್ದಾರೆ ಎಂದು ಹೇಳುತ್ತಿದ್ದೇವೆ. ರೈತರು ಆತ್ಮಹತ್ಯೆ ಮಾಡಿಕೊಳ್ಳದಂತೆ ನೋಡಿಕೊಳ್ಳುವ ಸಲುವಾಗಿ ರೈತನ ರಕ್ಷಣೆಗೆ ಈ ವಿಧೇಯಕವನ್ನು ತಂದಿದ್ದೇವೆ. ದಯಮಾಡಿ ಕೃಷಿಕನನ್ನು ರಕ್ಷಣೆ ಮಾಡಬೇಕಾಗಿದೆ. ಕೃಷಿಕ ಪಡೆದಿರುವಂತಹ ಸಾಲದ ಮೇಲಿನ ಬಡ್ಡಿ ಅಸಲಿಗಿಂತ ಹೆಚ್ಚಾಗಬಾರದೆನ್ನುವ ಉದ್ದೇಶದಿಂದ ಈ ವಿಧೇಯಕವನ್ನು ತಂದಿದ್ದೇನೆ. ದಯಮಾಡಿ ಎಲ್ಲಾ ಸದಸ್ಯರುಗಳು ಈ ವಿಧೇಯಕಕ್ಕೆ ಬೆಂಬಲ ಕೊಡಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, "ಕರ್ನಾಟಕ ಅಸಲು ಹಣಕ್ಕಿಂತ ಹೆಚ್ಚು ಬಡ್ಡಿ ವಿಧಿಸುವಿಕೆ ನಿಷೇಧ ವಿಧೇಯಕ – 2018 ಬಗ್ಗೆ ಹೇಳುವುದಾದರೆ, ಇದು ಆರ್ಥಿಕವಾಗಿ ಕೃಷಿಕರಿಗೆ ಹೆಚ್ಚು ಶಕ್ತಿ ಬರುತ್ತದೆ ಎನ್ನುವುದು ಇನ್ನೊಂದು ಭಾಗ. ಆದರೆ ರೈತ ತನ್ನ ಹತ್ತಿರವಿರುವ ಎರಡು-ಮೂರು ಎಕರೆ ಭೂಮಿಯನ್ನು ಬ್ಯಾಂಕ್‌ನಲ್ಲಿ ಅಡ ಇಟ್ಟಿರುತ್ತಾನೆ. ಸಾಲದ ಅವಧಿ ಮೀರಿ ಆತನಿಗೆ ಬಡ್ಡಿ ಹಣವನ್ನು ಸಹ ಕಟ್ಟಲಿಕ್ಕೆ ಆಗಿರುವುದಿಲ್ಲ. ಉದಾಹರಣೆಗೆ ಆತ 3 ಲಕ್ಷ ರೂ. ಸಾಲವನ್ನು ಪಡೆದಿದ್ದರೆ, ಅದರ ದುಪ್ಪಟ್ಟು ಎಂದರೆ, ಸುಮಾರು 6 ಲಕ್ಷ ರೂ. ಆಗುತ್ತದೆ. ಆದರೆ ಖಾಸಗಿ ಸಂಸ್ಥೆಗಳು ಕೆಲವು ಬಾರಿ 8 ಲಕ್ಷ, 10 ಲಕ್ಷ, 15 ಲಕ್ಷ ರೂ.ಗಳನ್ನು ಮರುಪಾವತಿ ಮಾಡಬೇಕೆಂದು ಆತನ ಮೇಲೆ ಒತ್ತಡವನ್ನು ತರುತ್ತವೆ. ಇದು ದುಪ್ಪಟ್ಟಿಗಿಂತ ಹೆಚ್ಚಿಗೆ ಹಣವನ್ನು ಕಟ್ಟಲಾಗದೇ ಇರುವಂತಹ ಪರಿಸ್ಥಿತಿಯಲ್ಲಿ ಅವನಿಗೆ ರಕ್ಷಣೆ ಕೊಡುವುದಕ್ಕೆ ತಂದಿರುವಂಥ ವಿಧೇಯಕ ಎಂದು ನಾವು ಅರ್ಥ ಮಾಡಿಕೊಂಡಿದ್ದೇವೆ. ನನಗೆ ಸಿಕ್ಕಿರುವ ಮಾಹಿತಿಯ ಪ್ರಕಾರ ಈ ಹಿಂದೆ ಸರ್ವೋಚ್ಛ ನ್ಯಾಯಾಲಯ ಒಂದು ತೀರ್ಪನ್ನು ಕೊಟ್ಟಿದೆ. ಅದನ್ನು ಎಲ್ಲಾ ನ್ಯಾಯಾಲಯಗಳು ಕೂಡ ಪಾಲಿಸುತ್ತವೆ. ಅಸಲಿನ ಮೊತ್ತಕ್ಕಿಂತಲೂ ಬಡ್ಡಿಯ ಮೊತ್ತ ದುಪ್ಪಟ್ಟಿಗಿಂತ ಹೆಚ್ಚಾಗಿ ತೆಗೆದುಕೊಳ್ಳಬಾರದು ಎನ್ನುವ ತೀರ್ಪನ್ನು ನೀಡಲಾಗಿದೆ ಎಂದು ಹೇಳುತ್ತಾರೆ. ಈ ಬಗ್ಗೆ ನಮ್ಮ ಹತ್ತಿರ ಪೂರ್ಣ ಮಾಹಿತಿ ಲಭ್ಯವಿಲ್ಲ. ಈ ವಿಧೇಯಕ ಅರ್ಥಪೂರ್ಣವಾಗಿದೆ. ಅನೇಕ ಸಲ ನಮ್ಮ ಹತ್ತಿರ ಬಂದವರು 15 ಲಕ್ಷ, 20 ಲಕ್ಷ ರೂಪಾಯಿಗಳ ಬಡ್ಡಿಯನ್ನು ಕೇಳುತ್ತಿದ್ದಾರೆ, ನಾವು ಸಾಲ ತೆಗೆದುಕೊಂಡು 16 ವರ್ಷಗಳಾಗಿವೆ. ನಾವು 2 ಲಕ್ಷ, 3 ಲಕ್ಷ ರೂಪಾಯಿಗಳ ಅಸಲು ತೆಗೆದುಕೊಂಡಿದ್ದೇವೆ. ಬೇಕಾದರೆ ನಾವು ಅದರ ದುಪ್ಪಟ್ಟು ಕಟ್ಟುವುದಕ್ಕೆ ತಯಾರಿದ್ದೇವೆ ಎಂದು ಹೇಳುತ್ತಾರೆ. ಅಂಥವರಿಗೆ ಈ ವಿಧೇಯಕ ರಕ್ಷಣೆ ಕೊಡುತ್ತದೆ. ಈ ವಿಧೇಯಕ ಸ್ವಾಭಾವಿಕವಾಗಿ ಕೃಷಿಕರಿಗೆ ಮತ್ತು ಕೃಷಿ ಭೂಮಿ ಅಡಮಾನ ಇಟ್ಟವರೆಲ್ಲರಿಗೂ ರಕ್ಷಣೆ ಕೊಡುವುದಾದರೆ, ಈ ವಿಧೇಯಕವನ್ನು ವಿರೋಧ ಪಕ್ಷದವರೆಲ್ಲರೂ ಪೂರ್ಣ ಪ್ರಮಾಣದಲ್ಲಿ ಸ್ವಾಗತವನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದುವರೆದಿದೆ...)

(468)14–12–2018(1–30)ಬಿಕೆಪಿ–ವಿಕೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದುವರೆದುದು...)**

ಮಾನ್ಯ ಸದಸ್ಯರಾದ ಶ್ರೀಮಾನ್ ಐವನ್ ಡಿ'ಸೋಜಾ ರವರು ಹೇಳಿದ ಮಾತನ್ನು ಸ್ವಲ್ಪ ಗಮನಿಸಬೇಕಾ, ಅಥವಾ ಇವತ್ತೇ ಇದನ್ನು ಪೂರ್ಣಗೊಳಿಸಬೇಕಾ, ಅಥವಾ ಮುಂದಿನ ಶುಕ್ರವಾರ ಇದರ ಬಗ್ಗೆ ಮತ್ತಷ್ಟು ಹೆಚ್ಚು ತಯಾರಾಗಿ ಚರ್ಚೆ ಮಾಡಲಿಕ್ಕೆ ಬರಬೇಕಾ ಎನ್ನುವುದರ ಬಗ್ಗೆ ಪೀಠ ತೀರ್ಮಾನ ಮಾಡಬೇಕು. ಆದರೂ ಸಹ ಈ ಖಾಸಗಿ ವಿಧೇಯಕವನ್ನು ನಾವು ಸಂಪೂರ್ಣವಾಗಿ ಬೆಂಬಲ ಮಾಡುತ್ತೇವೆ.

**ಸಭಾಪತಿಯವರು:–** ಮುಂದಿನ ಶುಕ್ರವಾರ ಈ ವಿಧೇಯಕದ ಬಗ್ಗೆ ಮುಂದುವರಿದ ಚರ್ಚೆ ಮಾಡೋಣ.

**08. ನಿಯಮ 68ರ ಮೇರೆಗೆ**

**ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ**

ವಿಷಯ: **ರಾಜ್ಯದಲ್ಲಿ ಭೀಕರ ಬರಗಾಲ ಮತ್ತು ಈ ಸಂಬಂಧ ರೈತರು ಆತ್ಮಹತ್ಯೆಗೆ ಒಳಗಾಗುತ್ತಿರುವ ಬಗ್ಗೆ.**

– – – –

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಬರ ಮತ್ತು ಇನ್ನಿತರ ಎಲ್ಲಾ ವಿಚಾರಗಳ ಬಗ್ಗೆ ನಮ್ಮ ನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ತಂದಿರತಕ್ಕಂತಹ ಈ ಚರ್ಚೆಯಲ್ಲಿ ಭಾಗವಹಿಸುವಂತಹ ಅವಕಾಶ ಸಿಕ್ಕಿದ್ದಕ್ಕಾಗಿ ಧನ್ಯವಾದಗಳು.

**(ಈ ಹಂತದಲ್ಲಿ ಮಾನ್ಯ ಸಹಕಾರ ಸಚಿವರಾದ ಶ್ರೀ ಬಂಡೆಪ್ಪ ಕಾಶೆಂಪುರ್‌ರವರು ತಮ್ಮ ಸ್ಥಾನದಿಂದ ತೆರಳಲು ಪ್ರಾರಂಭಿಸಿದಾಗ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಸಹಕಾರ ಸಚಿವರು ಈ ಸದನದಲ್ಲಿ ಹಾಜರಿದ್ದರೆ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ಭಾವನೆಯಾಗಿದೆ. ಸಾಲ ಮನ್ನಾ ವಿಚಾರದಲ್ಲಿ ನಾವು ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸಹಕಾರಿ ಸಚಿವರು ಮಾನ್ಯ ಸದಸ್ಯರು ಹೇಳುವುದನ್ನು ಕೇಳಬೇಕು. ತಮಗೆ ತರಾತುರಿ ಇರಬಹುದು, ನಾವು ಇಲ್ಲವೆಂದು ಹೇಳುತ್ತಿಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಇದು ಪ್ರಮುಖವಾದ ವಿಷಯ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಈ ವಿಚಾರದಲ್ಲಿ ಸಭಾಪತಿಯವರು ಏನು ಮಾಡುತ್ತಾರೋ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸಹಕಾರ ಸಚಿವರಾದ ಶ್ರೀ ಬಂಡೆಪ್ಪ ಕಾಶೆಂಪುರ್‌ರವರು ಮತ್ತೆ ತಮ್ಮ ಸ್ವಸ್ಥಾನಕ್ಕೆ ಹಿಂದಿರುಗಿ ಮಾತನಾಡಲು ಪ್ರಾರಂಭಿಸಿದರು)**

**ಶ್ರೀ ಬಂಡೆಪ್ಪ ಕಾಶೆಂಪುರ್(ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೆ, ಕೆಳಮನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು 2ನೇ ಬಿಲ್ ಅನ್ನು ಮಂಡಿಸಿದ ಮೇಲೆ ನಾನು 4ನೇ ಬಿಲ್ ಅಂದರೆ ಋಣಮುಕ್ತ ಕಾಯಿದೆ ಬಗ್ಗೆ ಇರುವ ಬಿಲ್‌ನ್ನು ಮಂಡಿಸಬೇಕಿದೆ. ಅದಕ್ಕೆ ತಮ್ಮ ಅನುಮತಿ ತೆಗೆದುಕೊಂಡು ಹೋಗಬೇಕು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಚಿವರು 10 ನಿಮಿಷಗಳ ಕಾಲ ಇಲ್ಲಿ ಇದ್ದರೆ ಸಾಕು. ಕೆಲವೊಂದು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಈಗ ಸರ್ಕಾರದ ಪರವಾಗಿ ಇಲ್ಲಿ ಯಾರಾದರೊಬ್ಬರು ಇರಬೇಕು.

**ಸಭಾಪತಿಯವರು:-** ಮಾನ್ಯ ಸಚಿವರು 5 ನಿಮಿಷ ಕುಳಿತುಕೊಳ್ಳಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಸಾಲ ಮನ್ನಾ ವಿಚಾರದಲ್ಲಿ 2005-06ನೇ ಸಾಲಿನಲ್ಲಿ ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮತ್ತು ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರ ಸರ್ಕಾರ ಇದ್ದಂತಹ ಸಮಯದಲ್ಲಿ 25000 ರೂಪಾಯಿಗಳ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಲವನ್ನು ಮನ್ನಾ ಮಾಡಿದೆ. ಆ ಸಂದರ್ಭದಲ್ಲಿ ಯಾವುದೇ ನಿಯಮಾವಳಿಗಳನ್ನು, ಕಟ್ಟುಪಾಡುಗಳನ್ನು ಷರತ್ತುಗಳನ್ನು ಹಾಕದೇ ಇದ್ದುದು ತಮಗೆ ಗೊತ್ತಿದೆ. 2012–13ನೇ ಸಾಲಿನಲ್ಲಿ ಮಾನ್ಯ ಶ್ರೀ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಸಹ 25000 ರೂಪಾಯಿಗಳ ಸಾಲ ಮನ್ನಾ ಮಾಡಿದ್ದನ್ನು ಸಹಿತ ಇಡೀ ರಾಜ್ಯದ ಜನತೆ ಅರಿತಿದ್ದಾರೆ ಮತ್ತು ಅದರ ಲಾಭವನ್ನು ನಮ್ಮ ರೈತ ಸಮುದಾಯ ಹೊಂದಿದೆ ಎನ್ನತಕ್ಕಂತಹ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದೇ ರೀತಿಯಲ್ಲಿ ಕಳೆದ ಸಾಲಿನಲ್ಲಿ ಅಂದರೆ 2017–18ನೇ ಸಾಲಿನಲ್ಲಿ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ಸಹಿತ 50,000 ರೂಪಾಯಿಗಳ ಸಾಲ ಮನ್ನಾ ಮಾಡಿದ್ದು ಸಹಿತ ಜನತೆಗೆ ಗೊತ್ತಿದೆ. ಅದರಲ್ಲಿಯೂ ಸಹ ಯಾವುದೇ ನಿಯಮಾವಳಿಗಳನ್ನು ಸರ್ಕಾರ ವಿಧಿಸಿರಲಿಲ್ಲ. ಇವತ್ತು ನಾನು ಒಂದು ಉದಾಹರಣೆಯನ್ನು ಕೊಡಲಿಕ್ಕೆ ಬಯಸುತ್ತೇನೆ. 2016–17ನೇ ಸಾಲಿನಲ್ಲಿ ಚಿಕ್ಕೋಡಿಯ ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಬ್ಯಾಂಕಿನಿಂದ ಒಟ್ಟು 2,26,26,000 ರೂಪಾಯಿಗಳ ಸಾಲ ಮನ್ನಾ ರೈತರಿಗೆ ಆಗಿದೆ. ಆ ಸಂಸ್ಥೆಯಿಂದ ಸುಮಾರು 940 ಮಂದಿ ರೈತರಿಗೆ ಇದರ ಲಾಭ ಸಿಕ್ಕಿದೆ. ಆದರೆ ಈ ಸರ್ಕಾರ ಅಧಿಕಾರಕ್ಕೆ ಬರುವಂತಹ ಸಂದರ್ಭದಲ್ಲಿ ನಾವು ರೈತರ ಸಂಪೂರ್ಣ ಸಾಲ ಮನ್ನಾ ಮಾಡುತ್ತೇವೆ, ಋಣಮುಕ್ತರನ್ನಾಗಿ ಮಾಡುತ್ತೇವೆ ಎನ್ನುವಂತಹ ಘೋಷಣೆಯೊಂದಿಗೆ ಅಧಿಕಾರಕ್ಕೆ ಬಂದಿರತಕ್ಕಂತಹ ಸನ್ಮಾನ್ಯ ಶ್ರೀ ಕುಮಾರಸ್ವಾಮಿಗಳು ಅಧಿಕಾರಕ್ಕೆ ಬಂದ ನಂತರ ಸಾಲ ಮನ್ನಾ ಮಾಡತಕ್ಕಂತಹ ವಿಚಾರದಲ್ಲಿ ಎಡವಿದ್ದನ್ನು ನಾನು ಸದನದಲ್ಲಿ ಇವತ್ತು ಸಹಕಾರ ಸಚಿವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

ತಮ್ಮ ವಿಚಾರ ಒಳ್ಳೆಯದು ಇದೆ. ಆದರೆ, ಸನ್ಮಾನ್ಯ ಸಹಕಾರ ಸಚಿವರು ಸದ್ಯ ಸದನದಲ್ಲಿರುವುದರಿಂದ ಸರ್ಕಾರದವರು ಹಾಕಿರುವಂತಹ ಷರತ್ತುಗಳ ಬಗ್ಗೆ 5 ನಿಮಿಷಗಳ ಕಾಲ ಕೇಳಬೇಕೆಂದು ಮನವಿಯನ್ನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಬಯಸುತ್ತೇನೆ. ಸನ್ಮಾನ್ಯ ಸಭಾಪತಿಯವರೇ, ಇವರು ಕೊಟ್ಟಿರತಕ್ಕಂತಹ ಒಟ್ಟು ಸಾಲ ಮನ್ನಾ ಮಾಡಲು ಇರತಕ್ಕಂತಹ ತೊಡಕುಗಳ ಬಗ್ಗೆ ನಾನು ಸಚಿವರ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ತಾವು ಈ ಬಗ್ಗೆ ಕೊಟ್ಟಿರುವಂತಹ ಒಂದು ಫಾರಂ ನನ್ನ ಬಳಿ ಇದೆ. ಈ ಫಾರಂ ಅನ್ನು ತಾವು ದಯವಿಟ್ಟು ಗಮನಿಸಬೇಕು. ಸಹಕಾರ ಸಂಸ್ಥೆಗಳಲ್ಲಿರುವಂತಹ ಕಾರ್ಯದರ್ಶಿಗಳು ಸುಮಾರು 52 ಷರತ್ತುಗಳನ್ನು ತುಂಬಬೇಕಾದಂತಹ ಷರತ್ತುಗಳನ್ನು ಇವತ್ತು ಸರ್ಕಾರ ಹಾಕಿದೆ. the number of conditions put by the Government of Karnataka is 52. which have to be uploaded in the computer by the Secretary. ಈ ಬಗ್ಗೆ ಆ ಕಾರ್ಯದರ್ಶಿಗಳು ನನ್ನ ಹತ್ತಿರ ಬಂದು ವಿನಂತಿ ಮಾಡಿದರು. ಸರ್, ದಯವಿಟ್ಟು ಇದನ್ನು ಗಮನಿಸಿ ನೋಡಿ ಎಂದವರು ನನಗೆ ಹೇಳಿದರು. ಇದನ್ನು ತುಂಬಲಿಕ್ಕೆ ಯಾವುದೇ ಕೊರತೆಯಿಲ್ಲ. ಆದರೆ, ಹಾಕಿರುವಂತಹ ಷರತ್ತುಗಳನ್ನು ನೋಡಿ ಎನ್ನುತಕ್ಕಂತಹ ಮನವಿಯನ್ನು ಮಾಡಿದ್ದಾರೆ. ಏಕೆಂದರೆ, ನಾನು ಸಹಿತ ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ನಿರ್ದೇಶಕನಾಗಿ, ಉಪಾಧ್ಯಕ್ಷನಾಗಿ ಸುಮಾರು 10 ವರ್ಷಗಳ ಕಾಲ ಕೆಲಸ ಮಾಡಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲಿ ರೈತರು ತಮ್ಮ ಮಾಹಿತಿಯನ್ನು 6 ಹಂತಗಳಲ್ಲಿ ಆನ್‌ಲೈನ್‌ನಲ್ಲಿ upload ಮಾಡಬೇಕಾಗಿದೆ. 52 ಷರತ್ತುಗಳನ್ನು ಹಾಕಿದ್ದೀರಿ. ಎಲ್ಲಾ ಸರಿ ಇದ್ದರೂ ನೆಟ್‌ವರ್ಕ್‌ನಲ್ಲಿ ತೊಂದರೆ ಇದೆ. ಆದರೆ, ಒಂದು ಗಂಟೆ ಹರಸಾಹಸ ಪಡಬೇಕು. ಎರಡನೇ ಬಾರಿ ಸರಿಯಾದರೆ ಓಕೆ. ಇಲ್ಲದಿದ್ದರೆ not verified ಎಂದು ಹೇಳಿ reject ಆಗುತ್ತದೆ. ಸಾಲಗಾರ ಸದಸ್ಯರ ಹೆಸರು ಮತ್ತು ಆಧಾರ್‌ಕಾರ್ಡ್ ಹೆಸರಿನಲ್ಲಿ ಒಂದೇ ಒಂದು spelling mistake ಆದರೂ ಸಹಿತ ಅದು ಹೊಂದಾಣಿಕೆ ಆಗುವುದಿಲ್ಲ. ಎಷ್ಟೋ ಮಂದಿಗೆ ಎಲ್ಲಾ ಮಾಹಿತಿ ಸರಿ ಇದ್ದರೂ ಸಹಿತ verify ಆಗುತ್ತಿಲ್ಲ. ಅದರ ಜೊತೆಗೆ ಆಧಾರ್‌ಕಾರ್ಡ್‌ನಲ್ಲಿ ಹೆಸರು ಸರಿ ಇದ್ದರೂ ಸಹಿತ ಪಡಿತರ ಚೀಟಿಯಲ್ಲಿ ಇರತಕ್ಕಂತಹ ಹೆಸರು ಹೊಂದಾಣಿಕೆಯಾಗುತ್ತಿಲ್ಲ. ಪಡಿತರ ಚೀಟಿಯಲ್ಲಿ ಸಾಲಗಾರರ ಹೆಸರು, surname ಹಿಂದೆ–ಮುಂದೆ ಆಗಿದ್ದರೂ ಸಹಿತ ಒಂದೇ ಒಂದು ಕೊಂಬು, ದೀರ್ಘ ಈ ರೀತಿಯಲ್ಲಿ ಸಣ್ಣ–ಪುಟ್ಟ ವ್ಯತ್ಯಾಸಗಳಿದ್ದರೂ ಸಹಿತ ಪೂರ್ಣ ಹೆಸರು ಅದರಿಂದ reject ಆಗುತ್ತಿದೆ. ಪಡಿತರ ಚೀಟಿಯ ವಿವರವನ್ನು ನಮೂದು ಮಾಡುವ ಹಂತದಲ್ಲಿ ಅದು reject ಆದರೆ ಮುಂದಿನ ಯಾವುದೇ ಹಂತಗಳನ್ನು ತಲುಪಲಾಗುತ್ತಿಲ್ಲ. ಒಂದು ಸಣ್ಣ ತಪ್ಪನ್ನು ಮಾಡಿದರೂ ಸಹಿತ the Secretary cannot upload the entire form. ರೈತರು ಪಡೆದಂತಹ ಸ್ವಯಂ ಧೃಡೀಕರಣ ಪತ್ರವನ್ನು upload ಮಾಡಿದಾಗ ತಪ್ಪು ಮಾಹಿತಿ ಸೇರ್ಪಡೆಯಾಗುತ್ತದೆ. ಪಹಣಿ ಪತ್ರಿಕೆಯಲ್ಲಿ ಸಹ ಸದಸ್ಯರ ಹೆಸರು, ಸಾಲಗಾರ ಸದಸ್ಯರ ಹೆಸರು ಸರಿಯಾಗಿ ಹೊಂದಾಣಿಕೆಯಾಗುತ್ತಿಲ್ಲ. ಇದೆಲ್ಲವನ್ನೂ ನಾವು ನೋಡಿದರೆ ಏನು ಅನಿಸುತ್ತದೆ? ಇದರ ಬಗ್ಗೆ ಸರ್ಕಾರದ ಉದ್ದೇಶ ಏನು, ರೈತರ ಸಾಲ ಮನ್ನಾ ಮಾಡಬೇಕೆನ್ನುವುದೇ ಸರ್ಕಾರದ ಉದ್ದೇಶ. ಆದರೆ, ತಾವು ಹಾಕಿರುವಂತಹ ಷರತ್ತುಗಳನ್ನು ನಾವು ಗಮನಿಸಿದಾಗ ಎಲ್ಲೋ ಒಂದು ಕಡೆ ರೈತನಿಗೆ ಆ ಇಡೀ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಬಂದು ಹೋಗಿ ತನ್ನ ಚಪ್ಪಲಿಗಳನ್ನು ಹರಿದುಕೊಂಡು “ಬೇಡಪ್ಪಾ, ನನಗೆ ಈ ಸಾಲ ಮನ್ನಾದ ಸಹವಾಸ” ಎಂದು ಹೇಳಿ ಮನೆಗೆ ಹೋಗುವಂತಹ ಪರಿಸ್ಥಿತಿ ಬಂದಿದೆ. ನನಗೆ ನಿನ್ನೆ ನಮ್ಮ ತಾಲ್ಲೂಕಿನ ಕಾರ್ಯದರ್ಶಿಗಳು ಒಂದು ಸಭೆಯನ್ನು ಮಾಡಿದ್ದರು. ಆ ಒಂದು ಸಭೆಯಲ್ಲಿ ಅವರು ಹೇಳಿದ್ದು ಏನೆಂದರೆ ನಮ್ಮ ತಾಲ್ಲೂಕಿನಲ್ಲಿ ಸುಮಾರು 100 ಸಹಕಾರ ಸಂಸ್ಥೆಗಳಿದ್ದು, ಅಲ್ಲಿ ಇರತಕ್ಕಂತಹ ಕಾರ್ಯದರ್ಶಿಗಳು ಏನು ಹೇಳುತ್ತಾರೆಂದರೆ ಈ ಎಲ್ಲಾ ಷರತ್ತುಗಳಿಂದ ನಮ್ಮಲ್ಲಿ ಇರತಕ್ಕಂತಹ ಒಟ್ಟು ಸದಸ್ಯರ 25% ಜನರಿಗೂ ಸಹಿತ ನಾವು ಸಾಲ ಮನ್ನಾ ಮಾಡಲಿಕ್ಕೆ ಆಗುತ್ತಿಲ್ಲವೆಂದು ಹೇಳುತ್ತಾರೆ.

ಆದ್ದರಿಂದ, ತಾವು ಸಹಕಾರ ಸಚಿವರಿದ್ದೀರಿ. ಸಹಕಾರ ಕ್ಷೇತ್ರದ ಬಗ್ಗೆ ತಿಳಿದಿರುವವರಿದ್ದೀರಿ. ಸಾಲ ಮನ್ನಾ ಮಾಡಬೇಕೆನ್ನುವ ಇಚ್ಛಾಶಕ್ತಿ ತಮಗಿದೆ. ಈ ಎಲ್ಲಾ ಷರತ್ತುಗಳನ್ನು drop ಮಾಡುತ್ತೀರಾ? Drop ಮಾಡಿ ನೇರವಾಗಿ ರೈತರಿಗೆ ಸಾಲ ಮನ್ನಾ ಮಾಡಿ ಅವರಿಗೆ ಜಮಾ ಮಾಡುತ್ತೀರಾ ಎನ್ನತಕ್ಕಂಥದ್ದು ನನ್ನ ಪ್ರಶ್ನೆ ಇದೆ.

**ಸಭಾಪತಿಯವರು:–** ತಾವು ಸ್ವಲ್ಪ yield ಆಗಿ. ಮಾನ್ಯ ಸಚಿವರು ಮಾತನಾಡುತ್ತಾರೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಬಂಡೆಪ್ಪ ಕಾಶೆಂಪೂರ(ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಗೌರವಾನ್ವಿತ ಸದಸ್ಯರು ರೈತರ ಬಗ್ಗೆ ಕಾಳಜಿ ವಹಿಸಿದ್ದಾರೆ, ಅವರಿಗೆ ನನ್ನ ಧನ್ಯವಾದಗಳು. ಏಕೆಂದರೆ, ಮಾನ್ಯ ಸದಸ್ಯರು ಸಹಕಾರಿ ಕ್ಷೇತ್ರದಲ್ಲಿ ಧುರೀಣರಿರುತ್ತಾರೆ. ಅವರಿಗೆ ನಾವು ಹೆಚ್ಚಿಗೆ ಹೇಳಬೇಕಾಗಿಲ್ಲ. ಆದರೂ ಸಹ ಅವರು ವಿರೋಧ ಪಕ್ಷದಲ್ಲಿರುವುದರಿಂದ ಏನಾದರೊಂದು ಕೆದಕಬೇಕಷ್ಟೆ. ತಾವು 52 ಷರತ್ತುಗಳ ಬಗ್ಗೆ ಹೇಳಿದಿರಿ. ಹೆಸರನ್ನು ಕೇಳುವುದು ಷರತ್ತಾ? ಅವರ ತಂದೆ ಹೆಸರನ್ನು ಕೇಳುವುದು ಷರತ್ತಾ? ಅವರ ಮಕ್ಕಳ ಹೆಸರನ್ನು ಕೇಳುವುದು ಷರತ್ತಾ? ಆಧಾರ್ ನಂಬರ್ ಕೇಳುವುದು ಷರತ್ತಾ?

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ:-** ಮಾನ್ಯ ಶ್ರೀ ಸಿದ್ದರಾಮಯ್ಯನವರು ಇದನ್ನು ಕೇಳಿರಲಿಲ್ಲ.

**ಶ್ರೀ ಬಂಡೆಪ್ಪ ಖಾಶೆಂಪೂರ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ನಾನು ಮುಗಿಸುತ್ತೇನೆ. ಕೇವಲ ಮಾಹಿತಿಯನ್ನು ಕೇಳಿದ್ದೇವೆ. ತಮ್ಮ ಮೂಲಕ ಈ ವಿಚಾರವಾಗಿ ರಾಜ್ಯದ ಜನತೆಗೆ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರುಗಳಿಗೆ ಹೇಳಲಿಕ್ಕೆ ಬಯಸುತ್ತೇನೆ. ನಾವು ಕೇಳುತ್ತಿರುವುದು ಕೇವಲ ಮಾಹಿತಿ. Single document ಕೂಡ ನಮಗೆ ಬೇಕಾಗಿಲ್ಲವೆಂದು ಹೇಳಿದ್ದೇವೆ.

(ಗೊಂದಲ)

ಮಾನ್ಯ ಸಭಾಪತಿಯವರೇ, ನಾನು ಈ ವಿಚಾರವಾಗಿ clear ಮಾಡುತ್ತೇನೆ. ಇಲ್ಲಿ ಒಂದು ಪ್ರಮುಖವಾದ ವಿಚಾರವನ್ನು ವಿರೋಧ ಪಕ್ಷದ ಸದಸ್ಯರು ಕೇಳಿದ್ದಾರೆ. ಇಲ್ಲಿ ಮಾಹಿತಿಯನ್ನು ಕೇಳಿದ್ದೇವೆ. ಇದು ಒಂದು. ಮಾನ್ಯ ಸದಸ್ಯರು ಮಾತನಾಡಿ, ಹಿಂದೆ ಶ್ರೀ ಕುಮಾರಸ್ವಾಮಿಯವರು ಇದ್ದಾಗ, ಶ್ರೀ ಜಗದೀಶ್ ಶೆಟ್ಟರ್ ಇದ್ದಾಗ, ಶ್ರೀ ಸಿದ್ದರಾಮಯ್ಯನವರು ಇದ್ದಾಗ ಸಾಲ ಮನ್ನಾ ಮಾಡಿದ್ದು, ಆಗ ಏನೂ ಕೇಳಿಲ್ಲವೆಂದು ಹೇಳಿದರು. ಮೊದಲನೆ ಬಾರಿಗೆ Co-operative and Commercial Bank ಎರಡರಲ್ಲಿಯೂ ಸಹ ನಾವು ಸಾಲ ಮನ್ನಾ ಮಾಡಿದ್ದೇವೆ. ಆಗ ಏನಿತ್ತು ಎಂದರೆ ಕೇವಲ Co-operative ಇತ್ತು ಅಷ್ಟೆ. ಆಗ ನಾವು ಸಾಲ ಮನ್ನಾ ಮಾಡಿದ್ದೇವೆ. ಕೇವಲ Co-operative ನದ್ದು ಸಾಲ ಮನ್ನಾ ಮಾಡಿದ್ದೇವೆ. ಈಗ ಏನಾಗಿದೆ ಎಂದರೆ ಎರಡು ಸಾಲಗಳು ಸಹ ಬಂದಿವೆ. ಇದು ಇಡೀ ದೇಶದಲ್ಲಿಯೇ ಮೊದಲನೆ ಬಾರಿ ಆಗಿರುವಂಥದ್ದು. ಅದರಲ್ಲೂ ಇದು ದೊಡ್ಡ ಮೊತ್ತ. ನಾವು ರೈತರಿಗೆ ತೊಂದರೆ ಮಾಡಬೇಕೆಂದು ಹೇಳಿ ಈ ರೀತಿಯಲ್ಲಿ ಮಾಡುತ್ತಿಲ್ಲ. ನಾನು ಇಲ್ಲಿ ನಿಜವಾಗಿಯೂ ಹೇಳುತ್ತಿದ್ದೇನೆ. ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಇಲ್ಲಿಯೇ ಕುಳಿತಿದ್ದಾರೆ. ಇಲ್ಲಿ ಯಾರದ್ದೂ ಅಭ್ಯಂತರವಿಲ್ಲ. ರೈತರ ಪರವಾಗಿ. ಈ ಸರ್ಕಾರ ಇದೆ. ಆದರೆ, ಈ ಮಾಹಿತಿಗಳು ಅವಶ್ಯಕತೆ ಇದೆ. ರೈತರು ಎಲ್ಲಿಯೋ ಹೋಗಿ ತಮ್ಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಹಿತಿಗಳನ್ನು upload ಮಾಡುತ್ತಿಲ್ಲ. ಮತ್ತೆ ನಾವು ರೈತರಿಗೆ ಕೇಳಿಲ್ಲ. ಎಲ್ಲಿಯೋ ಕಂಪ್ಯೂಟರ್ ಹತ್ತಿರ ಕುಳಿತುಕೊಂಡು ರೈತರು upload ಮಾಡಬೇಕೆಂದು ಹೇಳಿಲ್ಲ. ನಮ್ಮ ಇಲಾಖೆಯ ಕಾರ್ಯದರ್ಶಿಗಳಿಗೆ ಹೇಳಿ, ಅವರುಗಳು ಈ ಬಗ್ಗೆ ಮಾಹಿತಿಯನ್ನು ತೆಗೆದುಕೊಳ್ಳಬೇಕು, ಏಕೆಂದರೆ, ಈ ವಿಚಾರವಾಗಿ ತಮಗೆ ಗೊತ್ತಿದೆ. ಮಂಡ್ಯದಲ್ಲಿ ಕಾರ್ಯದರ್ಶಿಯೇ ರೈತರ ಹೆಸರಿನಲ್ಲಿ ದುಡ್ಡನ್ನು ತೆಗೆದುಕೊಂಡಿದ್ದಾನೆ. ಆ ವಿಚಾರ ರೈತನಿಗೂ ಗೊತ್ತಿಲ್ಲ. ಜೊತೆಗೆ ಆ ರೈತ ಜೀವಂತ ಇಲ್ಲ. ಸತ್ತು ಹೋಗಿರುವವರ ಮೇಲೆ ಎಲ್ಲಾ ದುಡ್ಡನ್ನು ತೆಗೆದುಕೊಂಡಿರುವ ಉದಾಹರಣೆ ಇದೆ. ಇಂತಹ ಬಹಳಷ್ಟು ಪ್ರಕರಣಗಳು ನಮ್ಮ ಎದುರುಗಡೆ ಬಂದಿವೆ. To streamline this, ಅರ್ಹ ರೈತರು ಯಾರು ಇದ್ದಾರೆ, ಅವರ ಮನೆಯವರಿಗೆ ಕಳುಹಿಸುವುದು ಈ ಸರ್ಕಾರದ ಜವಾಬ್ದಾರಿ ಇದೆ. ಆ ಒಂದು ಕೆಲಸವನ್ನು ನಾವು ಮಾಡುತ್ತಿದ್ದೇವೆಯೇ ವಿನಃ ಎಲ್ಲೋ ಒಂದು ಕಡೆ ಸ್ವಲ್ಪ ಉಳಿದಿದ್ದರೆ, ಅದೂ ನಮಗೆ ಉಳಿಯುತ್ತದೆ ಎನ್ನುವ ನಿಟ್ಟಿನಲ್ಲಿ ನಮ್ಮ ಉದ್ದೇಶ ಇಲ್ಲ. ಹೀಗಾಗಿ, ಇದು ದೇಶದಲ್ಲಿಯೇ ಮೊದಲ ಬಾರಿಗೆ ಮಾಡುತ್ತಿದ್ದು ಎರಡೂ ಸಹ ಅಂದರೆ Co-operative and Commercial Bank ಇಬ್ಬರಿಗೂ ಒಂದೇ ರೀತಿಯಲ್ಲಿ ಮಾಹಿತಿಯನ್ನು ಕೊಡಿ ಎಂದು ಕೇಳಿದ್ದೇವೆ. ಈ ವಿಚಾರವಾಗಿ ನಾವು ಬೇರೆ ಬೇರೆ ರೀತಿಯಲ್ಲಿ ಕೊಟ್ಟಿರುವುದಿಲ್ಲ.

**(ಮುಂದುವರೆದಿದೆ....**

(469) 14.12.2018 01.40 SV-VK

**ಶ್ರೀ ಬಂಡೆಪ್ಪ ಕಾಶೆಂಪೂರ (ಮುಂದುವರೆದುದು...)**

ನಮ್ಮ ಪದ್ಧತಿಯನ್ನು ಹಾಗೂ ನಮ್ಮ ಜನರನ್ನು ನಾವು ಮೆಚ್ಚಬೇಕು. ನಮ್ಮಲ್ಲಿ ಸುಮಾರು 20,38,000 ಅರ್ಹ ಫಲಾನುಭವಿ ರೈತರಿದ್ದು, ಅದರಲ್ಲಿ 18 ಲಕ್ಷ ಜನ ಬರೆದುಕೊಟ್ಟಿದ್ದಾರೆ. ಅದರಲ್ಲಿ ದಿನಾಂಕ 11.12.2018ರವರೆವಿಗೆ ಸುಮಾರು 14 ಲಕ್ಷ upload ಆಗಿದೆ. ಈ ವಿಚಾರದಲ್ಲಿ computerisation ಮಾಡಬೇಕೆಂದಿದ್ದೇವೆ. ಮಾನ್ಯ ಸದಸ್ಯರೂ ಸಹ ಡಿ.ಸಿ.ಸಿ. ಬ್ಯಾಂಕ್‌ನಲ್ಲಿದ್ದವರಾಗಿದ್ದು, ಅವರೂ ಬಹಳಷ್ಟು ಪದ್ಧತಿಗಳನ್ನು ಅಳವಡಿಸಿ ರೈತರಿಗೆ ಸಹಾಯ ಮಾಡುತ್ತಿದ್ದವರು. ಅವರಿಗೆ ಈ ವಿಷಯ ತಿಳಿದಿರುತ್ತದೆ. ಇಂದು ಬೆಳಿಗ್ಗೆ ಸಹ ನಾನು ಪ್ರಶ್ನೆಯೊಂದಕ್ಕೆ ಉತ್ತರಿಸುವಾಗ ಹೇಳಿದೆನು. Up to November, ಯಾವ ರೀತಿಯಾಗಿ ಮಾನ್ಯ ಸಿದ್ದರಾಮಯ್ಯನವರ ಕಾಲದಲ್ಲಿ ಸಾಲ ಮನ್ನಾ ಸಂಪೂರ್ಣವಾಗಿ ಮಾಡಲಾಗಿತ್ತೋ, ಅದೇ ರೀತಿ ಮಾಡಲಾಗುತ್ತದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಸಹಕಾರ ಇಲಾಖೆಯಿಂದ ಅತ್ಯಂತ ಹೆಚ್ಚು ಬೆಳಗಾವಿ ಜಿಲ್ಲೆಗೆ ರೂ.1,168.86 ಕೋಟಿ ಮನ್ನಾ ಮಾಡಿರುವ ಪಟ್ಟಿ ನಮ್ಮ ಬಳಿ ಇದೆ. Commercial and Cooperative Banks ಎರಡೂ ಸೇರಿದರೆ ರೂ.9,000 ಕೋಟಿ ಕೇವಲ ಬೆಳಗಾವಿಗೆ ಬರುತ್ತಿದೆ. ಇದು ಕೇವಲ ಮಾಹಿತಿಯಾಗಿದ್ದು, ಯಾವುದೇ ಷರತ್ತುಗಳಾಗಿರುವುದಿಲ್ಲ. ನಾವು ಯಾವುದೇ ಷರತ್ತುಗಳನ್ನು ಹಾಕಬೇಕೆಂದಿಲ್ಲ. ಅಲ್ಲದೆ ನಮ್ಮ ಸಹಕಾರಿಗಳು ಸಹ ಇದರಲ್ಲಿ ಬಹಳ ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಿದ್ದಾರೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, ನಾನು ಉದ್ದೇಶದ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಆದರೆ ಹಾಕಿರತಕ್ಕಂತಹ ಒಟ್ಟು ಕಟ್ಟುಪಾಡುಗಳನ್ನು ಸಡಿಲಗೊಳಿಸಬೇಕೆಂದಷ್ಟೇ ಹೇಳುತ್ತಿದ್ದೇನೆ.

**ಶ್ರೀ ಬಂಡೆಪ್ಪ ಕಾಶೆಂಪೂರ:-** ಮಾನ್ಯ ಸಭಾಪತಿಯವರೆ, ಅದರಲ್ಲಿ information ಇರುವುದು condition ಅಲ್ಲ. ಒಂದು ಷರತ್ತನ್ನು ಮಾನ್ಯ ಸದಸ್ಯರು ಹೇಳಲಿ. ನನ್ನ ಬಳಿ ಎಲ್ಲವೂ ಇದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, practical ಆಗಿ execute ಮಾಡಲಿಕ್ಕೆ ಬಹಳ ತೊಂದರೆಯಾಗುತ್ತಿದೆ.

**ಶ್ರೀ ಬಂಡೆಪ್ಪ ಕಾಶೆಂಪೂರ:-** ಮಾನ್ಯ ಸಭಾಪತಿಯವರೆ, ಈಗಾಗಲೇ 14 ಲಕ್ಷ ಅರ್ಜಿಗಳು upload ಆಗಿವೆ.

**ಶ್ರೀ ನಿರಾಣಿ ಹಣಮಂತ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, upload ಆಗುತ್ತಿರುವುದು ಸರಿಯಷ್ಟೆ. ರೈತರು ಮತ್ತು ಕಾರ್ಯದರ್ಶಿ ಇಬ್ಬರೂ ಕೂಡಿ upload ಮಾಡುತ್ತಿದ್ದಾರೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, ಸಾಲ ಮನ್ನಾ ಅನ್ನು ಒಂದೇ ಬಾರಿ ಮಾಡುತ್ತೀರಾ ಅಥವಾ ನಾಲ್ಕು ವರ್ಷಗಳಲ್ಲಿ ಮಾಡಲಾಗುತ್ತದೆಯೋ?

**ಶ್ರೀ ಬಂಡೆಪ್ಪ ಕಾಶೆಂಪೂರ:-** ಮಾನ್ಯ ಸಭಾಪತಿಯವರೆ, ಮಾನ್ಯ ಉಪ ಮುಖ್ಯಮಂತ್ರಿಯವರು ಇಲ್ಲಿಯೇ ಕುಳಿತಿದ್ದು ಅವರ ಸಮ್ಮುಖದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಸದಸ್ಯರು ಡಿ.ಸಿ.ಸಿ. ಬ್ಯಾಂಕಿನ ಸದಸ್ಯರಾಗಿದ್ದವರು. ಹಂತ ಹಂತವಾಗಿ ಡಿಸಿಸಿ ಬ್ಯಾಂಕ್‌ನಿಂದ ತಿಂಗಳಿಗೆ ಎಷ್ಟು ಬಿಲ್ಲನ್ನು ಕಳುಹಿಸಲಾಗುವುದೋ ಅಷ್ಟು ಬಿಲ್ಲನ್ನು ಮುಂದಿನ ಜುಲೈ ಒಳಗಾಗಿ ಸಂಪೂರ್ಣ ಸಾಲ ಮನ್ನಾ ಮಾಡಲಾಗುವುದು. ನಾವು ಸಹಕಾರ ಇಲಾಖೆಯಲ್ಲಿ ರೂ.9448 ಕೋಟಿ provision ಮಾಡಿಕೊಂಡಿದ್ದೇವೆಯೋ ಅದನ್ನು ಸಂಪೂರ್ಣವಾಗಿ ಮಾಡಲಾಗುವುದು. ಯಾವುದನ್ನೂ ಬಾಕಿ ಉಳಿಸುವುದಿಲ್ಲ. ಸಹಕಾರ ಇಲಾಖೆಯ ವ್ಯಾಪ್ತಿಗೆ ಬರುವ ಎಲ್ಲಾ ಸಾಲವನ್ನು ಮನ್ನಾ ಮಾಡಲಾಗುವುದು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, 14 ಲಕ್ಷ ಕಂಪ್ಯೂಟರೀಕರಣ ಮಾಡಲಾಗಿದೆ ಎಂದು ಮಾನ್ಯ ಸಚಿವರು ಹೇಳಿದರು. ಉಳಿದ ಆರು ಲಕ್ಷದಲ್ಲಿರುವ ತಾಂತ್ರಿಕ ದೋಷಗಳನ್ನು ಸರಿಪಡಿಸುವುದು ಹೇಗೆ ಎಂದು ಹೇಳಬೇಕು?

**ಶ್ರೀ ಬಂಡೆಪ್ಪ ಕಾಶೆಂಪೂರ:–** ಮಾನ್ಯ ಸಭಾಪತಿಯವರೆ, ಅದು ತಾಂತ್ರಿಕ ದೋಷವಲ್ಲ, upload ಆಗುತ್ತಿರುವುದು. ಅದನ್ನು ದೋಷ ಎಂದು ಹೇಳಲಿಕ್ಕಾಗುವುದಿಲ್ಲ. ತಾಲ್ಲೂಕಾವಾರು ಸಮಿತಿಯೊಂದನ್ನು ರಚಿಸಲಾಗಿದ್ದು, ಏನಾದರೂ ತಪ್ಪು ಕಂಡುಬಂದಲ್ಲಿ ತಕ್ಷಣವೇ ನಮ್ಮ ಕಾರ್ಯದರ್ಶಿಗಳು ಅದನ್ನು ಅಲ್ಲಿಗೆ ಒಯ್ದು ಸರಿಪಡಿಸಿ ಪುನಃ upload ಮಾಡುತ್ತಾರೆ. ಈ ಪದ್ಧತಿಯನ್ನು ಜಾರಿಗೆ ತರಬೇಕೆಂದು ಇಡೀ ದೇಶದಲ್ಲಿಯೇ ಮೊದಲನೇ ಬಾರಿಗೆ ಈ ಸರ್ಕಾರ ಮುಂದಾಗಿದೆ. ನಾವು ಯಾವುದೇ ರೈತರಿಗೆ ತಾರತಮ್ಯವನ್ನು ಮಾಡದೆ ಈ benefit ನಿಂದ ದೂರ ಕಳುಹಿಸಲಾಗುವುದಿಲ್ಲ. ಇನ್ನೂ ಯಾರಾದರೂ ಉಳಿದಿದ್ದರೆ, ಅವರನ್ನೂ ಸಹ ಸೇರಿಸಿಕೊಳ್ಳಲಾಗುವುದು. ಅದರ ಬಗ್ಗೆ ಮಾನ್ಯ ಸದಸ್ಯರು ಯಾವುದೇ ಕಾಳಜಿಯನ್ನು ಮಾಡುವುದು ಅನವಶ್ಯಕ ಎಂದು ಹೇಳಬಯಸುತ್ತೇನೆ.

**ಶ್ರೀ ನಿರಾಣಿ ಹಣಮಂತ ರುದ್ರಪ್ಪ:–** ಮಾನ್ಯ ಸಭಾಪತಿಯವರೆ, ರೈತರ ಸಾಲ ಮನ್ನಾ ಮಾಡಿರುವುದಕ್ಕಾಗಿ ನಾವು ಸರ್ಕಾರವನ್ನು ಅಭಿನಂದಿಸುತ್ತೇವೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೆ, ಅಭಿನಂದನೆಯನ್ನು ಸಲ್ಲಿಸುವುದರ ಜೊತೆಯಲ್ಲಿ ಷರತ್ತುಗಳನ್ನು ಕಡಿಮೆಗೊಳಿಸಬೇಕೆಂದು ಒತ್ತಾಯಿಸುತ್ತೇವೆ.

**ಶ್ರೀ ಬಂಡೆಪ್ಪ ಕಾಶೆಂಪೂರ:–** ಮಾನ್ಯ ಸಭಾಪತಿಯವರೆ, ಅವು ಷರತ್ತುಗಳೇ ಅಲ್ಲ. ಹೆಸರು, ತಂದೆ ಹೆಸರು ಈ ರೀತಿಯ ಮಾಹಿತಿಗಳನ್ನು ಕೇಳುವುದು ಷರತ್ತುಗಳೇ?

**ಶ್ರೀ ನಿರಾಣಿ ಹಣಮಂತ ರುದ್ರಪ್ಪ:–** ಮಾನ್ಯ ಸಭಾಪತಿಯವರೆ, ಈಗ ಒಬ್ಬ ರೈತ Income Tax Payee ಹೌದೋ ಅಥವಾ ಅಲ್ಲವೋ ಎಂದು ಕೇಳುವುದು ಷರತ್ತೋ ಅಥವಾ ಮಾಹಿತಿಯೋ? ಅವನು ಈಗಾಗಲೇ PKPS (Prathamika Krushi Pattina Sahakara Sangha Niyamitha) ನಲ್ಲಿ ಅಥವಾ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ಅಥವಾ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ 10–20 ಸಾವಿರ ನಿಶ್ಚಿತ ಠೇವಣಿಯನ್ನು ಇಟ್ಟಿದ್ದರೆ ಅವನ ಸಾಲ ಮನ್ನಾ ಆಗುವುದಿಲ್ಲ ಎಂಬುದು ಷರತ್ತೋ ಅಥವಾ ಮಾಹಿತಿಯೋ? ಒಂದು ಕುಟುಂಬಕ್ಕೆ ಒಂದು ಲಕ್ಷ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೂಪಾಯಿಗಳು ಎಂದು ಹೇಳಲಾಗಿದೆ. ನಮ್ಮ ಮನೆಯಲ್ಲಿ ನಾಲ್ಕು ಜನ ಸಹೋದರರಿದ್ದೇವೆ. ನಾಲ್ಕು ಜನಕ್ಕೆ ಬೇರೆ ಬೇರೆಯಾಗಿ ಕೊಡಲಾಗುವುದೋ ಅಥವಾ ನಾಲ್ಕೂ ಜನರನ್ನು ಸೇರಿಸಿ ಕೊಡಲಾಗುವುದೋ?

**ಶ್ರೀ ಬಂಡೆಪ್ಪ ಕಾಶೆಂಪೂರ:-** ಮಾನ್ಯ ಸಭಾಪತಿಯವರೆ, ಅದು ಬಹಳ valid point ಇದೆ. ನಾಲ್ಕು ಮಂದಿ ಅಣ್ಣ ತಮ್ಮಂದಿರಿದ್ದೇವೆಂದು ಮಾನ್ಯ ಸದಸ್ಯರು ಹೇಳಿದರು. ಅವರು declaration ನಲ್ಲಿ ಒಂದು Affidavit ಹಾಕಿ ಬಿಡಲಿ. ನಾವು dependent ಇಲ್ಲ, independent ಇದ್ದೇವೆಂದರೆ ನಾಲ್ಕಕ್ಕೆ ನಾಲ್ಕೂ ಮಂದಿಗೆ ದೊರೆಯುತ್ತದೆ.

**ಡಾ:ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಸಾಲ ಮನ್ನಾ ಸೌಲಭ್ಯವನ್ನು ಪಡೆಯಲು ಕುಟುಂಬಗಳು ಒಡೆಯಬೇಕೆ?

**ಶ್ರೀ ಬಂಡೆಪ್ಪ ಕಾಶೆಂಪೂರ:-** ಮಾನ್ಯ ಸಭಾಪತಿಯವರೆ, ಇದನ್ನು ತಪ್ಪಾಗಿ ಅರ್ಥೈಸಬಾರದು. ಇದರಲ್ಲಿ ಯಾವುದೂ ಷರತ್ತುಗಳಲ್ಲ. ಕುಟುಂಬ ಎಂದು ಹೇಳಲಾಗಿದೆ. ಕುಟುಂಬ ಎಂದರೆ ಅದರಲ್ಲಿ ಮುಖ್ಯವಾಗಿ ಪತಿ, ಪತ್ನಿ ಹಾಗೂ ಅವಲಂಬಿತರು ಎಂದು ವಿವರಿಸಲಾಗಿದೆ. Practical ಆಗಿ ಹೋದಾಗ ಅದು ಬಹಳ ಕಡಿಮೆ ಬರುತ್ತದೆ. ಎಲ್ಲಾ ಸೇರಿದರೆ ಒಂದು ನಾಲ್ಕೈದು ಪರ್ಸೆಂಟ್ ಬರಬಹುದು. ಅವಲಂಬಿತರಿಲ್ಲದೆ, ತಮ್ಮ ತಮ್ಮ ವ್ಯವಸಾಯವನ್ನು ಮಾಡಿಕೊಳ್ಳುತ್ತಿರುವವರಿಗೆ ಯಾರಿಗೂ ತೊಂದರೆಯಾಗುವುದಿಲ್ಲ. ರಾಜ್ಯ ಸರ್ಕಾರ ಇದನ್ನು ಬಹಳ ಮುಕ್ತವಾಗಿ ತಂದಿದೆ. ಬಹಳ ಧಾರಾಳವಾಗಿಯೇ ನಾವು ಮಾಡುತ್ತೇವೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, ಅಖಂಡ ಬೆಳಗಾವಿ ಜಿಲ್ಲೆ, ಅಖಂಡ ವಿಜಯಪುರ ಜಿಲ್ಲೆ ಅಥವಾ ಧಾರವಾಡ ಜಿಲ್ಲೆ ಇರಬಹುದು. ಇಲ್ಲಿರುವ ರೈತನ ಮುಖ್ಯ ಕಸುಬು ಕಬ್ಬು ಬೆಳೆಯುವುದು. ಕಬ್ಬು ಬೆಳೆಯುವಂತಹ ಪ್ರತಿಯೊಬ್ಬ ರೈತನಿಗೂ ಪ್ರತಿ ವರ್ಷ ಕನಿಷ್ಠ 50 ಸಾವಿರದಿಂದ 1 ಲಕ್ಷದವರೆಗೂ ಆದಾಯವಿರುತ್ತದೆ. Agriculturist is also an income-tax payer. ಅಂತಹವರಿಗೆ income-tax payee ಆಗಿರುವುದರಿಂದ ಸಾಲ ಮನ್ನಾ ಮಾಡುವುದಿಲ್ಲ ಎಂದು ಹೇಳಿದರೆ ಅವನು ಎಲ್ಲಿಗೆ ಹೋಗಬೇಕು.

**ಶ್ರೀ ಬಂಡೆಪ್ಪ ಕಾಶೆಂಪೂರ:-** ಮಾನ್ಯ ಸಭಾಪತಿಯವರೆ, ಕೃಷಿಯಿಂದ ಎಷ್ಟೇ ಆದಾಯ ಬಂದಿದ್ದರೂ ಅದು ಆದಾಯ ತೆರಿಗೆಗೆ ಒಳಪಡುವುದಿಲ್ಲ. ನಾನು ಒಬ್ಬ ಕೃಷಿಕ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಿಗೆ ಇದರ ಬಗ್ಗೆ ತಪ್ಪು ಕಲ್ಪನೆ ಇದೆ.

**ಶ್ರೀ ನಿರಾಣಿ ಹಣಮಂತ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ಕೃಷಿಕರಿಗೂ ಆದಾಯ ತೆರಿಗೆ ಮಿತಿ ಇದೆ. More than 10 lakhs income ಇದ್ದರೆ, income-tax pay ಮಾಡಬೇಕು.

**ಶ್ರೀ ಬಂಡೆಪ್ಪ ಕಾಶೆಂಪೂರ:-** ಮಾನ್ಯ ಸಭಾಪತಿಯವರೆ, Agriculture ಬಿಟ್ಟು ಬೇರೆ ವ್ಯವಹಾರಗಳಿದ್ದರೆ ಅದು ಸೇರುತ್ತದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಲ್ಲಿ ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ. ಸರ್ಕಾರ ರೂ.2 ಲಕ್ಷದವರೆಗೆ ಸಾಲ ಮನ್ನಾ ಮಾಡುತ್ತದೆ ಎಂದು ಹೇಳಿದ್ದಾರೆ. ಯಾರಿಗೆ ರೂ.2 ಲಕ್ಷಕ್ಕಿಂತಲೂ ಹೆಚ್ಚಿಗೆ ಸಾಲ ಇದೆಯೋ ಅಂದರೆ 4, 5, 6 ಲಕ್ಷ ಈ ರೀತಿ ಇದೆಯೋ, ಅದನ್ನು ರೂ.2 ಲಕ್ಷಕ್ಕೆ ಇಳಿಸುವುದಕ್ಕಾಗಿ ಪುನಃ ಸಾಲ ಮಾಡಿ ಬ್ಯಾಂಕಿಗೆ ತುಂಬುತ್ತಿದ್ದಾರೆ. ಪುನಃ ಸಾಲಗಾರನಾಗಿ ಸಾಲ ಹೆಚ್ಚಾಗಿದೆ. ಸರ್ಕಾರ 24 ಗಂಟೆಗಳಲ್ಲಿ ಮನ್ನಾ ಮಾಡುತ್ತೇವೆಂದು ಹೇಳಿ ಆರು ತಿಂಗಳಾಯಿತು. ಸಾಲ ಮನ್ನಾ ಮಾಡುವುದರೊಳಗೆ ಮತ್ತೆ ಬಡ್ಡಿ ಕಟ್ಟಬೇಕು. ಯಾವ ಬ್ಯಾಂಕಿನವರೂ ಸಾಲವನ್ನು ಕೊಡುವುದಿಲ್ಲ. ಖಾಸಗಿಯಲ್ಲಿ ಸಾಲ ಮಾಡುವುದರಿಂದ ಅವನಿಗೆ ಸಾಲ ಹೆಚ್ಚಾಗಿದೆ. ಇದು ಷರತ್ತಲ್ಲವೆ? ಇದಕ್ಕೆ ಸರ್ಕಾರ ಏನು ಮಾಡುತ್ತದೆ?

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಲ್ಲಿ ನನ್ನ ಮನವಿ ಇಷ್ಟೇ. Income-tax or Deposits, ಈ ವಿಷಯವನ್ನಿಟ್ಟುಕೊಂಡು ರೈತರ ಸಾಲ ಮನ್ನಾವನ್ನು ಕಡಿತಗೊಳಿಸುವಂತಹ ಕೆಲಸವನ್ನು ಸರ್ಕಾರ ಮಾಡಬಾರದು. ಏಕೆಂದರೆ ಬೆಳಗಾವಿ ಜಿಲ್ಲೆಯ ವಾಣಿಜ್ಯ ಬೆಳೆ ಕಬ್ಬು.

**ಶ್ರೀ ಬಂಡೆಪ್ಪ ಖಾಶೆಂಪೂರ:-** ಮಾನ್ಯ ಸಭಾಪತಿಯವರೆ, ಅವರು ಹೇಳಿದಂತಹ deposit ವಿಷಯ ಮೊದಲು ಷರತ್ತುಗಳಲ್ಲಿತ್ತು. ತಮಗೆ ತಿಳಿದಂತೆ ರೈತರು ಮದುವೆಗೋಸ್ಕರ ಈ ರೀತಿಯಾಗಿ ಇಟ್ಟ ಠೇವಣಿಗಳನ್ನು 15 ದಿನಗಳೊಳಗಾಗಿ ಬಿಡುಗಡೆ ಮಾಡಿರುತ್ತೇವೆ. Deposit ಗೆ ಹಾಗೂ ಇದಕ್ಕೆ ಸಂಬಂಧವಿಲ್ಲ. ಉಳಿದಂತೆ ಯಾರು ಬಿಸಿನೆಸ್ ಮಾಡುತ್ತಿರುತ್ತಾರೆಯೋ....

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, ಬಿಸಿನೆಸ್ ಬಗ್ಗೆ ನಮ್ಮ ಅಭ್ಯಂತರವಿಲ್ಲ. ಕೃಷಿ ಆಧಾರಿತ ಆದಾಯ ತೆರಿಗೆ ಇದ್ದರೆ ಅದು applicable ಆಗಬೇಕೆಂಬುದು ನಮ್ಮ ಉದ್ದೇಶ.

**ಶ್ರೀ ನಿರಾಣಿ ಹಣಮಂತ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ನಾವು ಯಾರೂ ಆರೋಪ ಮಾಡುತ್ತಿಲ್ಲ. ಅವರು ಸಾಲ ಮನ್ನಾ ಮಾಡಿರುವುದನ್ನು ನಾವು ಸ್ವಾಗತ ಮಾಡಿದ್ದೇವೆ. ಅದು ಸಮರ್ಪಕವಾಗಿ ಎಲ್ಲರಿಗೂ ಮುಟ್ಟಬೇಕಾದರೆ ಸರಳೀಕರಣ ಮಾಡಬೇಕಾಗುತ್ತದೆ. ಹಿಂದೆ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ರೂ.50,000/- ಸಾಲ ಮನ್ನಾ ಮಾಡಿದರು. ಮಾನ್ಯ ಜಗದೀಶ್ ಶೆಟ್ಟರ್ ಅವರು ಇದ್ದಾಗ ಎರಡು ಬಾರಿ ರೂ.25,000/-, ಒಂದು ಬಾರಿ ರೂ.50,000/- ಮನ್ನಾ ಮಾಡಿದರು.

(ಮುಂದುವರೆದಿದೆ...)

(470) 14.12.2018 (1.50) ಕೆಜಿ.ಬಿಎನ್ಎಸ್

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಮುಂದುವರೆದುದು..)**

ಮಾನ್ಯ ಸಭಾಪತಿಯವರೇ, ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಎರಡು ಬಾರಿ ರೈತರ ಬೆಳೆ ಸಾಲವಾದ 25 ಸಾವಿರ ರೂಪಾಯಿಗಳನ್ನು ಮತ್ತು ಒಂದು ಬಾರಿ 50 ಸಾವಿರ ರೂಪಾಯಿಗಳವರೆಗೆ ಸಾಲ ಮನ್ನಾ ಮಾಡಿದ್ದರು. ಆದರೆ, ಯಾವುದೇ ಕಾಗದ ಪತ್ರಗಳನ್ನು ಕೇಳಿರಲಿಲ್ಲ. ಮಾನ್ಯ ಸಚಿವರು, Nationalised Banks ಮತ್ತು Co-operative Banks ಎರಡರಲ್ಲಿರುವಂತಹ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ.

**ಶ್ರೀ ಬಂಡೆಪ್ಪ ಖಾಶೆಂಪುರ:-** ಮಾನ್ಯ ಸಭಾಪತಿಯವರೆ, ರೈತರ ಬೆಳೆ ಸಾಲವನ್ನು ಕಳೆದ ವರ್ಷ 8,000 ಕೋಟಿ ರೂಪಾಯಿಗಳನ್ನು ಮತ್ತು ಈ ವರ್ಷ 9,000 ಕೋಟಿ ಸಾವಿರ ರೂಪಾಯಿಗಳನ್ನು ಎರಡು ಬಾರಿ Co-operative Banks ನಲ್ಲಿದ್ದ ಸಾಲವನ್ನು ಮನ್ನಾ ಮಾಡಿದ್ದೇವೆ. ಇಡೀ ದೇಶದಲ್ಲಿಯೇ ಈ ರೀತಿ ಯಾರು ಮಾಡಿದ್ದಾರೆ ಎಂಬುದ್ನು ಮಾನ್ಯ ಸದಸ್ಯರು ಹೇಳಲಿ?

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಮಾಡಿರುವುದಕ್ಕೆ ನಮ್ಮ ತಕಾರಾರು ಇಲ್ಲ. ದಯವಿಟ್ಟು ಮಾಡುವುದರಲ್ಲಿ ಸರಳೀಕರಣ ಮಾಡಬೇಕು. ನಾನು ಸಹ D.C.C. (District Co-operative Central) Bank ನಲ್ಲಿ ಕಳೆದ 10 ವರ್ಷಗಳಿಂದ ನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಂಡೆಪ್ಪ ಖಾಶೆಂಪುರ:-** ಮಾನ್ಯ ಸಭಾಪತಿಯವರೆ, ಎಲ್ಲಾ ಸರಳೀಕರಣ ಆಗಿದೆ. ಈಗ ಯಾವುದೇ ತೊಂದರೆ ಇಲ್ಲ. ಒಂದು ವೇಳೆ ಇದ್ದರೆ, ಏನೇನು ಸಮಸ್ಯೆಗಳು ಇವೆ ಅವುಗಳನ್ನು ಬಗೆಹರಿಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ರೈತರು ಬ್ಯಾಂಕಿನಲ್ಲಿ ಠೇವಣಿ ಇಟ್ಟಿದ್ದರೆ ಅಂತಹವರ ಸಾಲ ಮನ್ನಾ ಮಾಡುತ್ತಿಲ್ಲ. ಆದರೆ, ಬ್ಯಾಂಕ್‌ಗಳಲ್ಲಿ ಠೇವಣಿ ಇಡದಿದ್ದರೆ ಬ್ಯಾಂಕುಗಳನ್ನು ನಡೆಸುವುದು ಕಷ್ಟವಾಗುತ್ತದೆ.

**ಶ್ರೀ ಬಂಡೆಪ್ಪ ಖಾಶೆಂಪುರ:-** ಮಾನ್ಯ ಸಭಾಪತಿಯವರೇ, ನಾವು Deposits ಅನ್ನು ಆಗಲೇ ತೆಗೆದಿದ್ದೇವೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ಅದನ್ನು ತೆಗೆದಿದ್ದರೆ ಆ ಬಗ್ಗೆ ಸುತ್ತೋಲೆಯನ್ನು ಕೊಡಲಿ.

**ಶ್ರೀ ಬಂಡೆಪ್ಪ ಖಾಶೆಂಪುರ:-** ಮಾನ್ಯ ಸಭಾಪತಿಯವರೆ, ಅದನ್ನು ಆಗಲೇ ಕಳುಹಿಸಿ ಕೊಟ್ಟಿದ್ದೇವೆ. ಈಗ ಅಲ್ಲ. ಮತ್ತೆ ಯಾರು ತೆಗೆಯುತ್ತಿಲ್ಲ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಋಣಮುಕ್ತ ಪತ್ರವನ್ನು ಕೊಡುತ್ತಿದ್ದಾರೆ. ನನ್ನದು 10 ಲಕ್ಷ ರೂಪಾಯಿ ಸಾಲ ಇದೆ. ಮಾನ್ಯ ಸಚಿವರು ಒಂದು ಲಕ್ಷ ರೂಪಾಯಿಗಳ ಸಾಲ ಮನ್ನಾ ಮಾಡುತ್ತಿದ್ದಾರೆ. ಅದರಿಂದ ನಾನು ಸಾಲದಿಂದ ಋಣಮುಕ್ತನಾಗುತ್ತೇನೆಯೇ?

**ಶ್ರೀ ಬಂಡೆಪ್ಪ ಖಾಶೆಂಪುರ:-** ಮಾನ್ಯ ಸಭಾಪತಿಯವರೆ, ನಮ್ಮ ಕರ್ನಾಟಕದಲ್ಲಿ ಇಂತಹ ಶ್ರೀಮಂತರು ಎಷ್ಟು ಮಂದಿ ಇದ್ದಾರೆಂದು ಮಾನ್ಯ ಸದಸ್ಯರನ್ನು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ಕೇವಲ ಒಂದು ಲಕ್ಷ ಸಾಲ ಮನ್ನಾ ಮಾಡಿದರೆ ರೈತ ಋಣಮುಕ್ತನಾಗುವುದಿಲ್ಲ. ಉಳಿದ ಹಣಕ್ಕೆ ಆ ರೈತನೇ ಜವಾಬ್ದಾರನಾಗುತ್ತಾನೆ. ರೈತರ ಸಂಪೂರ್ಣ ಸಾಲ ಮನ್ನಾವಾದರೆ ಮಾತ್ರ ರೈತ ಋಣಮುಕ್ತನಾಗುತ್ತಾನೆ.

(ಗೊಂದಲ)

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಬಂಡೆಪ್ಪ ಖಾಶೆಂಪುರ:-** ಮಾನ್ಯ ಸಭಾಪತಿಯವರೆ, ಸುಮಾರು 22 ಲಕ್ಷ ರೈತರು ಇದ್ದಾರೆ. ಐದು ಲಕ್ಷ ರೈತರ 25 ಸಾವಿರ ರೂಪಾಯಿಗಳ ಸಾಲ ಮನ್ನಾ ಮಾಡಿದ್ದೇವೆ.

(ಗೊಂದಲ)

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ಒಂದು ಲಕ್ಷ ಸಾಲ ಮನ್ನಾ ಮಾಡಿರುವುದಕ್ಕೆ ಪ್ರಮಾಣ ಪತ್ರ ಕೊಡಲಿ. ದಯವಿಟ್ಟು ಸಂಪೂರ್ಣ ಸಾಲ ಮನ್ನಾ ಮಾಡಿ, ಆಗ ಮಾತ್ರ ರೈತ ಋಣಮುಕ್ತನಾಗುತ್ತಾನೆ.

(ಗೊಂದಲ)

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೆ, ನಿರಾಣಿ ಹಣಮಂತ್ ರುದ್ರಪ್ಪನವರು ನಾಲ್ಕು ಜನ ಅಣ್ಣ ತಮ್ಮಂದಿರು ಈಗಾಗಲೇ Affidavit ಅನ್ನು ಹಾಕಿಕೊಂಡಿದ್ದಾರೆ. ಬೇರೆ ಬೇರೆ income ನಿಂದ....

**ಸಭಾಪತಿಯವರು:-** ಮಾನ್ಯ ಕವಟಗಿಮಠರವರೆ, ತಾವೀಗ ಮಾತನಾಡಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧ ಪಕ್ಷದ ಸಚೇತಕರರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಅಧಿಕಾರಿಗಳು ನಮ್ಮ ವಿರೋಧ ಪಕ್ಷದ ನಾಯಕರಿಗೆ ಒಂದು ಪತ್ರವನ್ನು ಕೊಟ್ಟಿದ್ದಾರೆ. ಸಾಲ ಮನ್ನಾವನ್ನು ಯಾವ ಹಂತದಲ್ಲಿ ಮಾಡುತ್ತೀರಾ, ಯಾವ ರೀತಿ ಮಾಡುತ್ತೀರಾ, ಸಂಪೂರ್ಣ ಸಾಲ ಮನ್ನಾ ಒಮ್ಮೆ ಮಾಡುತ್ತೀರಾ ಅಥವಾ ಒಂದು ವರ್ಷದಲ್ಲಿ ಮಾಡುತ್ತೀರಾ ಎನ್ನುವಂತಹ ಪ್ರಶ್ನೆಯನ್ನು ಕೇಳಿದಾಗ, ನಮ್ಮ ವಿಧಾನಸಭೆಯ ವಿರೋಧಪಕ್ಷದ ನಾಯಕರು ಆಗಿರುವಂತಹ ಮಾನ್ಯ ಬಿ.ಎಸ್.ಯಡಿಯೂರಪ್ಪನವರಿಗೆ ಒಂದು ಪತ್ರವನ್ನು ಕೊಟ್ಟಿದ್ದಾರೆ. ಆ ಪತ್ರದಲ್ಲಿ 4 ವರ್ಷದಲ್ಲಿ ರೈತರ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಉತ್ತರವನ್ನು ಅಧಿಕಾರಿಗಳು ಕೊಟ್ಟಿದ್ದಾರೆ. ಮಾನ್ಯ ಸಭಾಪತಿಯವರೇ, ಇದರ ಪತ್ರಿ ನನ್ನ ಬಳಿ ಇದೆ. ಇದನ್ನು ತಮಗೆ ಕಳುಹಿಸಿ ಕೊಡುತ್ತೇನೆ.

**ಶ್ರೀ ಬಂಡೆಪ್ಪ ಖಾಶೆಂಪುರ:-** ಮಾನ್ಯ ಸಭಾಪತಿಯವರೆ, ನಾನು ಸ್ಪಷ್ಟವಾಗಿ ತಮಗೆ ಹೇಳುವುದಕ್ಕೆ ಬಯಸುತ್ತೇನೆ. ನಾವು ಏನು ಗಡವು ಕೊಟ್ಟಿದ್ದೇವೆ, ಅದರಲ್ಲಿಯೂ ರೈತರ renewal period ಪ್ರಕಾರ ಎಂದು ಹೇಳಿದ್ದೇವೆ. ಮುಂದಿನ ಜುಲೈ ತಿಂಗಳಿನವರೆಗೆ ಸಂಪೂರ್ಣ 20,38,000 ಜನ ರೈತರ ಸಾಲ ಮನ್ನಾ ಆಗುತ್ತದೆ. ನಾನು Co-

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

operative Banks ವಿಚಾರವಾಗಿ ಮಾತನಾಡುತ್ತಿರುವುದು. Nationalised Banks ಗೆ ಸಂಬಂಧಿಸಿದಂತೆ 22 ಲಕ್ಷ ಜನ ರೈತರು ಇದ್ದಾರೆ. ಇದರಲ್ಲಿ confusion ಮಾಡಿಕೊಳ್ಳುವಂತಿಲ್ಲ. ಇದರಲ್ಲಿ ಏನಾದರೂ clarity ಬೇಕಾದರೆ, ನಾನು ಕೊಡುತ್ತೇನೆ.

**ಸಭಾಪತಿಯವರು:–** ಮಾನ್ಯ ಕವಟಗಿಮಠರವರೇ, ಬೇಗ ಮಾತನಾಡಿ ಮುಗಿಸಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧ ಪಕ್ಷದ ಮುಖ್ಯ ಸಚೇತಕರರು):–** ಮಾನ್ಯ ಸಭಾಪತಿಯವರೆ, ಇನ್ನು 10 ನಿಮಿಷಗಳಲ್ಲಿ ಮುಗಿಸುತ್ತೇನೆ. ಮಾನ್ಯ ಸಚಿವರು ಈ ವಿಚಾರದ ಬಗ್ಗೆ ಬಹಳ ಸ್ಪಷ್ಟೀಕರಣವನ್ನು ನೀಡಿದ್ದಾರೆ. ಹಾಗಾಗಿ, ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ಉಪ ಮುಖ್ಯಮಂತ್ರಿಗಳು ಇವತ್ತು ಸದನದಲ್ಲಿ ಇದ್ದಾರೆ. ಹಾಗಾಗಿ, ಅವರ ಗಮನಕ್ಕೆ ಎರಡು–ಮೂರು ವಿಷಯಗಳನ್ನು ತರುವುದಕ್ಕೆ ಇಷ್ಟಪಡುತ್ತೇನೆ. ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಎನ್ನುವುದು ಅತ್ಯಂತ ಮಹತ್ವಾಕಾಂಕ್ಷಿ ಯೋಜನೆ. ಮಾನ್ಯ ಪ್ರಧಾನ ಮಂತ್ರಿಗಳಾಗಿರುವಂತಹ ಶ್ರೀ ನರೇಂದ್ರ ಮೋದಿಯವರು ಇದನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಸಹಯೋಗದಲ್ಲಿ ತಂದಿರುವಂತಹ ಯೋಜನೆಯಾಗಿದೆ. ಇವತ್ತು ಜಾರಿಗೆ ಬಂದಿರುವಂತ ಈ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಇಡೀ ರಾಜ್ಯದಲ್ಲಿರುವಂತಹ ರೈತರು ಅವರು ಬೆಳೆದಂತಹ ಬೆಳೆಗೆ insurance ಅನ್ನು ಮಾಡಬೇಕು. ಆ ಬೆಳೆ failure ಆದಾಗ ರೈತರಿಗೆ ಸಂಪೂರ್ಣ ರಕ್ಷಣೆ ಸಿಗಬೇಕು ಎಂಬ ಉದ್ದೇಶದಿಂದ ತಂದಿರುವಂತಹ ಯೋಜನೆ. ಆದರೆ, ಏನಾಗುತ್ತದೆ ಎಂದರೆ, ಅನೇಕ ಸಂದರ್ಭಗಳಲ್ಲಿ ಸರ್ಕಾರಿ ಕ್ಷೇತ್ರ ಇರಬಹುದು ಅಥವಾ ಖಾಸಗೀ ಕ್ಷೇತ್ರ ಇರಬಹುದು, ಇದು ಸರಿ ಇಲ್ಲ ಎನ್ನುವಂತಹ ಭಾವನೆ ಬರುತ್ತಿದೆ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಅತ್ಯಂತ ಯಶ್ವಸಿಯಾದಂತಹ ಒಂದು ಯೋಜನೆ. Single farmer ಸಹಿತ ಇದರಲ್ಲಿ claim ಮಾಡುವುದಕ್ಕೆ ಅವಕಾಶ ಇದೆ. ಮೊದಲು ಇಡೀ ಹೋಬಳಿಯಲ್ಲಿ crop failure ಆದರೆ ಮಾತ್ರ ಆ ಭಾಗದಲ್ಲಿರುವಂತಹ ರೈತರಿಗೆ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಿಂದ ಲಾಭ ಸಿಗುತ್ತಿತ್ತು. ಆದರೆ, ಈಗ ಆ ರೀತಿ ಆಗುತ್ತಿಲ್ಲ. An individual farmer also can claim the benefits under the Scheme. ಆದರೆ, ಇಲ್ಲಿ ಆಗಿರುವಂತಹ ತೊಂದರೆ ಏನೆಂದರೆ, implement ಮಾಡುವಂತಹ Agency, ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದಲ್ಲಿ ಆಗುವಂತಹ ಯೋಜನೆ ಆಗಿರುವುದರಿಂದ ಅಧಿಕಾರಿಗಳಿಗೆ ಸ್ಪಷ್ಟವಾದಂತಹ ಆದೇಶಗಳನ್ನು ಕೊಡಬೇಕು. ನಾವು ಇದರ ಬಗ್ಗೆ ಹೆಚ್ಚು ಪ್ರಚಾರವನ್ನು ಮಾಡಬೇಕಾಗಿದೆ. ರಾಜ್ಯ ಸರ್ಕಾರ 40%, ಕೇಂದ್ರ ಸರ್ಕಾರ 40% ಮತ್ತು ರೈತರು 20% ಹಣ ತುಂಬುವಂತಹ ಯೋಜನೆಯಾಗಿದೆ. ಮೊನ್ನೆ ನಮ್ಮ ಜಿಲ್ಲೆಯಲ್ಲಿ ತರಿಸಿರುವಂತಹ ಮಾಹಿತಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪ್ರಕಾರ, 2016-2017ನೇ ಸಾಲಿನಲ್ಲಿ ಒಟ್ಟು 2,04,251 ರೈತರು ಇದರ ಕೆಳಗಡೆ enroll ಮಾಡಿದ್ದಾರೆ. Area Insured – 2,58,638 Hectares. Farmers' share – Rs.10,87,00,00/-, ರಾಜ್ಯ ಸರ್ಕಾರದ ಷೇರು ರೂ.46.75 ಕೋಟಿ, ಕೇಂದ್ರ ಸರ್ಕಾರದ ಷೇರು ರೂ.46.75 ಕೋಟಿ ಇದೆ. Claims approved is Rs.108.13 Crores. Eligible farmers who are benefitted are 18,597. ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಕೆಲವೊಂದು Insurance Company ಗಳು ಯಾವುದೇ ಸರ್ಕಾರ ಇರಬಹುದು, ನಾನು ಈ ಸರ್ಕಾರ ಬಂದ ನಂತರ ಬೇಕಾಗಿ ಇದನ್ನು ಮಾಡುತ್ತಿದ್ದಾರೆಂದು ಆರೋಪ ಮಾಡುವುದಕ್ಕೆ ಹೋಗುವುದಿಲ್ಲ. ಕೃಷಿ ಅಧಿಕಾರಿಗಳು ಇದರಲ್ಲಿ ಬಹಳ ಜಾಗರೂಕತೆಯಿಂದ ಯಾರು Insurance Companies and Agencies ಅನ್ನು fix ಮಾಡುವುದು, Implementing Agency ಯಾರು? ರಾಜ್ಯ ಸರ್ಕಾರ Implementing Agency. ತಾವು Insurance Company ಗಳನ್ನು ಆಯ್ಕೆ ಮಾಡುವಂತಹ ಸಂದರ್ಭದಲ್ಲಿ ಬಹಳ ಜಾಗರೂತೆಯಿಂದ ಯಾರು ರೈತರ ಪರವಾಗಿ ಇದ್ದಾರೆ, ಯಾರದು track record ಚೆನ್ನಾಗಿದೆ, ಯಾರು ನಿಜವಾಗಿಯೂ ರೈತರನ್ನು ರಕ್ಷಣೆ ಮಾಡುತ್ತಾರೆ ಅಂತಹ ಕಂಪನಿಗಳನ್ನು ಮಾತ್ರ ಆಯ್ಕೆ ಮಾಡಬೇಕು. ಯಾರು ರೈತರಿಗೆ ಟೋಪಿ ಹಾಕುವಂತಹ ಕೆಲಸವನ್ನು ಮಾಡುತ್ತಾರೆ ಅಂತಹ Insurance Company ಗಳನ್ನು black list ನಲ್ಲಿ ಇಡಬೇಕು. ಅಂತಹ ಕಂಪನಿಗಳನ್ನು ಹೊರಗೆ ಇಡಬೇಕು. ಆಗ ಮಾತ್ರ ಈ ಯೋಜನೆ ಯಶ್ವಸಿಯಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಯವರೇ, ಈ ಒಂದು ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ರೈತರನ್ನು ಸಂರಕ್ಷಣೆ ಮಾಡುವಂತಹ ವಿಚಾರದಲ್ಲಿ ಮಾನ್ಯ ಸಚಿವರು ಗಮನ ಹರಿಸಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ಮಾನ್ಯ ಕಂದಾಯ ಸಚಿವರಾದ ಆರ್.ವಿ. ದೇಶಪಾಂಡೆಯವರು ನಿನ್ನೆ ದಿವಸ ಸದನದಲ್ಲಿದ್ದರು. ನಾವು ಕೇಳುವಂತಹ ವಿಚಾರ ಏನೆಂದರೆ, ಕೇಂದ್ರ ಸರ್ಕಾರದ NDRF (National Disaster Response Force) Norms ನ ಅಡಿಯಲ್ಲಿ ಕೆಲವೊಂದು Guidelines ಅನ್ನು ಕೊಟ್ಟಿದ್ದಾರೆ. ಆ ಪ್ರಕಾರ, ಸಂಪೂರ್ಣ ಬರ ಇರುವಂತಹ ತಾಲ್ಲೂಕುಗಳನ್ನು ಬರಪಡೀತ ತಾಲ್ಲೂಕುಗಳೆಂದು ಘೋಷಣೆ ಮಾಡುತ್ತಾರೆ. because of the Guidelines given by the Government of India. ಅದನ್ನು ನಾವು ಇವತ್ತು ಪ್ರಶ್ನೆ ಮಾಡುತ್ತಿಲ್ಲ. ಒಂದು ಸಣ್ಣ ಉದಾರಣೆಗಾಗಿ ಚಿಕ್ಕೋಡಿ ತಾಲ್ಲೂಕಿನ ನಾಗರಮುನೊಳಿ ಹೋಬಳಿಯನ್ನು ತೆಗೆದುಕೊಂಡಾಗ, ಅಲ್ಲಿ ಮಳೆ ಸಂಪೂರ್ಣವಾಗಿಲ್ಲ. ಅವರು ಏನು ಹೇಳುತ್ತಾರೆಂದರೆ, moisture content ಇದೆ. ಅದಕ್ಕಾಗಿ ನಾವು ಆ ಹೋಬಳಿಯನ್ನು ನಾವು consider ಮಾಡುವುದಿಲ್ಲವೆಂದು ಹೇಳುತ್ತಾರೆ. ಇವತ್ತು ಇಡೀ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಯಬಾಗ ತಾಲ್ಲೂಕು ಸಂಪೂರ್ಣ ಬರಪೀಡಿತವಾಗಿದೆ. ಪಕ್ಕದಲ್ಲಿಯೇ ಇರುವಂತಹ ಚಿಕ್ಕೋಡಿ ತಾಲ್ಲೂಕಿನ ಆ ಹೋಬಳಿ ಸಹ ಸಂಪೂರ್ಣ ಬರಗಾಲವನ್ನು ಎದರಿಸುತ್ತಿದೆ. ಆದರೆ, ಕೇಂದ್ರ ಸರ್ಕಾರದ Guidelines ನಡಿ ಆ ತಾಲ್ಲೂಕನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂಬ ಮಾತನ್ನು ಹೇಳಿದ್ದಾರೆ. ನಾನು ಮಾನ್ಯ ಸಭಾಪತಿಯವರ ಮುಖಾಂತರ ಮಾನ್ಯ ಸಚಿವರಿಗೆ ವಿನಂತಿ ಮಾಡುವುದಕ್ಕೆ ಬಯಸುತ್ತೇನೆ. ಕೇಂದ್ರ ಸರ್ಕಾರದ Guidelines ಬಿಟ್ಟು ಸಹಿತ ಯಾವ ತಾಲ್ಲೂಕುಗಳು ಬರವನ್ನು ಎದುರಿಸುತ್ತಿದ್ದಾವೋ ಅಲ್ಲಿರುವಂತಹ ರೈತರ ಸಂರಕ್ಷಣೆಗೆ ನಮ್ಮ ರಾಜ್ಯ ಸರ್ಕಾರ ಮುಂದಾಗಬೇಕು ಎನ್ನುವಂತಹ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತಾ, ಬರವನ್ನು ಎದುರಿಸುವ ಸಂದರ್ಭದಲ್ಲಿ ನಾವೆಲ್ಲರೂ ಸಹ ಪಕ್ಷಾತೀತವಾಗಿ ರೈತರ ಸಂರಕ್ಷಣೆ ಮಾಡುವಲ್ಲಿ ಪ್ರಮುಖ ವಿರೋಧ ಪಕ್ಷವಾಗಿ ಬಿ.ಜೆ.ಪಿ. ತಮ್ಮನ್ನು ಬೆಂಬಲಿಸುತ್ತದೆ. ಸರ್ಕಾರ ಸಂಪೂರ್ಣವಾಗಿ ರೈತರ ರಕ್ಷಣೆ ಮಾಡುವಲ್ಲಿ ಮತ್ತು ರೈತರ ಸಾಲ ಮನ್ನಾ ಮಾಡುವಲ್ಲಿ ಮುತುವರ್ಜಿವಹಿಸಬೇಕೆಂಬ ಒತ್ತಾಯವನ್ನು ತಮ್ಮ ಮುಖಾಂತರ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತಿದ್ದೇನೆ.

**ಸಭಾಪತಿಯವರು:-** ಸದನವನ್ನು ದಿನಾಂಕ: 17.12.2018ರ ಸೋಮವಾರದಂದು ಬೆಳಿಗ್ಗೆ 11.30 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 1 ಗಂಟೆ 58 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ:17ನೇ ಡಿಸೆಂಬರ್ ಮಾಹೆ 2018 ರ ಸೋಮವಾರದಂದು ಬೆಳಿಗ್ಗೆ 11 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಿಯಿಸಿತು)**

**- - - -**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "